ಸೋಮವಾರ, ಸೆಪ್ಟೆಂಬರ್ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 265 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ಅಂತರ್ಮುಖಿ ವಿದ್ಯಾರ್ಥಿಗಳಿಗೆ ಕಲಿಸುವುದು ಹೇಗೆ?

ರಾಜಭವನದಿಂದಲೇ ಪತ್ರ ಸೋರಿಕೆ: ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರ್ಕಾವತಿ ಬಡಾವಣೆಗೆ ಸ್ವಾಧೀನಪಡಿಸಿದ್ದ ಜಮೀನು ಡಿನೋಟಿಫೈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಬರೆದ ಪತ್ರವು ರಾಜಭವನದಿಂದಲೇ ಸೋರಿಕೆ ಆಗಿರಬಹುದು. ಈ ಬಗ್ಗೆ ತನಿಖೆಯಾಗಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ರಹಸ್ಯಮಾಹಿತಿಮತ್ತುಪತ್ರಗಳುಸೋರಿಕೆ ಯಾಗುತ್ತಿರುವ ಸಂಬಂಧ ರಾಜ್ಯಪಾಲರು ಇತ್ತೀಚೆಗೆ ಪ್ರಶ್ನೆ ಎತ್ತಿದ್ದರು.

2ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸ್ಥಗಿತ, ಬಾಕಿ ಮದ್ಯದಂಗಡಿಗಳ ಮರು ಹಂಚಿಕೆ ಪ್ರಸ್ತಾವ ಸಿದ್ಧಪಡಿಸಿದ ಇಲಾಖೆ

₹1,500 ಕೋಟಿ ಸಂಗ್ರಹ?

● ರಾಜೇಶ್ ರೈ ಚಟ್ಲ

ಬೆಂಗಳೂರು: ದೀರ್ಘ ಅವಧಿಯಿಂದ ನವೀಕರಣವಾಗದೆ ಸ್ಥಗಿತಗೊಂಡಿರುವ ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಸಂಸ್ಥೆ ಇನ್ನೂ ಆರಂಭಿಸದಿರುವ ಮದ್ಯದಂಗಡಿಗಳೂ ಸೇರಿ 500ಕ್ಕೂ ಹೆಚ್ಚು ಮದ್ಯದಂಗಡಿಗಳನ್ನು ಹರಾಜು ಅಥವಾ ಲಾಟರಿ ಎತ್ತುವ ಮೂಲಕ ಮರು ಹಂಚಿಕೆ ಮಾಡಲು ಅಬಕಾರಿ ಇಲಾಖೆ ಮುಂದಾಗಿದೆ.

ಆ ಮೂಲಕ, ಸುಮಾರು ₹1,500 ಕೋಟಿ ಸಂಪನ್ಮೂಲ ಕ್ರೋಡೀಕರಿಸುವ ಪ್ರಸ್ತಾವವನ್ನು ಇಲಾಖೆ ಸಿದ್ಧಪಡಿಸಿದ್ದು, ರಾಜ್ಯ ಸರ್ಕಾರಕ್ಕೆ ಶೀಘ್ರದಲ್ಲಿ ಸಲ್ಲಿಸಲಿದೆ.

'ಪ್ರಸಕ್ತ ಸಾಲಿನಲ್ಲಿ (2024-25) ಈವರೆಗೆ ನಿರೀಕ್ಷಿತ ಪ್ರಮಾಣದಲ್ಲಿ ವರಮಾನ ಸಂಗ್ರಹಿಸಲು ಇಲಾಖೆಗೆ ಸಾಧ್ಯವಾಗಿಲ್ಲ. ಹೀಗಾಗಿ, ಈಗಾಗಲೇ ಆರಂಭಗೊಂಡು ನಾನಾ ಕಾರಣಗಳಿಗೆ ಮುಚ್ಚಿರುವ ಮತ್ತು ಇನ್ನೂ ಆರಂಭವೇ ಆಗದ ಮದ್ಯದಂಗಡಿಗಳ ಪರವಾನಗಿಗಳಿಗೆ (ಸನ್ನದು) ಮರು ಜೀವ ನೀಡುವ ಕುರಿತು ಇಲಾಖಾ ಹಂತದಲ್ಲಿ ಚರ್ಚೆ ನಡೆದಿದೆ. ಸರ್ಕಾರಕ್ಕೆ ಸಲ್ಲಿಸಲು ಈಗಾಗಲೇ ಪ್ರಸ್ತಾವವನ್ನೂ ಸಿದ್ಧಪಡಿಸಲಾಗಿದೆ' ಎಂದು ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಾಜ್ಯದ ವಿವಿಧೆಡೆಗಳಲ್ಲಿರುವ ಕೆಲವು ಮದ್ಯದಂಗಡಿಗಳ ಪರವಾನಗಿ ಬೇರೆ ಬೇರೆ ಕಾರಣಗಳಿಗೆ ಹಲವು ವರ್ಷಗಳಿಂದ ನವೀಕರಣಗೊಂಡಿಲ್ಲ. ಅಂತಹ ಮದ್ಯದಂಗಡಿಗಳು ಯಾವ ಜಿಲ್ಲೆಯಲ್ಲಿ ಎಷ್ಟಿವೆ ಎಂಬ ಮಾಹಿತಿ ಸಂಗ್ರಹಿಸಿ, ಯಾವ ರೀತಿ ಮರು ಹಂಚಿಕೆ ಮಾಡಬೇಕೆಂಬ ಬಗ್ಗೆ ಪ್ರಸ್ತಾವವನ್ನು ತಯಾರಿಸಲಾಗಿದೆ. ಎಂಎಸ್‌ಐಎಲ್‌ಗೆ 2009 ಮತ್ತು 2016ರ ಕೋಟಾಗಳ ಅಡಿಯಲ್ಲಿ ಒಟ್ಟು 1,363 ಮದ್ಯದಂಗಡಿಗಳನ್ನು ತೆರೆಯಲು ಪರವಾನಗಿ ನೀಡಲು ಇಲಾಖೆ ತೀರ್ಮಾನಿಸಿತ್ತು. ಈ ಪೈಕಿ, 1,133 ಮದ್ಯದಂಗಡಿಗಳಿಗೆ ಮಂಜೂರಾತಿ ನೀಡಲಾಗಿದೆ. ಆದರೆ, ಅವುಗಳಲ್ಲಿ 41 ಸ್ಥಗಿತಗೊಂಡಿವೆ. ಎಂಎಸ್‌ಐಎಲ್‌ಗೆ ಇನ್ನೂ 230 ಮದ್ಯದಂಗಡಿಗಳಿಗೆ ಮಂಜೂರಾತಿ ನೀಡಲು ಬಾಕಿ ಇದೆ.

ಮದ್ಯದಂಗಡಿ– ಮರು ಹಂಚಿಕೆ ಪ್ರಸ್ತಾವ

ಎಂಎಸ್‌ಐಎಲ್‌ಗೆ ಒಟ್ಟು ನಿಗದಿ	1,363
ಎಂಎಸ್‌ಐಎಲ್‌ಗೆ ಮಂಜೂರು	1,133
ಎಂಎಸ್‌ಐಎಲ್‌ಗೆ ಮಂಜೂರಾಗಿ ಸ್ಥಗಿತ	41
ಎಂಎಸ್‌ಐಎಲ್‌ಗೆ ಮಂಜೂರಾತಿಗೆ ಬಾಕಿ	230
1987ರ ಕೋಟಾದಡಿ ಮಂಜೂರಾತಿಗೆ ಬಾಕಿ	133
ನಾನಾ ಕಾರಣಗಳಿಗೆ ಸ್ಥಗಿತಗೊಂಡವು (ಸಿಎಲ್ 2)	102
ಒಟ್ಟು (ಎಂಎಸ್‌ಐಎಲ್+ಸಿಎಲ್ 2)	506

ಸ್ಥಗಿತಗೊಂಡಿರುವ, ಹಂಚಿಕೆಯಾಗದೆ ಉಳಿದಿರುವ ಮದ್ಯದಂಗಡಿಗಳನ್ನು ಹರಾಜು ಮೂಲಕ ಮರು ಹಂಚಿಕೆ ಮಾಡುವ ಪ್ರಸ್ತಾವ ಸಿದ್ಧವಿದೆ. ಶೀಘ್ರದಲ್ಲೇ ತೀರ್ಮಾನ ತೆಗೆದುಕೊಳ್ಳುತ್ತೇವೆ

ಆರ್.ಬಿ. ತಿಮ್ಮಾಪುರ, ಅಬಕಾರಿ ಸಚಿವ

ಹರಾಜೋ? ಲಾಟರಿಯೋ?

ಸ್ಥಗಿತಗೊಂಡಿರುವ ಮದ್ಯಂಗಡಿಗಳ ನವೀಕರಣಕ್ಕೆ ಒಂದು ತಿಂಗಳ ಅವಕಾಶ ನೀಡಿ ನೋಟಿಸ್ ನೀಡಬೇಕೇ, ಬೇಡವೇ ಎಂಬ ಕುರಿತ ಪ್ರಸ್ತಾವವನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರ ಅನುಮೋದನೆ ನೀಡಿದ ಬಳಿಕ ಮರು ಹಂಚಿಕೆ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಈ ಮದ್ಯದಂಗಡಿಗಳನ್ನು ಹರಾಜು ಮೂಲಕ ಮರು ಹಂಚಿಕೆ ಮಾಡಬೇಕೇ ಅಥವಾ ಮೂಲ ದರ ನಿಗದಿಪಡಿಸಿ ಲಾಟರಿ ಎತ್ತಬೇಕೇ ಎಂಬ ಬಗ್ಗೆಯೂ ಚರ್ಚೆ ನಡೆದಿದ್ದು, ಇನ್ನೂ ಅಂತಿಮ ನಿರ್ಧಾರ ಆಗಿಲ್ಲ. ಒಟ್ಟಿನಲ್ಲಿ, ಮದ್ಯದಂಗಡಿ ಸನ್ನದು ಪಡೆದುಕೊಳ್ಳಲು ಯಾರು ಬೇಕಾದರೂ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮುಕ್ತ ಅವಕಾಶ ನೀಡಲಾಗುವುದು. ಇಂದಿನ ಮಾರುಕಟ್ಟೆ ಮೌಲ್ಯದ ಅಂದಾಜು ಪ್ರಕಾರ ಒಂದು ಮದ್ಯದಂಗಡಿ ಸನ್ನದು ಕನಿಷ್ಠ ₹3 ಕೋಟಿಗೆ ಖರೀದಿ ಆಗಬಹುದು. ಆ ಮೂಲಕ, ₹1,500 ಕೋಟಿ ಸುಲಭವಾಗಿ ಸರ್ಕಾರಕ್ಕೆ ವರಮಾನ ಬರಬಹುದು ಎಂದು ಅಬಕಾರಿ ಇಲಾಖೆ ಲೆಕ್ಕಾಚಾರ ಹಾಕಿದೆ.

2ನೇ ಪುಟ ನೋಡಿ



ಬಾಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತುಂಗಭದ್ರಾ ಜಲಾಶಯಕ್ಕೆ ಭಾನುವಾರ ಬಾಗಿನ ಅರ್ಪಿಸಿದರು
ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಹೈಕೋರ್ಟ್ ತೀರ್ಪಿಗೆ ಒಳಪಟ್ಟು ನೇಮಕಾತಿಗೆ ಸೂಚನೆ

545 ಪಿಎಸ್‌ಐ: 'ಹೈ.ಕ' ಮೀಸಲು ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈದರಾಬಾದ್-ಕರ್ನಾಟಕ (371ಜೆ) ಭಾಗದ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ಕುರಿತ ಪ್ರಕರಣದಲ್ಲಿ ಹೈಕೋರ್ಟ್ ನೀಡಲಿರುವ ಅಂತಿಮ ತೀರ್ಪಿಗೆ ಒಳಪಟ್ಟು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 545 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವಂತೆ ಪೊಲೀಸ್ ಮಹಾ ನಿರ್ದೇಶಕರಿಗೆ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ನಿರ್ದೇಶನ ನೀಡಿದ್ದಾರೆ.

ಆದರೆ, ಆ ಬೆನ್ನಲ್ಲೆ, ಗೃಹ ಇಲಾಖೆಯ ಎಸಿಎಸ್‌ಗೆ ಟಿಪ್ಪಣಿ ಕಳುಹಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, 'ಹೈದರಾಬಾದ್- ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಾತಿ ಕುರಿತ ಗೊಂದಲಗಳನ್ನು ನಿವಾರಿಸಲು ಸೆ. 27ರಂದು ಸಚಿವ ಸಂಪುಟದ 371(ಜೆ) ಉಪ ಸಮಿತಿ ಸಭೆ ನಡೆಯಲಿದೆ. ಅಲ್ಲಿಯವರೆಗೆ ಆಯ್ಕೆ ಪಟ್ಟಿ (ನೇಮಕಾತಿ ಆದೇಶ) ಪ್ರಕಟಿಸದೆ ತಡೆಹಿಡಿಯಬೇಕು' ಎಂದು ಸೂಚನೆ ನೀಡಿದ್ದಾರೆ.

2B ಪುಟ ನೋಡಿ

'ಆಯ್ಕೆ ಪಟ್ಟಿ ತಡೆಹಿಡಿಯಬೇಕು'



ಪೊಲೀಸ್ ಮಹಾ ನಿರ್ದೇಶಕರಿಗೆ ಗೃಹ ಇಲಾಖೆಯ ಎಸಿಎಸ್ ನಿರ್ದೇಶನ ನೀಡಿರುವುದು ಗೊತ್ತಾಗುತ್ತಿದ್ದಂತೆಯೇ ಎಸಿಎಸ್‌ಗೆ ಶನಿವಾರ (ಸೆ. 21) ಟಿಪ್ಪಣಿ ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ, ಪಿಎಸ್‌ಐ ಆಯ್ಕೆ ಪಟ್ಟಿ ಪ್ರಕಟಿಸಬಾರದು ಎಂದು ಸ್ಪಷ್ಟ ಸೂಚನೆ ನೀಡಿದ್ದಾರೆ. 'ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿದ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವಾಗ ವಿವಿಧ ನೇಮಕಾತಿ ಪ್ರಾಧಿಕಾರಗಳು ಪಾಲಿಸಬೇಕಾದ ವಿಧಿ-ವಿಧಾನಗಳ ಬಗ್ಗೆ ಡಿಪಿಎಆರ್ ಹೊರಡಿಸಿರುವ ವಿವಿಧ ಸುತ್ತೋಲೆಗಳಲ್ಲಿ ಗೊಂದಲಗಳಿವೆ. ಅಲ್ಲದೆ, ಹೈಕೋರ್ಟ್‌ನಲ್ಲಿಯೂ ಪ್ರಕರಣ ಬಾಕಿ ಇದೆ' ಎಂದು ಪ್ರಿಯಾಂಕ್ ತಿಳಿಸಿದ್ದಾರೆ.

ಚೆಸ್: ಭಾರತ ತಂಡಗಳಿಗೆ ಚಾರಿತ್ರಿಕ ಚಿನ್ನ

ಬುಡಾಪೆಸ್ಟ್ (ಪಿಟಿಐ): ಒಲಿಂಪಿಯಾಡ್‌ನಲ್ಲಿ ಭಾರತ ಓಪನ್ ಮತ್ತು ಮಹಿಳೆಯರ ವಿಭಾಗದಲ್ಲಿ ಭಾನುವಾರ ಇತಿಹಾಸ ನಿರ್ಮಿಸಿತು. ಎರಡೂ ತಂಡಗಳು ಇದೇ ಮೊದಲ ಬಾರಿಗೆ ಚಿನ್ನದ ಪದಕಗಳನ್ನು ಗೆದ್ದು ಬೀಗಿದವು.

ಪುರುಷರ ವಿಭಾಗದಲ್ಲಿ ಭಾರತ 11ನೇ ಸುತ್ತಿನಲ್ಲಿ ಸ್ಲೊವೇನಿಯಾ ತಂಡವನ್ನು 3.5-0.5 ರಿಂದ ಸೋಲಿಸಿತು. ಆ ಮೂಲಕ ಗರಿಷ್ಠ 22ರಲ್ಲಿ 21 ಪಾಯಿಂಟ್ಸ್ ಕಲೆಹಾಕಿತು. 10 ಪಂದ್ಯಗಳನ್ನು ಗೆದ್ದು, ಒಂದನ್ನು (ಉಜ್ಬೇಕಿಸ್ತಾನ ವಿರುದ್ಧ) ಡ್ರಾ ಮಾಡಿಕೊಂಡಿತು. ಅರ್ಜುನ್ ಇರಿಗೇಶಿ ಮತ್ತು ಡಿ.ಗುಕೇಶ್ ಅವರ ನಿರಂತರ ಉತ್ತಮ ಪ್ರದರ್ಶನ ಭಾರತದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿತು.

ಮಹಿಳೆಯರ ವಿಭಾಗದಲ್ಲಿ ಭಾರತ ಕೊನೆಯ ಸುತ್ತಿನಲ್ಲಿ ಅಜರ್‌ಬೈಜಾನ್ ತಂಡವನ್ನು ಮಣಿಸಿತು. ಭಾರತ 19 ಪಾಯಿಂಟ್ಸ್ ಕಲೆಹಾಕಿದರೆ, ಕಜಕಸ್ತಾನ 18 ಪಾಯಿಂಟ್ಸ್ ಗಳಿಸಿ ಬೆಳ್ಳಿ ಮತ್ತು ಅಮೆರಿಕ (17 ಪಾಯಿಂಟ್ಸ್) ಕಂಚಿನ ಪದಕ ಗಳಿಸಿತು.

ವಿವರ 9

ಶಾಸಕ ಮುನಿರತ್ನ ವಶಕ್ಕೆ ಪಡೆಯಲು ಎಸ್‌ಐಟಿ ಸಿದ್ಧತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬಿಜೆಪಿ ಶಾಸಕ, ಅತ್ಯಾಚಾರ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮುನಿರತ್ನ ಅವರನ್ನು ವಿಚಾರಣೆಗಾಗಿ ತಮ್ಮ ವಶಕ್ಕೆ ಪಡೆಯಲು ಸಿಐಡಿಯ ವಿಶೇಷ ತನಿಖಾ ದಳ (ಎಸ್‌ಐಟಿ) ಸಿದ್ಧತೆ ನಡೆಸಿದೆ' ಎಂದು ಮೂಲಗಳು ತಿಳಿಸಿವೆ.

ರಾಮನಗರ ಜಿಲ್ಲೆಯ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ಸಂಬಂಧ ಮುನಿರತ್ನ ಅವರನ್ನು ಶುಕ್ರವಾರ ಬೆಳಿಗ್ಗೆ ಬಂಧಿಸಲಾಗಿದ್ದು, ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

2B ಪುಟ ನೋಡಿ

ತುಂಗಭದ್ರಾ ಜಲಾಶಯದ 19ನೇ ಗೇಟ್ ಅಳವಡಿಸಿದ ಅಧಿಕಾರಿಗಳು, ಕಾರ್ಮಿಕರಿಗೆ ಸನ್ಮಾನ

ವರ್ಷದೊಳಗೆ ಹೊಸ ಕ್ರಸ್ಟ್‌ಗೇಟ್: ಡಿಕೆಶಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ನೆರೆಯ ಆಂಧ್ರಪ್ರದೇಶ, ತೆಲಂಗಾಣ ಮತ್ತು ತುಂಗಭದ್ರಾ ಮಂಡಳಿ ಜೊತೆ ಆದಷ್ಟು ಬೇಗನೆ ಚರ್ಚಿಸಿ ಒಂದು ವರ್ಷದೊಳಗೆ ತುಂಗಭದ್ರಾ ಜಲಾಶಯಕ್ಕೆ ಹೊಸ ತಂತ್ರಜ್ಞಾನದ ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲಾಗುವುದು' ಎಂದು ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ತುಂಗಭದ್ರಾ ಜಲಾಶಯಕ್ಕೆ ಭಾನುವಾರ ಬಾಗಿನ ಅರ್ಪಿಸಿದ ಬಳಿಕ ತಾಲ್ಲೂಕಿನ ಮುನಿರಾಬಾದ್‌ನಲ್ಲಿ ನಡೆದ 19ನೇ ಕ್ರಸ್ಟ್‌ಗೇಟ್ ಅಳವಡಿಕೆಗೆ ಶ್ರಮಿಸಿದ ಅಧಿಕಾರಿಗಳು, ಕಾರ್ಮಿಕರಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ಒಂದು ಬಾರಿ ಅಳವಡಿಸಿದ ಗೇಟ್‌ಗಳ ಆಯಸ್ಸು 50 ವರ್ಷ. ಈಗ ಈ ಸಮಯ ಮುಗಿದು ಹೋಗಿದೆ' ಎಂದರು.

'ಕ್ರಸ್ಟ್‌ಗೇಟ್ ಕೊಚ್ಚಿ ಹೋಗಿದ್ದ ಘಟನೆಯ ಬಗ್ಗೆ ಕೇಂದ್ರ ತನಿಖಾ ತಂಡ ಜಲಾಶಯಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದು, ತ್ವರಿತವಾಗಿ ಗೇಟ್‌ಗಳನ್ನು ಬದಲಾಯಿಸಬೇಕು ಎನ್ನುವ ಸಲಹೆ ನೀಡಿದೆ. ಆದಷ್ಟು ಬೇಗನೆ ಈ ಕೆಲಸ ಮಾಡುತ್ತೇವೆ' ಎಂದರು.

'ಗೇಟ್ ಸುರಕ್ಷತಾ ತಜ್ಞ ಕನ್ನಯ್ಯ ನಾಯ್ಡು ಮುಂದಾಳತ್ವದಲ್ಲಿ ನಮ್ಮ ಅಧಿಕಾರಿಗಳು, ಖಾಸಗಿ ಕಂಪನಿಗಳು ಹಾಗೂ ನೂರಾರು ಕಾರ್ಮಿಕರು ಒಂದೇ ವಾರದಲ್ಲಿ ಗೇಟ್ ಅಳವಡಿಸಿದರು. ಜಲಾಶಯದ ಗೇಟ್ ಕೊಚ್ಚಿ ಹೋದಾಗ ಬಿಜೆಪಿಯವರು ಮಾಡಿದ್ದ ಎಲ್ಲ ಟೀಕೆಗಳೂ ಜಲಾಶಯದಲ್ಲಿ ಕೊಚ್ಚಿ ಹೋಗಿ ಕೆಲಸ ಮಾತ್ರ ಉಳಿದುಕೊಂಡಿದೆ. ದೇಶವೇ ಕುತೂಹಲದಿಂದ ನೋಡುತ್ತಿದ್ದ ಘಟನೆಯನ್ನು ನಮ್ಮ ತಂಡ ಸಮರ್ಥವಾಗಿ ನಿರ್ವಹಿಸಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅನಾರೋಗ್ಯದ ನಡುವೆಯೂ ಕನ್ನಯ್ಯ ನಾಯ್ಡು ಕಾರ್ಯಕ್ರಮದಲ್ಲಿ ಭಾಗಿಯಾಗಿ ಸರ್ಕಾರದ ಸನ್ಮಾನ ಸ್ವೀಕರಿಸಿದರು. 'ಕನಕಗಿರಿ ತಾಲ್ಲೂಕಿನ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣದ ಬಗ್ಗೆಯೂ ನೆರೆಯ ರಾಜ್ಯಗಳ ಜೊತೆ ಚರ್ಚಿಸುವೆ. ಈ ಯೋಜನೆ ಅನುಷ್ಠಾನಗೊಂಡರೆ ಕೆಲವು ರೈತರಿಗೆ ತೊಂದರೆಯಾಗುತ್ತದೆ. ರೈತರು ಸಹಕರಿಸಬೇಕು' ಎಂದು ಕೋರಿದರು.

ಮುಖ್ಯಾಂಶಗಳು

- ಬಿಜೆಪಿಯವರು ಮಾಡಿದ್ದ ಎಲ್ಲ ಟೀಕೆಗಳೂ ಜಲಾಶಯದಲ್ಲಿ ಕೊಚ್ಚಿ ಹೋಗಿದೆ: ಡಿಸಿಎಂ
- ಒಂದೇ ವಾರದಲ್ಲಿ ಗೇಟ್ ಅಳವಡಿಸಿದ ತಂಡಕ್ಕೆ ಡಿಕೆಶಿ ಮೆಚ್ಚುಗೆ

ಸಚಿವರಿಗೆ ಮುಖ್ಯಮಂತ್ರಿ ಲೆಕ್ಕದ ಪಾಠ

ತುಂಗಭದ್ರಾ ಜಲಾಶಯದಿಂದ ಯಾವ ರಾಜ್ಯಕ್ಕೆ ಎಷ್ಟು ಎಕರೆ ಕೃಷಿಗೆ ಅನುಕೂಲವಾಗುತ್ತದೆ ಎನ್ನುವ ವಿಷಯವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ ಅಂಕಿ ಅಂಶಗಳನ್ನು ಹೇಳಿದ ಮುಖ್ಯಮಂತ್ರಿ ಇದು ಸರಿಯಿದೆಯಲ್ಲವೇ ಎಂದು ವೇದಿಕೆ ಮೇಲಿದ್ದವರನ್ನು ಪ್ರಶ್ನಿಸಿದರು.

ಆಗ ಸಿ.ಎಂ. ಬಳಿ ಬಂದ ಸಚಿವರಾದ ಎನ್.ಎಸ್. ಬೋಸರಾಜ, ಶಿವರಾಜ ತಂಗಡಗಿ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಒಂದೊಂದು ರೀತಿಯ ಅಂಕಿ ಅಂಶ ಹೇಳಿದರು. ಇದರಿಂದ ಗೊಂದಲಕ್ಕೆ ಒಳಗಾದ ಅವರು ಪಕ್ಕಾ ಲೆಕ್ಕ ಕೊಡಬೇಕು ಎಂದರು.

ಎಲ್ಲರ ಅಂಕಿಅಂಶಗಳನ್ನು ಪರಿಶೀಲಿಸಿದ ಸಿದ್ದರಾಮಯ್ಯ ಬಳಿಕ ಇಲಾಖೆ ಮುಖ್ಯಸ್ಥರಿಂದ ಮಾಹಿತಿ ತರಿಸಿಕೊಂಡು ಮೊದಲು ತಾವು ಹೇಳಿದ್ದ ಅಂಕಿಅಂಶಗಳು ಸರಿಯಿವೆ ಎಂದರು. ತಪ್ಪು ಮಾಹಿತಿ ಕೊಟ್ಟರೆ ನಿಮ್ಮ ಮೇಲೆಯೇ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಸಚಿವರತ್ತ ಮುಖಮಾಡಿ ಹೇಳಿದರು.

ಸರಿ ಮಾಹಿತಿಯನ್ನು ವಿವರಿಸಲು ರಾಯರಡ್ಡಿ ಪಕ್ಕದಲ್ಲಿಯೇ ಕುಳಿತಿದ್ದ ಡಿ.ಕೆ. ಶಿವಕುಮಾರ್ ಬಳಿ ಹೋದಾಗ ಅವರು ಕೈ ಮುಗಿದು ಹೋಗಿ ಕುಳಿತುಕೊಳ್ಳಿ ಎಂದು ಸಂಜ್ಞೆ ಮಾಡಿದರು.


'ದ್ವೇಷದ ರಾಜಕಾರಣ ಮಾಡುವುದಿಲ್ಲ'

ತಾಲ್ಲೂಕಿನ ಗಿಣಿಗೇರಾದಲ್ಲಿ ಭಾನುವಾರ ಏರ್ ಸ್ಟ್ರಿಪ್‌ನಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಾಸಕ ಮುನಿರತ್ನ ಅವರನ್ನು ಸರ್ಕಾರ ಬಂಧಿಸಿದ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ 'ನಾವು ಯಾರ ವಿರುದ್ಧವೂ ದ್ವೇಷದ ರಾಜಕಾರಣ ಮಾಡುವುದಿಲ್ಲ. ಅಪರಾಧ ಮಾಡಿ ಎಂದು ನಾವು ಯಾರಿಗೂ ಹೇಳಿಲ್ಲ' ಎಂದರು.

> ತಜ್ಞರ ವರದಿ ಆಧಾರದ ಮೇಲೆ ತುಂಗಭದ್ರಾ ಗೇಟ್‌ಗಳ ನಿರ್ವಹಣೆ ಮಾಡಲಾಗುವುದು. ಇನ್ನೂ ಮಳೆ ಬರುತ್ತದೆ. ಎರಡನೇ ಬೆಳೆಗೂ ನೀರು ಲಭಿಸುತ್ತದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ನಮ್ಮ ಸರ್ಕಾರವನ್ನು ಬೀಳಿಸಲು ಯಾರಿಂದಲೂ ಸಾಧ್ಯವಿಲ್ಲ. ಮುಂದಿನ ಹತ್ತು ವರ್ಷ ನಾವೇ ಆಡಳಿತ ಮಾಡುತ್ತೇವೆ. ಆಗ ಪ್ರತಿಬಾರಿಯೂ ನಾವೇ ಬಂದು ಬಾಗಿನ ಅರ್ಪಿಸುತ್ತೇವೆ
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

ಕಾರ್ಯಕ್ರಮಕ್ಕೆ ಬಾರದೆ ಶಾಸಕ ಬಂಡಾಯ


ಎಚ್‌.ಆರ್. ಗವಿಯಪ್ಪ

ಹೊಸಪೇಟೆ (ವಿಜಯನಗರ): ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಮಧ್ಯಾಹ್ನ ತುಂಗಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಿದಾಗ ಸ್ಥಳೀಯ ಶಾಸಕ ಎಚ್.ಆರ್.ಗವಿಯಪ್ಪ ಗೈರಾಗುವ ಮೂಲಕ ಸರ್ಕಾರದ ವಿರುದ್ಧ ತಮ್ಮ ಅಸಮಾಧಾನದ ಜತೆಗೆ ಬಂಡಾಯವನ್ನು ಬಹಿರಂಗವಾಗಿ ಪ್ರದರ್ಶಿಸಿದರು.

ಬೆಳಿಗ್ಗೆ ತಮ್ಮ ಜತೆ ಕೆಲವು ಅನುಯಾಯಿಗಳನ್ನು ಅಣೆಕಟ್ಟೆ ಸಮೀಪಕ್ಕೆ ಬಿಡದ ಕಾರಣಕ್ಕೆ ಶಾಸಕರು ಅಣೆಕಟ್ಟೆ ಸಮೀಪಕ್ಕೆ ಹೋದವರು ವಾಪಸ್ ಗೇಟ್‌ನತ್ತ ಬಂದರು. ಸ್ಥಳದಲ್ಲಿದ್ದ ಡಿವೈಎಸ್‌ಪಿ ಸಹಿತ ಪೊಲೀಸರ ಜತೆಗೆ ವಾಗ್ವಾದ ನಡೆಸಿದ ಶಾಸಕರು, ತಮ್ಮ ಹಿಂಬಾಲಕರನ್ನು ಒಳಗೆ ಬಿಡುವ ಲಕ್ಷಣ ಇಲ್ಲ ಎಂದು ಕಂಡುಬಂದಾಗ ತಾವೂ ಹೊರನಡೆದು ತಮ್ಮ ಕಚೇರಿಗೆ ಬಂದು ಕುಳಿತುಬಿಟ್ಟರು.

ಸ್ವತಃ ಡಿವೈಎಸ್‌ಪಿ, ತಹಶೀಲ್ದಾರ್, ಎಸ್‌ಪಿ ಮತ್ತು ಡಿಸಿ ಅವರು ಶಾಸಕರ ಕಚೇರಿಗೆ ತೆರಳಿ ಮನವೊಲಿಸಲು ಪ್ರಯತ್ನಿಸಿದರೂ ಅವರು ಸಮಾಧಾನಗೊಳ್ಳಲಿಲ್ಲ. ಮುಖ್ಯಮಂತ್ರಿ ಅವರು ಬರುವುದು ಎರಡು ಗಂಟೆ ವಿಳಂಬವಾಗಲಿದೆ ಎಂಬ ಮಾಹಿತಿ ಇದ್ದ ಕಾರಣ ಸಿಎಂ, ಡಿಸಿಎಂ ಬರುವ ಹೊತ್ತಿಗೆ ಶಾಸಕರು ಬರಬಹುದು ಎಂಬ ನಿರೀಕ್ಷೆ ಇತ್ತು. ಟಿ.ಬಿ.ಡ್ಯಾಂ ಗೇಟ್ ಸಮೀಪದಲ್ಲೇ ಸಿದ್ದರಾಮಯ್ಯ ಅವರನ್ನು ಎದುರುಗೊಂಡ ಶಾಸಕರು ಹೂಗುಚ್ಛ ನೀಡಿದರೂ, ಅವರ ಜತೆಗೆ ಅಣೆಕಟ್ಟೆಗೆ ಬರಲಿಲ್ಲ.

ಸುದ್ದಿ 2 ನಿಮಿಷ

ಸಮಗ್ರ ವಿಶ್ವವಿದ್ಯಾಲಯ ಸ್ಥಾಪಿಸಿ: ಬಸವರಾಜ ಹೊರಟ್ಟಿ

ಧಾರವಾಡ: 'ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಇವೆಲ್ಲವು ಒಂದೇ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರಬೇಕು. ಇವೆಲ್ಲವನ್ನು ಒಟ್ಟುಗೂಡಿಸಿ ಒಂದು ಸಮಗ್ರ ವಿಶ್ವವಿದ್ಯಾಲಯ ಸ್ಥಾಪಿಸಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯದಲ್ಲಿ ಭಾನುವಾರ ಕೃಷಿ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ 'ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಇವೆಲ್ಲವೂ ಒಂದೇ ಕಡೆ ಇದ್ದರೆ ಅನುಕೂಲವಾಗುತ್ತದೆ. ಅಂತರ್‌ಶಿಸ್ತೀಯ ಅಧ್ಯಯನ, ಪ್ರಾಯೋಗಿಕವಾಗಿ ವಿಷಯಗಳ ಮನನ ಎಲ್ಲದಕ್ಕೂ ಸಹಕಾರಿಯಾಗುತ್ತದೆ. ಕೃಷಿ ವಿಶ್ವವಿದ್ಯಾಲಯಗಳು ರೈತರಿಗಾಗಿ ಮೂರು ಅಥವಾ ಆರು ತಿಂಗಳಿಗೊಮ್ಮೆ ಕಮ್ಮಟ ಏರ್ಪಡಿಸಬೇಕು' ಎಂದರು.



'ಹಲವು ರೈತರು ಕೃಷಿಯಿಂದ ವಿಮುಖರಾಗಿದ್ದಾರೆ, ಜಮೀನು ಮಾರಾಟ ಮಾಡಿದ್ದಾರೆ. ರೈತರು ಬೆಳೆದ ಎಲ್ಲ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಸಿಗುವಂತೆ ಮಾಡಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಎನ್‌ಆರ್‌ಇಜಿ) ಕಾರ್ಮಿಕರು ಜಮೀನಿನಲ್ಲಿ ಕೆಲಸ ಮಾಡಿ ರೈತರಿಂದ ಪಗಾರ ಪಡೆಯುವಂತೆ ಮಾಡಬೇಕು' ಎಂದು ಹೇಳಿದರು.

ಕಾರವಾರ: ಉದ್ಯಮಿ ಹತ್ಯೆ

ಕಾರವಾರ: ತಾಲ್ಲೂಕಿನ ಹಣಕೋಣ ಗ್ರಾಮದಲ್ಲಿ ಭಾನುವಾರ ನಸುಕಿನ ಜಾವ ಉದ್ಯಮಿ ವಿನಾಯಕ ನಾಯ್ಕ ಯಾನೆ ರಾಜು ನಾಯ್ಕ (58) ಎಂಬುವವರನ್ನು ದುಷ್ಕರ್ಮಿಗಳ ಗುಂಪೊಂದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದೆ.

ಮಹಾರಾಷ್ಟ್ರದ ಪುಣೆಯಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ಆಮದು, ರಫ್ತು ವಹಿವಾಟು ನಡೆಸುತ್ತಿರುವ ಉದ್ಯಮಿ ತನ್ನ ಮೂಲ ಊರು ಹಣಕೋಣಕ್ಕೆ ಸಾತೇರಿ ದೇವಿ ಜಾತ್ರೆಗೆ ವಾರದ ಹಿಂದೆ ಬಂದಿದ್ದರು. ಭಾನುವಾರ ಪುಣೆಗೆ ಹೊರಡಲು ಸಿದ್ಧರಾಗಿದ್ದರು. ನಸುಕಿನ ಜಾವ 5.30ರ ಸುಮಾರಿಗೆ ಅವರ ಹತ್ಯೆ ಮಾಡಲಾಗಿದೆ.

'ನಾಲ್ಕರಿಂದ ಐದು ಜನರಿದ್ದ ಗುಂಪೊಂದು ಮನೆಗೆ ನುಗ್ಗಿ ಕೃತ್ಯ ನಡೆಸಿದೆ. ವಿನಾಯಕ ಅವರ ಪತ್ನಿ ವೃಶಾಲಿ ನಾಯ್ಕ (50) ಅವರ ಮೇಲೆಯೂ ಹಲ್ಲೆ ನಡೆಸಲಾಗಿದೆ. ಘಟನೆ ನಡೆದ ವೇಳೆ ಇವರಿಬ್ಬರೇ ಮನೆಯಲ್ಲಿದ್ದರು' ಎಂದು ಚಿತ್ತಾಕುಲ ಠಾಣೆ ಪೊಲೀಸರು ತಿಳಿಸಿದ್ದಾರೆ.


ಕೃಷಿ ಮೇಳ ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಭಾನುವಾರ ಪಾಲ್ಗೊಂಡಿದ್ದ ಜನಸ್ತೋಮ ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಈಶ್ವರಪ್ಪಗೆ ಅನ್ಯಾಯ: ಯತ್ನಾಳ

ಪ್ರಜಾವಾಣಿ ವಾರ್ತೆ


ಬಸನಗೌಡ ಪಾಟೀಲ

ಜಮಖಂಡಿ (ಬಾಗಲಕೋಟೆ ಜಿಲ್ಲೆ): 'ಮಾಜಿ ಉಪಮುಖ್ಯ ಮಂತ್ರಿ ಕೆ.ಎಸ್. ಈಶ್ವರಪ್ಪನವರಿಗೆ ಬಿಜೆಪಿಯಲ್ಲಿ ಅನ್ಯಾಯವಾಗಿದೆ. ಆ ಅನ್ಯಾಯವನ್ನು ಸರಿಪಡಿಸಿ ಮುಂದಿನ ದಿನಗಳಲ್ಲಿ ಅವರನ್ನು ಮತ್ತೆ ಬಿಜೆಪಿಗೆ ಕರೆದುಕೊಂಡು ಹೋಗುತ್ತೇವೆ. ಸಿದ್ದರಾಮಯ್ಯನವರ ಬಳಿಕ ರಾಜ್ಯದಲ್ಲಿ ಈಶ್ವರಪ್ಪನವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆ, ಅವರನ್ನು ಯಾವ ಕಾರಣಕ್ಕೂ ಬಿಟ್ಟು ಕೊಡುವುದಿಲ್ಲ' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ತಾಲ್ಲೂಕಿನ ಜಕನೂರ ಗ್ರಾಮದ ಮಾದಣ್ಣ ಮದಗುಂಡೇಶ್ವರ ಸಿದ್ಧಾಶ್ರಮದಲ್ಲಿ ಶನಿವಾರ ಸಂಜೆ ಹಮ್ಮಿಕೊಂಡಿದ್ದ ಭಂಡಾರ ಸಂಸ್ಕೃತಿ ಉತ್ಸವ, ಜಾನಪದ ಮತ್ತು ಡೊಳ್ಳಿನ ಕಲಾಮಹೋತ್ಸವ, 29ನೇ 'ಸಿದ್ಧಸಿರಿ' ಸಂಭ್ರಮದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಿತ್ತೂರು ರಾಣಿ ಚನ್ನಮ್ಮ ವಂಶಸ್ಥರಾದ ನಾವು ಪಂಚಮಸಾಲಿಗಳು ಗಟ್ಟಿಯಾಗಿ ನಿಮ್ಮ ಬೆನ್ನಹಿಂದೆ ನಿಲ್ಲುತ್ತೇವೆ. ನಿಮ್ಮನ್ನು ಮುಖ್ಯಮಂತ್ರಿ ಮಾಡಿ ನಾನು ಸಚಿವನಾಗುತ್ತೇನೆ. ರಾಯಣ್ಣ ಬ್ರಿಗೇಡ್ ಮಾಡಿದಾಗ ನಿಮಗೆ ತೊಂದರೆ ನೀಡಿರುವವರ ಬಗ್ಗೆ ಎಲ್ಲರಿಗೂ ಗೊತ್ತಿದೆ. ನಾವು ಹಾಗೂ ರಮೇಶ ಜಾರಕಿಹೊಳಿ ಸೇರಿದಂತೆ ಬೇರೆ ಹೊಂದಾಣಿಕೆಯ ಟೀಂ ಮಾಡಿಕೊಂಡಿದ್ದೇವೆ. ಸರಿಯಾದ ಸಮಯಕ್ಕೆ ಕಾಯುತ್ತಿದ್ದೇವೆ' ಎಂದು ಹೇಳಿದರು.

ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಮಾತನಾಡಿ, 'ಈಗಿನ ಬಿಜೆಪಿ ರಾಜ್ಯಾಧ್ಯಕ್ಷರ ಮೇಲೆ ಯಾರಿಗೂ ಮನಸ್ಸಿಲ್ಲ. ಅವರು ಸೂಕ್ತ ವ್ಯಕ್ತಿಯೂ ಅಲ್ಲ' ಎಂದರು.

'ರಾಯಣ್ಣ ಚನ್ನಮ್ಮ ಬ್ರಿಗೇಡ್ ಶೀಘ್ರ'

ವಿಜಯಪುರ: 'ರಾಜ್ಯದಲ್ಲಿ ಹಿಂದುಳಿದವರಿಗೆ, ದಲಿತರಿಗೆ, ಬ್ರಾಹ್ಮಣರಿಗೆ ಮತ್ತು ಲಿಂಗಾಯತರಿಗೆ ಅನ್ಯಾಯವಾಗುವುದನ್ನು ತಡೆಯುವ ನಿಟ್ಟಿನಲ್ಲಿ ಶೀಘ್ರದಲ್ಲೇ ಆರ್‌ಸಿಬಿ (ರಾಯಣ್ಣ ಚನ್ನಮ್ಮ ಬ್ರಿಗೇಡ್) ಅಸ್ತಿತ್ವಕ್ಕೆ ಬರಲಿದೆ' ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

'ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಕೂಡ ಈಶ್ವರಪ್ಪ ಮತ್ತು ಬಸನಗೌಡ ಪಾಟೀಲ ಯತ್ನಾಳ ಸೇರಿ ಆರ್‌ಸಿಬಿ ಸ್ಥಾಪಿಸುವಂತೆ ಸಲಹೆ ನೀಡಿದ್ದಾರೆ. ಈ ಬಗ್ಗೆ ಬೆಂಬಲಿಗರೊಂದಿಗೆ ಚರ್ಚಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ರಾಜಭವನದಿಂದಲೇ ಪತ್ರ ಸೋರಿಕೆ: ಸಿ.ಎಂ

ಒಂದನೇ ಪುಟದಿಂದ...

'ತನಿಖೆ ಮತ್ತು ವಿಚಾರಣೆಗೆ ಅನುಮತಿ ನೀಡಿ ಎಂದು ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಮನವಿಗಳ ವಿವರ ಮತ್ತು ದಿನಾಂಕಗಳ ಗೋಪ್ಯ ಮಾಹಿತಿ ರಾಜ್ಯ ಸರ್ಕಾರಕ್ಕೆ ಗೊತ್ತಾಗಿದ್ದು ಹೇಗೆ' ಎಂದು ಪ್ರಶ್ನಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ರಾಜ್ಯ ಸರ್ಕಾರಕ್ಕೆ ಇತ್ತೀಚೆಗೆ ಪತ್ರ ಬರೆದಿದ್ದರು.

ಈ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಚ್.ಎಸ್.ಕೆಂಪಣ್ಣ ಆಯೋಗ ಸಲ್ಲಿಸಿರುವ ವರದಿ ಮತ್ತು ದಾಖಲೆಗಳನ್ನು ಸಲ್ಲಿಸಿ ಎಂದು ರಾಜ್ಯಪಾಲ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ಪತ್ರ ಬರೆದಿದ್ದರು. ಈ ಪತ್ರವನ್ನು ಉಲ್ಲೇಖಿಸಿ ನಗರಾಭಿವೃದ್ಧಿ ಇಲಾಖೆಯು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪತ್ರ ಬರೆದಿತ್ತು. ಈ ಎರಡೂ ಪತ್ರಗಳ ಸಂಬಂಧ ಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿತ್ತು. ಅದರ ಬೆನ್ನಲ್ಲೇ ಸಿದ್ದರಾಮಯ್ಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ತಾವು ಬರೆದ ಪತ್ರ ಸೋರಿಕೆಯಾಗಿದೆ ಎಂದು ಮುಖ್ಯ ಕಾರ್ಯದರ್ಶಿಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ. ರಾಜ್ಯಪಾಲರು ಪತ್ರ ಬರೆದಿರುವ ವಿಚಾರವನ್ನು ನಾನೂ ಪತ್ರಿಕೆಯಲ್ಲಿ ಓದಿ ತಿಳಿದಿದ್ದೇನೆ' ಎಂದಿದ್ದಾರೆ.

ಹರಾಜು: ₹1,500 ಕೋಟಿ ಸಂಗ್ರಹ?

ಒಂದನೇ ಪುಟದಿಂದ...

1987ರ ರಾಜ್ಯ ಸರ್ಕಾರದ ಆದೇಶದ ಅನ್ವಯ ಇಲಾಖೆಯು 4,206 ಮದ್ಯದಂಗಡಿಗಳಿಗೆ ಪರವಾನಗಿ ನೀಡಬೇಕಿದೆ. ಈ ಕೋಟಾದಡಿ 133 ಪರವಾನಗಿ ಕೊಡಲು ಇನ್ನೂ ಬಾಕಿ ಇವೆ. 102 ಪರವಾನಗಿಗಳು ಸ್ಥಗಿತಗೊಂಡಿವೆ. ಹೀಗೆ, ಎಂಎಸ್‌ಐಎಲ್ ಮತ್ತು ಸ್ಥಗಿತಗೊಂಡಿರುವ ಸಿಎಲ್ 2 (ವೈನ್ ಶಾಪ್) ಸೇರಿ ಒಟ್ಟು 506 ಪರವಾನಗಿಗಳನ್ನು ಖಾಸಗಿಯವರಿಗೆ ಹರಾಜು ಅಥವಾ ಲಾಟರಿ ಮೂಲಕ ನೀಡುವ ಕುರಿತು ಪ್ರಸ್ತಾವವನ್ನು ಸಿದ್ಧಪಡಿಸಲಾಗಿದೆ ಎಂದು ಅವರು ವಿವರಿಸಿದರು.

ರಾಜ್ಯದಲ್ಲಿ ಈಗ ಇರುವ ಮದ್ಯದಂಗಡಿಗಳ ಸಂಖ್ಯೆ

ಮಾದರಿ	ಸಂಖ್ಯೆ
ಸಿಎಲ್ –2 (ವೈನ್ ಶಾಪ್)	3,988
ಸಿಎಲ್–4 (ಕ್ಲಬ್)	292
ಸಿಎಲ್–7 (ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್)	2,757
ಸಿಎಲ್–9 (ಬಾರ್ ಮತ್ತು ರೆಸ್ಟೋರೆಂಟ್)	3,627
ಸಿಎಲ್–11ಸಿ (ಎಂಎಸ್‌ಐಎಲ್)	1,065
ಆರ್‌ವಿಬಿ (ರಿಟೇಲ್ ವೆಂಡರ್ ಬಿಯರ್)	876
ವೈನ್ ಟವರ್ನ್	197
ವೈನ್ ಬುಟಿಕ್	83
ಮೈಕ್ರೋ ಬ್ರೇವರಿ	71
ಒಟ್ಟು	12,956

ಮದ್ಯದಂಗಡಿ ತೆರೆಯಲು ಎಂಎಸ್‌ಐಎಲ್‌ಗೆ ಪರವಾನಗಿ ನೀಡದಿರಲು ಇದೇ ಮಾರ್ಚ್‌ನಲ್ಲಿ ನಿರ್ಧರಿಸಲಾಗಿದೆ. ಲೋಕಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದ ನಂತರದಿಂದ ಈವರೆಗೆ ಯಾವುದೇ ಹೊಸ ಮದ್ಯದಂಗಡಿಗಳಿಗೆ ಪರವಾನಗಿ ಕೊಟ್ಟಿಲ್ಲ. ಪರವಾನಗಿ ಹೊಂದಿದವರ ಕುಟುಂಬದದಲ್ಲಿನ ಸಂಘರ್ಷ, ಯಾರ ಹೆಸರಿಗೆ ಸನ್ನದು ವರ್ಗಾಯಿಸಬೇಕೆಂಬ ವಿವಾದ, ಶುಲ್ಕ ಕಟ್ಟಲು ಹಣ ಇಲ್ಲದಿರುವುದು, ಸನ್ನದು ಹೊಂದಿದವರ ಮಕ್ಕಳು ಸರ್ಕಾರಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿರುವ ಕಾರಣಕ್ಕೆ ಅವರು ಹೊಂದಿರುವ ಮದ್ಯದಂಗಡಿಗಳು ನವೀಕರಣಗೊಳ್ಳದೆ ಮುಚ್ಚಿವೆ. ಈ ಪೈಕಿ, ಕೆಲವು ಮದ್ಯದಂಗಡಿಗಳ ಪರವಾನಗಿ 1979ರಿಂದಲೂ ನವೀಕರಣ ಆಗಿಲ್ಲ. ಅಂಥವರಿಗೆ ಶುಲ್ಕ ಪಾವತಿಸಿ ಪರವಾನಗಿ ನವೀಕರಿಸಲು ಒಂದು ಬಾರಿಗೆ ಮಾತ್ರ ಒಂದು ತಿಂಗಳ ಅವಕಾಶ ನೀಡಲು ಚಿಂತನೆ ನಡೆದಿದೆ. ಒಂದು ತಿಂಗಳ ಒಳಗೆ ನವೀಕರಿಸಿಕೊಳ್ಳದಿದ್ದರೆ ಪರವಾನಗಿಯನ್ನು ವಾಪಸ್ ಪಡೆದು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದೂ ಅವರು ತಿಳಿಸಿದರು.

ಜಿಲ್ಲೆಯೊಂದರಲ್ಲಿ ನಾಲ್ಕು ಜಾಗಗಳನ್ನು ಗುರುತಿಸಿ, ಅಲ್ಲಿ ಮದ್ಯದಂಗಡಿ ತೆರೆಯಲು ಅನುಮತಿ ನೀಡುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಲಾಗುವುದು. ಯಾರು ಬೇಕಾದರೂ ಈ ಪರವಾನಗಿ ಪಡೆಯಲು ಅವಕಾಶವಾಗುವಂತೆ ಮುಕ್ತವಾಗಿ ಹರಾಜು ಪ್ರಕ್ರಿಯೆ ನಡೆಸಲು ಇಲಾಖೆ ಮುಂದಾಗಿದೆ ಎಂದರು.

ಪ್ರತಿ ಮದ್ಯದಂಗಡಿಯ ಹರಾಜಿನಿಂದ ಅಂದಾಜು ₹3 ಕೋಟಿಯಿಂದ ₹4 ಕೋಟಿ ವರೆಗೆ ವರಮಾನ ಬರುವ ನಿರೀಕ್ಷೆಯಿದೆ. ಈ ಪ್ರಸ್ತಾವದ ಬಗ್ಗೆ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ಸಮ್ಮುಖದಲ್ಲಿ ವಿವಿಧ ಹಂತಗಳಲ್ಲಿ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಮೀಸಲಾತಿ: ರಾಜ್ಯಮಟ್ಟದ ವಕೀಲರ ಪರಿಷತ್ ಸಮಾವೇಶ

ಅ.15ಕ್ಕೆ ಚರ್ಚೆಗೆ ಸಿ.ಎಂ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ, ನಗರದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ವಕೀಲರ ಪರಿಷತ್ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅಕ್ಟೋಬರ್ 15ರಂದು ಚರ್ಚೆಗೆ ಆಹ್ವಾನಿಸಿದರು.

ಕೂಡಲಸಂಗಮದ ಪಂಚಮಸಾಲಿ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ವಕೀಲರ ಪರಿಷತ್, ನ್ಯಾಯಪೀಠ–ಕೂಡಲಸಂಗಮ, ಜಿಲ್ಲಾ ವಕೀಲರ ಪರಿಷತ್ ಸಹಯೋಗದಲ್ಲಿ ರಾಜ್ಯದ ವಿವಿಧೆಡೆಯಿಂದ ಪಂಚಮಸಾಲಿ ಸಮಾಜದ ವಕೀಲರು ಸಮಾವೇಶಗೊಂಡರು. ಇಡೀ ದಿನ ಚರ್ಚೆ ನಡೆಸಿದರು.

'ವಾರದೊಳಗೆ ಭೇಟಿಯಾಗಲು ಮುಖ್ಯಮಂತ್ರಿ ಸಮಯ ನೀಡಬೇಕು, ಇಲ್ಲದಿದ್ದರೆ ಈ ಸ್ಥಳದಿಂದಲೇ ತೀವ್ರ ಹೋರಾಟಕ್ಕೆ ಚಾಲನೆ ನೀಡಲಾಗುವುದು' ಎಂದು ವಕೀಲರು ಪಟ್ಟು ಹಿಡಿದರು. 'ಮೀಸಲಾತಿ ವಿಚಾರವಾಗಿ ಚರ್ಚಿಸಲು ಮುಖ್ಯಮಂತ್ರಿ ಅವರು ಅಕ್ಟೋಬರ್ 15ರಂದು ಸಮಯ ನೀಡಿರುವ ವಿಚಾರವನ್ನು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಇದಕ್ಕೆ ಒಪ್ಪದ ವಕೀಲರು ಸ್ವತಃ ಸಿದ್ದರಾಮಯ್ಯ ಅವರೇ ಸ್ವಾಮೀಜಿ ಅವರಿಗೆ ಫೋನ್ ಮಾಡಿ ತಿಳಿಸಬೇಕು ಎಂದು ಪಟ್ಟು ಹಿಡಿದರು. ಸ್ಥಳದಲ್ಲಿದ್ದ ಶಾಸಕ ವಿನಯ ಕುಲಕರ್ಣಿ ಸಿದ್ದರಾಮಯ್ಯ ಅವರಿಗೆ ಮೊಬೈಲ್ ಕರೆ ಮಾಡಿ ವಿಷಯ ತಿಳಿಸಿದರು. 'ದಸರಾ ಮುಗಿದ ಬಳಿಕ ಎಲ್ಲರೂ ಕುಳಿತು ಮಾತನಾಡೋಣ. ಹೋರಾಟ ಮುಂದುವರಿಸಬೇಡಿ' ಎಂದು ಸಿದ್ದರಾಮಯ್ಯ ಮಾಡಿಕೊಂಡ ಮನವಿಗೂ ಪರ–ವಿರೋಧ ಚರ್ಚೆಗೆ ಆರಂಭವಾಗಿ ಇಡೀ ಸಭಾಂಗಣ ಗದ್ದಲದಿಂದ ಕೂಡಿತು. ರಾಣಿ ಚನ್ನಮ್ಮ ವೃತ್ತಕ್ಕೆ ಹೋಗಿ ತಕ್ಷಣವೇ ಹೋರಾಟ ಆರಂಭಿಸಲು ಮುಂದಾದರು.

ವೃತ್ತದಲ್ಲಿ ಈದ್ ಮಿಲಾದ್ ಅಂಗವಾಗಿ ಮುಸ್ಲಿಮರ ಬೃಹತ್ ಮೆರವಣಿಗೆ ನಡೆದಿರುವ ಕಾರಣ ಪ್ರತಿಭಟನೆ ಬೇಡ ಎಂಬ ಶಾಸಕರಾದ ವಿನಯ ಕುಲಕರ್ಣಿ, ಎಸ್.ಎಸ್.ಪಾಟೀಲ ಮನವಿಗೆ ಸ್ಪಂದಿಸಿ ಅದನ್ನು ಕೈಬಿಟ್ಟರು.

ನಿರ್ಬಂಧದ ನಡುವೆಯೂ ಪಾಲ್ಗೊಂಡ ಯತ್ನಾಳ: 'ಈದ್ ಮಿಲಾದ್ ಮೆರವಣಿಗೆ ಇದ್ದ ಕಾರಣ ಕೋಮು ಸೌಹಾರ್ದ ಕಾಪಾಡುವ ದೃಷ್ಟಿಯಿಂದ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಮಾವೇಶದಲ್ಲಿ ಪಾಲ್ಗೊಳ್ಳಬಾರದು' ಎಂದು ಜಿಲ್ಲಾಧಿಕಾರಿ ನಿರ್ಬಂಧ ಹೇರಿದ್ದರು. ಆದರೂ ಯತ್ನಾಳ ಸಮಾವೇಶದಲ್ಲಿ ಪಾಲ್ಗೊಂಡು ವೇದಿಕೆ ಮೇಲೆ ಭಾಷಣ ಮಾಡಿದರು.


ವಕೀಲರ ಪರಿಷತ್‌ನಲ್ಲಿ ಪಂಚಮಸಾಲಿ ಸಮಾಜದ ವಕೀಲರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡರು ಪ್ರಜಾವಾಣಿ ಚಿತ್ರ

3 ನಿರ್ಣಯಗಳು

- ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಕಡ್ಡಾಯವಾಗಿ 2ಎ ಮೀಸಲಾತಿ ನೀಡಬೇಕು
- ಲಿಂಗಾಯತರ ಎಲ್ಲ ಒಳಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು. ಇದಕ್ಕೆ ರಾಜ್ಯ ಸರ್ಕಾರವೇ ಕೇಂದ್ರದ ಮೇಲೆ ಒತ್ತಡ ತರಬೇಕು
- ಅಕ್ಟೋಬರ್ 15ರಂದು ಮೀಸಲಾತಿ ವಿಚಾರವಾಗಿ ಚರ್ಚೆಗೆ ಅವಕಾಶ ಕೊಡಬೇಕು. ಕೊಡದೇ ಇದ್ದರೆ 10 ಸಾವಿರ ವಕೀಲರೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕು ಎಂಬ ಮೂರು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ನಗರಸಭೆ ವ್ಯಾಪ್ತಿಯಲ್ಲಿದ್ದರೂ ರಸ್ತೆ ವ್ಯವಸ್ಥೆ ಇಲ್ಲದ ಗುಡ್ಡೆಹಳ್ಳಿ ಗ್ರಾಮ

ಕೋಲಿಗೆ ಶವ ಕಟ್ಟಿ ಸಾಗಿಸಿದರು

ಪ್ರಜಾವಾಣಿ ವಾರ್ತೆ

ಕಾರವಾರ: ನಗರಸಭೆ ವ್ಯಾಪ್ತಿಯಲ್ಲೇ ಇದ್ದರೂ ರಸ್ತೆ ವ್ಯವಸ್ಥೆ ಹೊಂದಿಲ್ಲದ ಗುಡ್ಡೆಹಳ್ಳಿ ಗ್ರಾಮದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರಿಂದ ಅವರ ಶವವನ್ನು ಭಾನುವಾರ ಗ್ರಾಮಸ್ಥರು ಮರದ ಕೋಲಿಗೆ ಕಟ್ಟಿ ಐದು ಕಿ.ಮೀ ದೂರದವರೆಗೆ ಹೊತ್ತು ಸಾಗಿಸಿದರು.

ಗ್ರಾಮದ ರಾಮಾ ಮನ್ನಾ ಗೌಡ (60) ಶನಿವಾರ ತಡರಾತ್ರಿ ಹೃದಯಾಘಾತಕ್ಕೆ ಒಳಗಾಗಿದ್ದರು. ಅವರನ್ನು ಜಿಲ್ಲಾಸ್ಪತ್ರೆಗೆ ಹೊತ್ತುಕೊಂಡು ಕರೆತರಲಾಗಿತ್ತು. ಆಸ್ಪತ್ರೆಗೆ ತರುವಷ್ಟರಲ್ಲೇ ಅವರು ಮೃತಪಟ್ಟಿದ್ದರಿಂದ ಆಂಬುಲೆನ್ಸ್ ಮೂಲಕ ಮೃತದೇಹವನ್ನು ನಗರದ ಹೈಚರ್ಚ್ ರಸ್ತೆ ಕೊನೆಗೊಳ್ಳುವವರೆಗೆ ತರಲಾಯಿತು. ಅಲ್ಲಿಂದ ಗುಡ್ಡ ಏರಲು ವ್ಯವಸ್ಥಿತ ರಸ್ತೆ ಇಲ್ಲದ್ದರಿಂದ ಶವವನ್ನು ಅಲ್ಲಿಯೇ ಇಳಿಸಿ ವಾಹನ ಮರಳಿತ್ತು.

ಗ್ರಾಮದ ಐದಾರು ಮಂದಿ ಸೇರಿ ಶವಕ್ಕೆ ಕಂಬಳಿ ಸುತ್ತಿ, ಅದನ್ನು ಉದ್ದನೆಯ ದಪ್ಪ ಕೋಲಿಗೆ ಹಗ್ಗದ ಮೂಲಕ ಕಟ್ಟಿಕೊಂಡು ಸಾಗಿಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಗಣಪತಿ ಉಳ್ವೇಕರ್, ಮಾಜಿ ಸಚಿವ ಆನಂದ್ ಅಸ್ನೋಟಿಕರ್ ಕೂಡ ಸ್ಥಳದಲ್ಲಿದ್ದರು.

ನಗರದ ವಾರ್ಡ್ ನಂ.31ರ ವ್ಯಾಪ್ತಿಯಲ್ಲಿರುವ ಗುಡ್ಡೆಹಳ್ಳಿ ಗ್ರಾಮವು ಎತ್ತರದ ಗುಡ್ಡದ ಮೇಲಿದೆ. ಹಿಂದುಳಿದ ಹಾಲಕ್ಕಿ ಸಮುದಾಯಕ್ಕೆ ಸೇರಿ ಜನರ 12ಕ್ಕೂ ಹೆಚ್ಚು ಮನೆಗಳಿವೆ. ಗ್ರಾಮಕ್ಕೆ ಕಚ್ಚಾ ರಸ್ತೆ ಮಾತ್ರ ಸಂಚಾರಕ್ಕೆ ಆಧಾರವಾಗಿದ್ದು, ದ್ವಿಚಕ್ರ ವಾಹನ ಮಾತ್ರ ಸಾಗಲು ಅವಕಾಶವಿದೆ. ಮಳೆಗಾಲದಲ್ಲಿ ಕಾಲ್ನಡಿಗೆ ಹೊರತಾಗಿ ಜನರು ಸಂಚರಿಸಲು ಆಗುತ್ತಿಲ್ಲ.

'ಗುಡ್ಡೆಹಳ್ಳಿಗೆ ರಸ್ತೆ ನಿರ್ಮಿಸಲು ಹಲವು ವರ್ಷದಿಂದ ಜನರು ಒತ್ತಡ ಹೇರುತ್ತಿದ್ದರೂ ಈವರೆಗೆ ಕ್ರಮವಾಗಿಲ್ಲ. ಒಂದೂವರೆ ಕಿ.ಮೀ ಜಲ್ಲಿ ರಸ್ತೆ ಮಂಜೂರಾಗಿದ್ದು ಸದ್ಯ ಕಾಮಗಾರಿಯೂ ನಿಂತಿದೆ. ಈ ಘಟನೆಯಿಂದಾದರೂ ಆಡಳಿತ ವ್ಯವಸ್ಥೆ ಎಚ್ಚೆತ್ತು ಗ್ರಾಮಕ್ಕೆ ರಸ್ತೆ ನಿರ್ಮಿಸಿಕೊಡಲಿ' ಎಂದು 31ನೇ ವಾರ್ಡ್‌ನ ನಗರಸಭೆ ಸದಸ್ಯೆ ರುಕ್ಮಿಣಿ ಗೌಡ ಪ್ರತಿಕ್ರಿಯಿಸಿದ್ದಾರೆ.


ಕಾರವಾರದ ಗುಡ್ಡೆಹಳ್ಳಿಯ ರಾಮಾ ಗೌಡ ಅವರ ಶವಕ್ಕೆ ಗ್ರಾಮಸ್ಥರು ಕಂಬಳಿ ಸುತ್ತಿ, ಕೋಲಿಗೆ ಕಟ್ಟಿಕೊಂಡು ಭಾನುವಾರ ಹೊತ್ತೊಯ್ದರು

ಭಾವಚಿತ್ರ ದುರ್ಬಳಕೆ: ಕ್ಷಮಾಪಣೆಗೆ ಚಂದ್ರಕಾಂತ ವಡ್ಡು ತಾಕೀತು

ಪ್ರಜಾವಾಣಿ ವಾರ್ತೆ


ಚಂದ್ರಕಾಂತ ವಡ್ಡು

ಕಲಬುರಗಿ: 'ಕಲ್ಯಾಣ ಕರ್ನಾಟಕ ಉತ್ಸವ ಮತ್ತು 371 (ಜೆ) ದಶಕದ ಸಂಭ್ರಮದ ವೇಳೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು (ಕೆಕೆಆರ್‌ಟಿಸಿ) ಸಾಧಕರ ಛಾಯಾಚಿತ್ರ ಪ್ರದರ್ಶನದಲ್ಲಿ ನನ್ನ ಭಾವಚಿತ್ರವನ್ನು ದುರ್ಬಳಕೆ ಮಾಡಿಕೊಂಡು ನನ್ನ ವರ್ಚಸ್ಸು ಹಾಗೂ ಓದುಗರ ಭಾವನೆಗಳಿಗೆ ಗಾಸಿಗೊಳಿಸಿದ್ದು, ಈ ಬಗ್ಗೆ ಕ್ಷಮೆ ಕೇಳಬೇಕು' ಎಂದು ಪತ್ರಕರ್ತ ಚಂದ್ರಕಾಂತ ವಡ್ಡು ಅವರು ಪತ್ರದ ಮೂಲಕ ಕೆಕೆಆರ್‌ಟಿಸಿಗೆ ತಾಕೀತು ಮಾಡಿದ್ದಾರೆ.

'ಈಚೆಗೆ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಲೇಖಕರ ಪರಿಚಯದ ಛಾಯಾಚಿತ್ರ ಪ್ರದರ್ಶನ ಆಯೋಜಿಸಿತ್ತು. ಈ ಪ್ರದರ್ಶನದಲ್ಲಿ ನನ್ನ ಭಾವಚಿತ್ರದೊಂದಿಗೆ ಈಚೆಗೆ ನಿಧನರಾದ ಕತೆಗಾರ ರಾಜಶೇಖರ ನೀರಮಾನ್ವಿ ಅವರ ಸಾಧನೆ, ನಿಧನ ದಿನಾಂಕ ಸಹಿತ ಅಸಂಬದ್ಧವಾಗಿ ಜೋಡಿಸುವ ಮೂಲಕ ದಿ. ಕತೆಗಾರರಿಗೆ ಮತ್ತು ಜೀವಂತ ಇರುವ ನನಗೆ ಏಕಕಾಲಕ್ಕೆ ಅಪಮಾನ ಮಾಡಲಾಗಿದೆ. ಸರ್ಕಾರದ ಜವಾಬ್ದಾರಿಯುತ ಸಂಸ್ಥೆಯೊಂದರಿಂದ ಇಂತಹ ಅನುಚಿತ ನಡೆಯನ್ನು ಯಾರೂ ನಿರೀಕ್ಷಿಸುವುದಿಲ್ಲ. ಈ ಅಚಾತುರ್ಯದ ಬಗ್ಗೆ ನಾಡಿನ ಪ್ರಜ್ಞಾವಂತರು ಆಘಾತ ಮತ್ತು ಟೀಕೆಗಳನ್ನು ವ್ಯಕ್ತಪಡಿಸಿದ್ದಾರೆ' ಎಂದು ಹೇಳಿದ್ದಾರೆ.

'ನನ್ನ ಅನುಮತಿ ಇಲ್ಲದೆ ಭಾವಚಿತ್ರವನ್ನು ತಪ್ಪು ಸ್ಥಳದಲ್ಲಿ ಸಾರ್ವಜನಿಕವಾಗಿ ದುರ್ಬಳಕೆ ಮಾಡಿದ್ದರಿಂದ ನನ್ನ ಖಾಸಗಿತನಕ್ಕೂ ಹಾನಿಯಾಗಿದೆ. ಈ ಪ್ರಮಾದಕ್ಕಾಗಿ ಸಂಸ್ಥೆಯಿಂದ ಕ್ಷಮಾಪಣೆ ಮತ್ತು ಹಾನಿಗೆ ಸೂಕ್ತ ಪರಿಹಾರ ನಿರೀಕ್ಷಿಸುತ್ತೇವೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಯೂರ

ನವದೆಹಲಿ ರಾಷ್ಟ್ರೀಯ ಉದ್ಯಾನದಲ್ಲಿ ಭಾನುವಾರ ಬೆಳಿಗ್ಗೆ ಮಯೂರ ತನ್ನ ಅಷ್ಟೂ ರೆಕ್ಕೆಗಳನ್ನು ವಿಶಾಲಗೊಳಿಸಿ ಜನರ ಮನಸೂರೆಗೊಂಡ ಬಗೆ ಇದು



ರಾಮ ಮಂದಿರ ಭೇಟಿಗೆ ಅವಿಮುಕ್ತೇಶ್ವರಾನಂದ ನಿರಾಕರಣೆ 5

ಆರ್‌ಎಸ್‌ಎಸ್‌ಗೆ ಐದು ಪ್ರಶ್ನೆ ಕೇಳಿದ ಅರವಿಂದ ಕೇಜ್ರಿವಾಲ್ 5

ಗೆಹಲೋತ್ ವಿರುದ್ಧ ರಾಷ್ಟ್ರಪತಿಗೆ ದೂರು? 2B

ಅಲ್ ಜಜೀರಾ: 45 ದಿನ ಮುಚ್ಚಲು ಆದೇಶ 8



ಈದ್ ಮಿಲಾದ್ ಬೆಳಗಾವಿಯಲ್ಲಿ ಭಾನುವಾರ ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನ

ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಮೈಕ್ರೊಫೋನ್ ‘ಸ್ವಿಚ್ ಆನ್’ ಇದ್ದಾಗಲೇ ಅಮೆರಿಕ ಅಧ್ಯಕ್ಷ ಮಾತು

ಕ್ವಾಡ್‌ಗೆ ಚೀನಾ ಸವಾಲು: ಬೈಡನ್

ವಾಷಿಂಗ್ಟನ್ (ಪಿಟಿಐ): ‘ಆರ್ಥಿಕತೆ ಮತ್ತು ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳ ವಿಚಾರದಲ್ಲಿ ಚೀನಾ ಆಕ್ರಮಣಕಾರಿಯಾಗಿ ವರ್ತಿಸುತ್ತಿದ್ದು, ಈ ಮೂಲಕ ನಮಗೆ (ಕ್ವಾಡ್ ಸದಸ್ಯ ರಾಷ್ಟ್ರಗಳಿಗೆ) ಸವಾಲು ಒಡ್ಡುತ್ತಿದೆ’ ಎಂಬ ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಕ್ಕೆ ಕ್ವಾಡ್ ಶೃಂಗಸಭೆ ಶನಿವಾರ ಸಾಕ್ಷಿಯಾಯಿತು.

ಪತ್ರಕರ್ತರು ಸಭಾಂಗಣದಿಂದ ಹೊರ ನಡೆಯುತ್ತಿದ್ದ ವೇಳೆ, ಕ್ವಾಡ್ ನಾಯಕರನ್ನು ಉದ್ದೇಶಿಸಿ ಬೈಡನ್, ಈ ರೀತಿ ಹೇಳುವಾಗ ಮೈಕ್ರೊಫೋನ್ ಬಂದ್ ಆಗಿರಲಿಲ್ಲ ಎಂಬುದು ಗಮನಾರ್ಹ.

ಚೀನಾ ಒಡ್ಡುತ್ತಿರುವ ಬೆದರಿಕೆಯನ್ನು ಅಮೆರಿಕ ಗಂಭೀರವಾಗಿ ಪರಿಗಣಿಸಿದೆ ಎಂಬುದನ್ನು ಬೈಡನ್ ಅವರ ಈ ಹೇಳಿಕೆ ತೋರಿಸುತ್ತದೆ ಎಂದೇ ವಿಶ್ಲೇಷಿಸಲಾಗಿದೆ.

ವಿವಾದಿತ ದಕ್ಷಿಣ ಚೀನಾ ಸಮುದ್ರ ಹಾಗೂ ಪೂರ್ವ ಚೀನಾ ಸಮುದ್ರ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಹಾಗೂ ತನ್ನ ಸೇನಾ ಸಾಮರ್ಥ್ಯ ಹೆಚ್ಚಿಸಲು ಚೀನಾ ನಿರಂತರವಾಗಿ ಪ್ರಯತ್ನಿಸುತ್ತಿದೆ. ಹೀಗಾಗಿ, ಬೈಡನ್ ಅವರ ಹೇಳಿಕೆಗೆ ಮಹತ್ವ ಇದೆ.



ಪ್ರಧಾನಿ ಮೋದಿ, ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟೊನಿ ಅಲ್ಬನೀಸ್, ಅಮೆರಿಕ ಅಧ್ಯಕ್ಷ ಜೋ ಬೈಡನ್, ಜಪಾನ್ ಪ್ರಧಾನಿ ಕಿಶಿಡಾ ಶನಿವಾರ ನಡೆದ ಕ್ವಾಡ್ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

‘ದೇಶದ ಆರ್ಥಿಕತೆ ಕುಸಿದು ಎದುರಾಗುವ ಸವಾಲುಗಳ ಮೇಲೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಗಮನ ಹರಿಸುತ್ತಾರೆ. ಆ ಮೂಲಕ ಆಂತರಿಕವಾಗಿ ಪ್ರಕ್ಷುಬ್ಧ ಸ್ಥಿತಿ ಉಂಟಾಗುವುದನ್ನು ತಪ್ಪಿಸಿಕೊಳ್ಳುತ್ತಾರೆ’ ಎಂದು ಬೈಡನ್ ಹೇಳಿದ್ದಾರೆ.

‘ಚೀನಾದಹಿತಾಸಕ್ತಿಯನ್ನುಆಕ್ರಮಣಕಾರಿಯಾಗಿ ಮುಂದಕ್ಕೆ ಒಯ್ಯಲು ಬೇಕಾದ ಸಮಯವನ್ನು ರಾಜತಾಂತ್ರಿಕ ಕ್ರಮಗಳ ಮೂಲಕ ಜಿನ್‌ಪಿಂಗ್ ಪಡೆದುಕೊಳ್ಳುತ್ತಾರೆ. ಎದುರಾಳಿಯ ತೀವ್ರ ನಡೆಗೆ ರಾಜತಾಂತ್ರಿಕವಾಗಿ ತೀಕ್ಷ್ಣ ಪ್ರತಿಕ್ರಿಯೆ ನೀಡುವುದು ಅಗತ್ಯ’ ಎಂದಿದ್ದಾರೆ.

5ನೇ ಪುಟ ನೋಡಿ

‘ಕ್ವಾಡ್ ಯಾರ ವಿರುದ್ಧವೂ ಅಲ್ಲ’

‘ಕ್ವಾಡ್ ಸಂಘಟನೆ ಯಾವ ದೇಶದ ವಿರುದ್ಧವೂ ಅಲ್ಲ. ನಿಯಮಬದ್ಧ ಜಾಗತಿಕ ವ್ಯವಸ್ಥೆ ಹಾಗೂ ಎಲ್ಲ ದೇಶಗಳ ಸಾರ್ವಭೌಮತೆಗೆ ಗೌರವ ತೋರುವುದು ಸಂಘಟನೆಯ ಉದ್ದೇಶ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

‘ಮುಕ್ತ, ಒಳ್ಳಗೊಳ್ಳುವಿಕೆಯಿಂದ ಕೂಡಿದ ಹಾಗೂ ಪ್ರಗತಿ ಹೊಂದಿದ ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶ ನಮ್ಮ ಆದ್ಯತೆ’ ಎಂದು ‘ಕ್ವಾಡ್ ಶೃಂಗಸಭೆ’ಯಲ್ಲಿ ಶನಿವಾರ ಹೇಳಿದ್ದಾರೆ.

‘ಎಲ್ಲ ದೇಶಗಳ ಭೌಗೋಳಿಕ ಸಮಗ್ರತೆಯನ್ನು ಗೌರವಿಸುವುದು, ಎಲ್ಲ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವುದು ನಮ್ಮ ಉದ್ದೇಶ’ ಎಂದು ಯಾವುದೇ ದೇಶದ ಹೆಸರು ಉಲ್ಲೇಖಿಸದೆ ಮೋದಿ ಹೇಳಿದರು.

‘ತನ್ನ ಸದಸ್ಯ ರಾಷ್ಟ್ರಗಳಿಗೆ ನೆರವಿನ ಹಸ್ತ ಚಾಚಲು, ಅವುಗಳೊಂದಿಗೆ ಪಾಲುದಾರಿಕೆ ಸಾಧಿಸಲು ಹಾಗೂ ಅವುಗಳ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುವ ಸಲುವಾಗಿಯೇ ಕ್ವಾಡ್ ಅಸ್ತಿತ್ವಕ್ಕೆ ಬಂದಿದೆ’ ಎಂದರು.

‘ಗರ್ಭಕಂಠ ಕ್ಯಾನ್ಸರ್: ₹62 ಕೋಟಿ ದೇಣಿಗೆ’

ಗರ್ಭಕಂಠ ಕ್ಯಾನ್ಸರ್ ವಿರುದ್ಧ ಹೋರಾಡುವುದಕ್ಕಾಗಿ ಶೃಂಗಸಭೆಯಲ್ಲಿ ಘೋಷಿಸಿದ ‘ಕ್ವಾಡ್ ಕ್ಯಾನ್ಸರ್ ಮೂನ್‌ಶೂಟ್’ ಕಾರ್ಯಕ್ರಮಕ್ಕೆ ₹62 ಕೋಟಿ (75 ಲಕ್ಷ ಡಾಲರ್) ದೇಣಿಗೆ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

50 ತುಂಡಾಗಿ ಕತ್ತರಿಸಿ ಮಹಿಳೆ ಹತ್ಯೆ ಪ್ರಕರಣ: ಇಬ್ಬರು ವಶಕ್ಕೆ

ನಾಲ್ವರಿಂದ ಕೃತ್ಯ: ಪೊಲೀಸರ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಯಾಲಿಕಾವಲ್‌ನ ಬಸಪ್ಪ ಗಾರ್ಡನ್ 5ನೇ ಕ್ರಾಸ್‌ನ ಪೈಪ್‌ಲೈನ್ ರಸ್ತೆಯ ಮನೆಯಲ್ಲಿ ನಡೆದಿದ್ದ ಮಹಾಲಕ್ಷ್ಮಿ(29) ಅವರ ಕೊಲೆ ಪ್ರಕರಣ ತನಿಖೆ ನಡೆಸುತ್ತಿರುವ ಕೇಂದ್ರ ವಿಭಾಗದ ಆರು ವಿಶೇಷ ಪೊಲೀಸ್ ತಂಡಗಳು, ನಾಲ್ವರ ಪತ್ತೆಗೆ ಶೋಧ ಚುರುಕುಗೊಳಿಸಿದ್ದಾರೆ.

ತನಿಖಾ ತಂಡಕ್ಕೆ ಕೆಲವು ಸುಳಿವು ಸಿಕ್ಕಿದ್ದು ಅದನ್ನು ಆಧರಿಸಿ ತನಿಖೆ ಕೈಗೊಂಡಿದ್ದಾರೆ. ಕುಟುಂಬಸ್ಥರು ಹಾಗೂ ಮಹಾಲಕ್ಷ್ಮಿ ಅವರ ಸ್ನೇಹಿತರಿಂದ ಮಾಹಿತಿ ಕಲೆಹಾಕಿದ್ದಾರೆ. ಮಹಿಳೆಯ ಪ್ರಿಯಕರ ಸೇರಿದಂತೆ ನಾಲ್ವರ ಮೇಲೆ ಕೊಲೆಯ ಶಂಕೆ ಬಲವಾಗಿದೆ ಎಂದು ಮೂಲಗಳು ತಿಳಿಸಿವೆ.

ಮಹಾಲಕ್ಷ್ಮಿ ಅವರ ತಾಯಿ ಮೀನಾ ಚರಣ್‌ಸಿಂಗ್ ಅವರು ನೀಡಿರುವ ದೂರು ಆಧರಿಸಿ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಪ್ರಕರಣ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗುತ್ತಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

‘ಹಂತಕರು ಮಹಿಳೆಯ ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಫ್ರಿಡ್ಜ್‌ನಲ್ಲಿ ಬಚ್ಚಿಟ್ಟಿದ್ದರು. ಶನಿವಾರ ಸಂಜೆ ಪರಿಶೀಲನೆ ನಡೆಸಿದಾಗ 30 ತುಂಡಾಗಿ ಕತ್ತರಿಸಲಾಗಿದೆ ಎಂದು ಅಂದಾಜಿಸಲಾಗಿತ್ತು. ಭಾನುವಾರ ನಡೆದ ಮರಣೋತ್ತರ ಪರೀಕ್ಷೆ ವೇಳೆ, 50 ತುಂಡಾಗಿ ಕತ್ತರಿಸಲಾಗಿದೆ ಎಂಬುದು ದೃಢಪಟ್ಟಿದೆ. ಹಂತಕರು ತಲೆಯನ್ನೂ ಮೂರು ಭಾಗವಾಗಿ ಮಾಡಿದ್ದರು. ಮಹಿಳೆಯ ಕಾಲುಗಳನ್ನು ಕತ್ತರಿಸಲಾಗಿತ್ತು. ಕರುಳು, ತಲೆಯ ಕೂದಲು ಸೇರಿದಂತೆ ಇತರೆ ಭಾಗಗಳನ್ನು ಪ್ಲಾಸ್ಟಿಕ್‌ನಲ್ಲಿ ತುಂಬಿ ಇಡಲಾಗಿತ್ತು’ ಎಂದು ಮೂಲಗಳು ತಿಳಿಸಿವೆ.

3ನೇ ಪುಟ ನೋಡಿ

2 ತಾಸು ನಡೆದ ಮರಣೋತ್ತರ ಪರೀಕ್ಷೆ

ಮಹಾಲಕ್ಷ್ಮಿ ಅವರನ್ನು ನೆನಪಿಸಿಕೊಂಡು ತಾಯಿ, ಆಕೆಯ ಸಹೋದರಿ ಹಾಗೂ ಸಹೋದರರು ಶವಾಗಾರದ ಎದುರು ಕಣ್ಣೀರು ಹಾಕಿದರು. ‘ಆಕೆ ಒಳ್ಳೆಯ ಹುಡುಗಿ. ಕೃತ್ಯ ಎಸಗಿದವರಿಗೆ ಶಿಕ್ಷೆ ಆಗಬೇಕು’ ಎಂದು ಆಗ್ರಹಿಸಿದರು.

ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯಲ್ಲಿ ಎರಡು ಗಂಟೆಗಳ ಕಾಲ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ತುಂಡು ತುಂಡಾದ ದೇಹವನ್ನು ಜೋಡಿಸಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದು ಗೊತ್ತಾಗಿದೆ. ಮೃತದೇಹವನ್ನು ಯಾವ ಆಯುಧದಿಂದ ಕತ್ತರಿಸಲಾಯಿತು ಎಂದು ಪರೀಕ್ಷಿಸಲಾಯಿತು. ಮಹಿಳೆ ಸತ್ತ ನಂತರ ಆಕೆಯ ದೇಹವನ್ನು ತುಂಡು ಮಾಡಲಾಗಿತ್ತೆ? ವಿಷಕಾರಿ ವಸ್ತು ನೀಡಲಾಗಿತ್ತೇ? ತಲೆಗೆ ಹೊಡೆದು ಕೊಲೆ ಮಾಡಲಾಯಿತೆ? ಅಥವಾ ಡ್ರಗ್ಸ್ ಕೊಟ್ಟು ಹತ್ಯೆ ಮಾಡಲಾಗಿತ್ತೆ ಎಂಬುದು ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ತಿಳಿಯಲಿದೆ ಎಂದು ಮೂಲಗಳು ತಿಳಿಸಿವೆ.

ಅಂತ್ಯ ಸಂಸ್ಕಾರ: ಮರಣೋತ್ತರ ಪರೀಕ್ಷೆ ಬಳಿಕ ಮಹಾಲಕ್ಷ್ಮಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು. ವಿಲ್ಸನ್ ಗಾರ್ಡನ್‌ನಲ್ಲಿರುವ ರುದ್ರಭೂಮಿಯಲ್ಲಿ ಕುಟುಂಬ ಸದಸ್ಯರು ಅಂತ್ಯ ಸಂಸ್ಕಾರ ನೆರವೇರಿಸಿದರು.

ಅಶ್ವಿನ್ ಸ್ಪಿನ್; ಭಾರತ ವಿನ್



ಚೆನ್ನೈನಲ್ಲಿ ನಡೆದ ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರ ಬೌಲಿಂಗ್ ಮುಂದೆ ಬಾಂಗ್ಲಾದೇಶ ತಂಡವು ತಲೆಬಾಗಿತು.

522 ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿದ ವಿಕೆಟ್‌ಗಳು. ಇದರೊಂದಿಗೆ ಅವರು ವೆಸ್ಟ್ ಇಂಡೀಸ್‌ನ ಕರ್ಟ್ನಿ ವಾಲ್ಷ್ (519) ಅವರನ್ನು ಹಿಂದಿಕ್ಕಿದರು.

4 ಬಾರಿ ಅಶ್ವಿನ್ ಒಂದೇ ಟೆಸ್ಟ್ ಪಂದ್ಯದಲ್ಲಿ ಶತಕ ಮತ್ತು ಐದು ವಿಕೆಟ್ ಗೊಂಚಲು ಸಾಧನೆ

37 ಟೆಸ್ಟ್ ಕ್ರಿಕೆಟ್‌ನಲ್ಲಿ ಅಶ್ವಿನ್ ಗಳಿಸಿರುವ ಐದು ವಿಕೆಟ್‌ಗಳ ಗೊಂಚಲುಗಳು

179 ಭಾರತ ತಂಡವು ಟೆಸ್ಟ್ ಕ್ರಿಕೆಟ್‌ನಲ್ಲಿ ಜಯಿಸಿದ ಒಟ್ಟು ಪಂದ್ಯಗಳು. 92 ವರ್ಷದ ಇತಿಹಾಸದಲ್ಲಿ ಒಟ್ಟು ಸೋಲುಗಳನ್ನು (178) ದಾಟಿದ ಸಾಧನೆ ಮಾಡಿತು

ಫಲಿತಾಂಶ

ಭಾರತಕ್ಕೆ **280** ರನ್‌ಗಳ ಜಯ ಸರಣಿಯಲ್ಲಿ **1-0** ಮುನ್ನಡೆ

ಶ್ರೀಲಂಕಾ: ಮಾರ್ಕ್ಸ್‌ವಾದಿ ದಿಸ್ಸನಾಯಕೆ ಹೊಸ ಅಧ್ಯಕ್ಷ



ಕೊಲಂಬೊ (ಪಿಟಿಐ/ಎಎಫ್‌ಪಿ): ದ್ವೀಪ ರಾಷ್ಟ್ರ ಶ್ರೀಲಂಕಾದ ಹೊಸ ಅಧ್ಯಕ್ಷರಾಗಿ ಮಾರ್ಕ್ಸ್‌ವಾದಿ ರಾಜಕಾರಣಿ ಅನುರಾ ಕುಮಾರ ದಿಸ್ಸನಾಯಕೆ (56) ಆಯ್ಕೆಯಾಗಿದ್ದು, ಅವರು ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ದಿಸ್ಸನಾಯಕೆ ಅವರು ಮೊದಲ ಸುತ್ತಿನಲ್ಲಿ ಶೇ 42.31ರಷ್ಟು ಮತಗಳನ್ನು ಪಡೆದು ಮುನ್ನಡೆಯಲ್ಲಿದ್ದರು. 2ನೇ ಸುತ್ತಿನಲ್ಲಿ ವಿಜೇತರಾದರು. ಮರು ಆಯ್ಕೆ ಬಯಸಿದ್ದ ಹಾಲಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಕೇವಲ ಶೇ 17.27ರಷ್ಟು ಮತಗಳನ್ನು ಪಡೆದು, ಮೂರನೇ ಸ್ಥಾನಗಳಿಸಿ ಸೋಲು ಅನುಭವಿಸಿದರು.

ವಿರೋಧ ಪಕ್ಷವಾದ ಸಮಗಿ ಜನ ಬಲವೇಗಯ (ಎಸ್‌ಜೆಬಿ) ಅಭ್ಯರ್ಥಿ ಸಜಿತ್ ಪ್ರೇಮದಾಸ್ ಅವರು ಶೇ 32.76ರಷ್ಟು ಮತಗಳನ್ನು ಪಡೆದು ಎರಡನೇ ಸ್ಥಾನಗಳಿಸಿದ್ದರು ಎಂದು ಶ್ರೀಲಂಕಾ ಚುನಾವಣಾ ಆಯೋಗ ತಿಳಿಸಿದೆ.

5ನೇ ಪುಟ ನೋಡಿ

ಮಾಡ್ಯುಲರ್ ಆಪರೇಷನ್ ಥಿಯೇಟರ್ ಪೂರೈಕೆಗೆ ₹176 ಕೋಟಿ ಟೆಂಡರ್: ಎನ್‌. ರವಿಕುಮಾರ್ ಆರೋಪ

‘ಒ.ಟಿ ಉಪಕರಣ ಖರೀದಿಯಲ್ಲಿ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಪೂರೈಕೆ ಮಾಡುವ ಉದ್ದೇಶದಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಕರೆದಿದ್ದ ₹176 ಕೋಟಿ ವೆಚ್ಚದ 114 ಮಾಡ್ಯುಲರ್ ಆಪರೇಷನ್ ಥಿಯೇಟರ್ (ಒಟಿ) ಉಪಕರಣ ಖರೀದಿಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಆರೋಪಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಬಿಡುಗಡೆಗೊಳಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಶರಿಂದ ಅಥವಾ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಶಸ್ತ್ರಚಿಕಿತ್ಸಾ ಕೊಠಡಿಗಳಲ್ಲಿ ರೋಗಿಗಳಿಗೆ ಅತ್ಯುತ್ತಮ ಆರೋಗ್ಯ ಸೇವೆ ನೀಡುವ ನಿಟ್ಟಿನಲ್ಲಿ ನಿರ್ದೇಶನಾಲಯವು ಮಾಡ್ಯುಲರ್ ಆಪರೇಷನ್ ಥಿಯೇಟರ್ ಉಪಕರಣಗಳ ಖರೀದಿಗೆ ಅನುಮೋದನೆ ನೀಡುವಂತೆ ಕಳೆದ ವರ್ಷ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಇದಕ್ಕೆ ಸಹಮತಿ ಸೂಚಿಸಿದ ಸರ್ಕಾರವು, ಶೇ 60ರಷ್ಟು ವೆಚ್ಚವನ್ನು ತಾನು ಭರಿಸುವುದಾಗಿ ಹೇಳಿತ್ತು. ಶೇ40ರಷ್ಟನ್ನು ಸ್ವಾಯತ್ತ ಸಂಸ್ಥೆಗಳ ಆಂತರಿಕ ಸಂಪನ್ಮೂಲಗಳಿಂದ ಭರಿಸಿ ಖರೀದಿಸಲು ಕೆಲವು ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿತ್ತು ಎಂದು ಅವರು ಹೇಳಿದರು.

ಮಾರ್ಚ್ 3 ರಂದು ಟೆಂಡರ್‌ಗೆ ದಾಖಲೆ ಸಲ್ಲಿಸುವ ಪ್ರಕ್ರಿಯೆ ಆರಂಭವಾಯಿತು. ಮಾ.13 ರಂದು ಪ್ರೀಬಿಡ್ ಸಭೆ ನಡೆಯಿತು. ಏ. 1 ದಾಖಲೆ ಸಲ್ಲಿಸಲು ಕೊನೆಯ ದಿನಾಂಕವಾಗಿತ್ತು. ಏ.3 ರಂದು ತಾಂತ್ರಿಕ ಬಿಡ್ ತೆರೆಯಲಾಯಿತು. ಆದರೆ, ನಿರ್ದೇಶನಾಲಯದ ಅಧಿಕಾರಿಗಳು, ಕೆಟಿಪಿಪಿ ನಿಯಮದಂತೆ ಟೆಂಡರ್ ನಡೆಸುವ ಬದಲು, ಲಕ್ಷಣ್ಯಾ ವೆಂಚರ್ಸ್ ಪ್ರೈ. ಲಿ.ಗೆ ಅನುಕೂಲ ಮಾಡಿಕೊಡಲು ಟೆಂಡರ್ ಷರತ್ತುಗಳನ್ನೇ ಬದಲಾಯಿಸಿದರು. ಜೂನ್ 12 ರಂದು ₹176 ಕೋಟಿ ವೆಚ್ಚದ 114 ಮಾಡ್ಯುಲರ್ ಆಪರೇಷನ್ ಥಿಯೇಟರ್ ಪೂರೈಸುವಂತೆ ಈ ಕಂಪನಿಗೆ ಕಾರ್ಯಾದೇಶ ನೀಡಲಾಯಿತು ಎಂದು ರವಿಕುಮಾರ್ ವಿವರಿಸಿದರು.

ಟೆಂಡರ್‌ನಲ್ಲಿ ಒಟ್ಟು ನಾಲ್ಕು ಕಂಪನಿಗಳು ಬಿಡ್ ಸಲ್ಲಿಸಿದ್ದವು. ಕಡಿಮೆ ದರಕ್ಕೆ ಬಿಡ್ ಮಾಡಿದವರಿಗೆ ಟೆಂಡರ್ ನೀಡಬೇಕಿತ್ತು. ಆದರೆ, ಮಾರುಕಟ್ಟೆಗಿಂತ ಹೆಚ್ಚು ದರ ನಮೂದಿಸಿದ ಲಕ್ಷಣ್ಯಾ ವೆಂಚರ್ಸ್ ಪ್ರೈ.ಲಿ.ಗೆ ಟೆಂಡರ್ ನೀಡಲಾಯಿತು.

ಸಾಮಾನ್ಯವಾಗಿ ವೈದ್ಯಕೀಯ ಉಪಕರಣಗಳಿಗೆ 4 ರಿಂದ 5 ವರ್ಷ ವಾರಂಟಿ ಇರುತ್ತದೆ. ಆದರೆ, ಲಕ್ಷಾಂತರ ಮೌಲ್ಯದ ಮಾಡ್ಯುಲರ್ ಒಟಿ ಉಪಕರಣಕ್ಕೆ ಕೇವಲ ಒಂದು ವರ್ಷ ಮಾತ್ರ ವಾರಂಟಿ ಇದೆ. ವಾರಂಟಿ ಅವಧಿಯಲ್ಲಿ ಉಚಿತವಾಗಿ ಸಾಫ್ಟ್‌ವೇರ್ ನವೀಕರಣ ಒದಗಿಸುವ ಕುರಿತು ಮಾಹಿತಿಯನ್ನೂ ನೀಡಿಲ್ಲ ಎಂದು ದೂರಿದರು.

ಟೆಂಡರ್ ಪಡೆಯುವ ಸಲುವಾಗಿ ಎನ್ವಾರ್ಟಾ ಫಾರ್ಮಾ ಪ್ರೈ.ಲಿ ಎಂದು ಇದ್ದ ಹೆಸರನ್ನು ಲಕ್ಷಣ್ಯಾ ವೆಂಚರ್ಸ್ ಪ್ರೈ. ಲಿ. ಎಂಬುದಾಗಿ ಬದಲಿಸಲಾಗಿದೆ ಎಂದು ಅವರು ಹೇಳಿದರು.

‘ಸರ್ಕಾರಕ್ಕೆ ₹117 ಕೋಟಿ ನಷ್ಟ’

ಈ ಟೆಂಡರ್‌ನಿಂದಾಗಿ ಸರ್ಕಾರದ ಬೊಕ್ಕಸಕ್ಕೆ ₹117 ಕೋಟಿ ನಷ್ಟವಾಗಿದೆ ಎಂದು ರವಿಕುಮಾರ್ ದೂರಿದರು.

ಕೇರಳದ ವೈದ್ಯಕೀಯ ಸೇವಾ ನಿಗಮದ ಎಂಎಸ್ ಕ್ರಿಯೇಟಿವ್ ಹೆಲ್ತ್ ಟೆಕ್ ಪ್ರೈ.ಲಿ ಪ್ರತಿ ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗೆ ₹49.90 ಲಕ್ಷ ದಂತೆ 50 ಉಪಕರಣಗಳನ್ನು ಈ ಹಿಂದೆ ಪೂರೈಸಿದೆ. ಅದೇ ರೀತಿ ಬೆಳಗಾವಿಯ ಸ್ಮಾರ್ಟ್ ಸಿಟಿ ಲಿಮಿಟೆಡ್ ಬಿಐಎಂಎಸ್ ಆಸ್ಪತ್ರೆಯ ಟ್ರಾಮಾ ಸೆಂಟರ್‌ಗೆ ಪೂರೈಸುವಂತೆ ಪ್ರತು ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗೆ ₹1.10 ಕೋಟಿಯಂತೆ ಶಿವೋನ್ ಇಂಡಿಯಾ ಕಂಪನಿಗೆ ಕಾರ್ಯಾದೇಶ ಪತ್ರವನ್ನು ಕೊಟ್ಟಿತ್ತು. ಆದರೆ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಲಕ್ಷಣ್ಯಾ ವೆಂಚರ್ಸ್ ಪ್ರೈ.ಲಿ.ಗೆ ಪ್ರತಿ ಮಾಡ್ಯುಲರ್‌ಗೆ ಜಿಎಸ್‌ಟಿ ಸೇರಿ ₹1.53 ಕೋಟಿಗಳಂತೆ 114 ಉಪಕರಣ ಪೂರೈಕೆ ಮಾಡಲು ಕಾರ್ಯಾದೇಶ ಪತ್ರ ಕೊಟ್ಟಿದೆ ಎಂದು ಹೇಳಿದರು.

ಯಾವ ಆಸ್ಪತ್ರೆಗಳಿಗೆ ಉಪಕರಣ ಪೂರೈಕೆ?

ಹಾಸನ, ಯಾದಗಿರಿ, ಹುಬ್ಬಳ್ಳಿ, ಹಾವೇರಿ, ಬೀದರ್, ಕೊಪ್ಪಳ, ಕಲಬುರಗಿ, ಕಾರವಾರ, ಮಂಡ್ಯ, ಬೆಳಗಾವಿ, ಮೈಸೂರು ವೈದ್ಯಕೀಯ ಕಾಲೇಜು, ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ರಾಜೀವ್‌ಗಾಂಧಿ ಎದೆರೋಗ ಆಸ್ಪತ್ರೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ, ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಬೆಂಗಳೂರು ವೈದ್ಯಕೀಯ ಕಾಲೇಜು, ನೆಫ್ರೊ ಯುರಾಲಜಿ ಸಂಸ್ಥೆ, ಅಟಲ್ ಬಿಹಾರಿ ವಾಜಪೇಯಿ ವೈದ್ಯಕಿಯ ಕಾಲೇಜುಗಳಿಗೆ ಮಾಡ್ಯುಲರ್ ಆಪರೇಷನ್ ಥಿಯೇಟರ್ ಸರಬರಾಜು ಮಾಡಲಾಗುತ್ತದೆ.

ಸುದ್ದಿ 2 ನಿಮಿಷ

ವಂಚನೆ: ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷರ ವಿರುದ್ಧ ದೂರು

ಸಾಗರ: ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಯಂ ಮಾಡಿಸುವುದಾಗಿ ನಂಬಿಸಿ, ಹಣ ಪಡೆದು ವಂಚಿಸಿದ ಆರೋಪದ ಮೇರೆಗೆ ಕರ್ನಾಟಕ ರಾಜ್ಯ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಇತರ ಪದಾಧಿಕಾರಿಗಳ ವಿರುದ್ಧ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ.

ಅಧ್ಯಕ್ಷ ಗದುಗಿನ ಹನುಮಂತಗೌಡ ಕಲ್ಮನಿ, ಕಾರ್ಯದರ್ಶಿ ಹುಬ್ಬಳ್ಳಿಯ ಪೀಟರ್ ವಿನೋದ್ ಚಂದ್, ಸಾಗರ ತಾಲ್ಲೂಕಿನ ಮರತ್ತೂರು ಗ್ರಾಮದ ಶಾಲಿನಿ ಕೆ. ಅವರ ವಿರುದ್ಧ ಪ್ರಕರಣ ದಾಖಲಿಸಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಇಲ್ಲಿನ ವಿವಿಧ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಎಸ್.ಎಂ. ಗಣಪತಿ, ಕೌಶಿಕ್ ಕಾನುಗೋಡು, ಭವ್ಯಾ ವಿ., ಅಶೋಕ ಎ., ಅನೂಷಾ ಎಲ್.ವಿ. ಅವರ ಸೇವೆ ಕಾಯಂ ಮಾಡಿಸುವುದಾಗಿ ಹೇಳಿ ಆರೋಪಿಗಳು ಒಟ್ಟು ₹ 17.50 ಲಕ್ಷ ಹಣವನ್ನು ಬ್ಯಾಂಕ್ ಖಾತೆ ಮೂಲಕ ಪಡೆದುಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಅತಿಥಿ ಉಪನ್ಯಾಸಕರ ಸಂಘದ ಪದಾಧಿಕಾರಿ ಆಗಿರುವ ಕಾರಣ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಹಾಗೂ ಶಿಕ್ಷಣ ಇಲಾಖೆಯ ಆಯುಕ್ತರ ಜೊತೆ ನಿರಂತರ ಸಂಪರ್ಕದಲ್ಲಿದ್ದೇವೆ. ನಿಮ್ಮ ಸೇವೆಯನ್ನು ಶೀಘ್ರವೇ ಕಾಯಂ ಮಾಡಿಸುತ್ತೇವೆ ಎಂದು ದೂರುದಾರರನ್ನು ನಂಬಿಸಿ ಹಣ ಪಡೆದು ನಂತರ ಹಣವನ್ನು ವಾಪಸ್ ನೀಡದೆ ವಂಚಿಸಲಾಗಿದೆ’ ಎಂದು ದೂರಲಾಗಿದೆ.

ಸಿಸಿಎಫ್ ಕಚೇರಿ ಆವರಣದ ಮರಗಳಿಗೆ ಕೊಡಲಿ: ನೋಟಿಸ್



ಶಿವಮೊಗ್ಗ: ಇಲ್ಲಿನ ಚನ್ನಗಿರಿ ರಸ್ತೆಯಲ್ಲಿರುವ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಕಚೇರಿ ಆವರಣದಲ್ಲಿರುವ ಬೃಹದಾಕಾರದ ಕೆಲವು ಮರಗಳನ್ನು ಕಡಿದಿರುವ ಸಂಬಂಧ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಸಿಸಿಎಫ್‌ಗೆ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.

ವಾರದ ಹಿಂದೆ ಸಿಸಿಎಫ್ ಕಚೇರಿ ಆವರಣದಲ್ಲಿ ಸುಮಾರು 50 ವರ್ಷಗಳಷ್ಟು ಹಳೆಯದಾದ ಮೂರು ಮರಗಳನ್ನು ಕಡಿದು ಸಾಗಣೆ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಮೂರು ದಿನದೊಳಗೆ ಮಾಹಿತಿ ನೀಡುವಂತೆ ಅರಣ್ಯ ಸಚಿವರು ಸಿಸಿಎಫ್ ಕೆ.ಟಿ.ಹನುಮಂತಪ್ಪ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ಅದರ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಕಡಿದಿದ್ದು ಮಳೆ ಮರಗಳನ್ನು: ‘ಈಚೆಗೆ ಕಡಿದಿರುವುದು ಕಾಡು ಜಾತಿ ಮರಗಳನ್ನಲ್ಲ. ಬದಲಿಗೆ ಮಳೆ ಮರಗಳನ್ನು (Rain Tree). ಅಲಂಕಾರ, ನೆರಳಿಗಾಗಿ ಬೆಳೆಸುವ ಈ ಮರಗಳ ಟೊಂಗೆಗಳು ಮುರಿದು ಬಿದ್ದು ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ವಾಹನಗಳು ಜಖಂಗೊಂಡಿದ್ದವು. ಮರ ಬಿದ್ದರೆ ಜೀವಕ್ಕೆ ಅಪಾಯ ಆಗುತ್ತಿತ್ತು. ನಿಯಮಾವಳಿ ಪ್ರಕಾರವೇ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಆ ಬಗ್ಗೆ ಅರಣ್ಯ ಸಚಿವರಿಗೆ ವರದಿ ಸಲ್ಲಿಸಲಾಗಿದೆ’ ಎಂದು ಹನುಮಂತಪ್ಪ ಪ್ರತಿಕ್ರಿಯಿಸಿದರು.

ಯುಜಿಸಿಇಟಿ, ಯುಜಿನೀಟ್: ಅಂತಿಮ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಾಹಿತಿ ಕೆಇಎ ಜಾಲತಾಣದಲ್ಲಿ ಲಭ್ಯ
- ಸೆ.24, ಸೆ.25ರಂದು ಮೂಲ ದಾಖಲೆ ಸಲ್ಲಿಸಬೇಕು

ಬೆಂಗಳೂರು: ಯುಜಿ–ಸಿಇಟಿ ಮತ್ತು ಯುಜಿ–ನೀಟ್ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಭಾನುವಾರ ಪ್ರಕಟಿಸಿದೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗಳ ಎರಡನೇ ಹಂತದ ಪ್ರವೇಶ ಪ್ರಕ್ರಿಯೆ ಸೋಮವಾರದಿಂದ (ಸೆ.23) ಆರಂಭವಾಗಲಿದೆ ಎಂದು ಪ್ರಾಧಿಕಾರ ಹೇಳಿದೆ.

ವೈದ್ಯಕೀಯ ಕೋರ್ಸ್ ಹೊರತುಪಡಿಸಿ, ಸೀಟು ಹಂಚಿಕೆಯಾದ ಇತರ ಎಲ್ಲ ಕೋರ್ಸ್‌ಗಳ ಅಭ್ಯರ್ಥಿಗಳು ಸೆ.23ರ ಬೆಳಿಗ್ಗೆ 11ರಿಂದ ಸೆ.25ರ ರಾತ್ರಿ 11.59ರವರೆಗೆ ‘ಚಾಯ್ಸ್’ಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಚಾಯ್ಸ್–1 ಮತ್ತು ಚಾಯ್ಸ್–2 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಮಾತ್ರ ಸೆ.23ರಿಂದ ಸೆ.26ರ ನಡುವೆ ಶುಲ್ಕ ಪಾವತಿಸಬೇಕು.

ಚಾಯ್ಸ್–1 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಸೆ.23ರಿಂದ ಸೆ.26ರ ನಡುವೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಂಥ ಅಭ್ಯರ್ಥಿಗಳು ಸೆ.26ರ ಒಳಗೆ ಆಯಾ ಕಾಲೇಜಿಗೆ ವರದಿ ಮಾಡಿಕೊಂಡು ಪ್ರವೇಶ ಪಡೆಯಬೇಕು.

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳಿಗೆ ಎರಡನೇ ಸುತ್ತಿನಲ್ಲಿ ಚಾಯ್ಸ್ ಇರುವುದಿಲ್ಲ. ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳು ಸೆ.24ರಿಂದ ಸೆ.26ರ ನಡುವೆ ಶುಲ್ಕ ಪಾವತಿಸಬೇಕು (ಹಿಂದಿನ ಸುತ್ತಿನಲ್ಲಿ ಪಾವತಿಸಿದ್ದ ಶುಲ್ಕವನ್ನು 2ನೇ ಸುತ್ತಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ).

ವೈದ್ಯಕೀಯ ಸೀಟಿಗೆ ಪಾವತಿಸಿದ್ದ ಕಾಷನ್ ಡಿಪಾಸಿಟ್ ಅನ್ನು ಈ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾಗಿದ್ದರೆ ಮಾತ್ರ ಹೊಂದಾಣಿಕೆ ಮಾಡಲಾಗುವುದು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಮರುಪಾವತಿಸಲಾಗುವುದು. ಹಂಚಿಕೆಯಾಗಿರುವ ವೈದ್ಯಕೀಯ ಸೀಟು ಬೇಡವೆನಿಸಿದಲ್ಲಿ ಸೆ.25 ರ ಸಂಜೆ 5.30ರೊಳಗೆ ಕೆಇಎ ಕಚೇರಿಗೆ ಬಂದು ರದ್ದುಪಡಿಸಿಕೊಳ್ಳಬೇಕು. ಹೀಗೆ ರದ್ದುಪಡಿಸಿಕೊಂಡ ವರಿಗೆ ಆನ್‌ಲೈನ್ ಮಾಪ್ ಅಪ್ ರೌಂಡ್‌ನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು ಎಂದು ಕೆಇಎ ಹೇಳಿದೆ.

‘ರಾಜ್ಯಕ್ಕೆ ಬೇಕು ಪರ್ಯಾಯ ಪಕ್ಷ’

ಕರ್ನಾಟಕ ಮುಂದೇನು?: ರಾಜಕೀಯ ಚಿಂತನಾ ಸಭೆಯಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೆಹಲಿಯ ಎರಡೂ ಪಕ್ಷಗಳು ಕನ್ನಡಿಗರನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿವೆ. ಕನ್ನಡಿಗರ ಹಿತಾಸಕ್ತಿ ರಕ್ಷಣೆಗೆ ಇಲ್ಲಿಯದ್ದೇ, ಪರ್ಯಾಯ ರಾಜಕೀಯ ಮತ್ತು ರಾಜಕೀಯ ಪಕ್ಷವೊಂದರ ಅವಶ್ಯಕತೆ ಇದೆ’ ಎಂದು ರಾಜಕಾರಣಿ ಸಿ.ಎಂ.ಇಬ್ರಾಹಿಂ ಹೇಳಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರು ಆಯೋಜಿಸಿದ್ದ ಸಭೆಯಲ್ಲಿ, ‘ಕರ್ನಾಟಕ ಮುಂದೇನು?: ರಾಜಕೀಯ ಚಿಂತನಾ ಸಭೆ’ಯಲ್ಲಿ ಅವರು ಮಾತನಾಡಿದರು. ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಕ್ಷಣಾ ವೇದಿಕೆ, ಸಮತಾ ಸೈನಿಕ ದಳ ಸೇರಿ 10ಕ್ಕೂ ಹೆಚ್ಚು ಸಂಘಟನೆಗಳು ಹಾಗೂ ರಾಜಕೀಯ ನಾಯಕರು ಸಭೆಯಲ್ಲಿ ಭಾಗಿಯಾಗಿದ್ದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ರಾಜಕೀಯ ಚಿಂತನಾ ಸಭೆಗೆ ವಿವಿಧ ಸಂಘಟನೆಗಳ ಮುಖಂಡರು ಮತ್ತು ರಾಜಕಾರಣಿಗಳು ಗಿಡಕ್ಕೆ ನೀರುಣಿಸುವ ಮೂಲಕ ಚಾಲನೆ ನೀಡಿದರು —ಪ್ರಜಾವಾಣಿ ಚಿತ್ರ

ಸಭೆಯ ಉದ್ದೇಶ ಕುರಿತು ಮಾತನಾಡಿದ ಕೋಡಿಹಳ್ಳಿ ಚಂದ್ರಶೇಖರ್, ‘ರಾಜ್ಯ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಈ ಭ್ರಷ್ಟಾಚಾರವನ್ನು ಖಂಡಿಸದೆ ಇದ್ದರೆ, ನಾವೂ ಅದನ್ನು ಬೆಂಬಲಿಸಿದಂತೆ ಆಗುತ್ತದೆ. ಬಿಜೆಪಿ ಕೋಮುವಾದಿ, ಕಾಂಗ್ರೆಸ್ ಭ್ರಷ್ಟಾಚಾರಿ ಮತ್ತು ಜೆಡಿಎಸ್ ಜಾತಿವಾದಿ. ಹೀಗಾಗಿ ಪರ್ಯಾಯ ರಾಜಕೀಯ ಪಕ್ಷ ಕಟ್ಟಲೇಬೇಕಾದ ಸ್ಥಿತಿ ಬಂದೊದಗಿದೆ’ ಎಂದರು.

‘ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ರಾಷ್ಟ್ರೀಯ ಪಕ್ಷಗಳು ರಾಜ್ಯದ ಜನರನ್ನು ಒಂದೇ ರೀತಿ ನಡೆಸಿಕೊಳ್ಳುತ್ತಿವೆ. ಜೆಡಿಎಸ್ ಸಹ ಅದೇ ರೀತಿ ನಡೆದುಕೊಳ್ಳುತ್ತಿದೆ. ಪರಿಸ್ಥಿತಿ ಹೀಗಿರುವಾಗ ಕನ್ನಡಿಗರ ಹಿತಾಸಕ್ತಿ ರಕ್ಷಣೆಗಾಗಿ ಪರ್ಯಾಯ ರಾಜಕಾರಣವನ್ನು ಹುಟ್ಟುಹಾಕಬೇಕು. 2028ರ ಚುನಾವಣೆ ವೇಳೆಗೆ ಸರ್ಕಾರ ರಚಿಸುವ ಗುರಿ ಹಾಕಿಕೊಳ್ಳಬೇಕು’ ಎಂದು ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಸಭೆಯ ನಿರ್ಧಾರ ಕುರಿತು ಮಾತನಾಡಿದ ಇಬ್ರಾಹಿಂ, ‘ಈ ಸಂಬಂಧ ಹುಬ್ಬಳ್ಳಿ, ಕಲಬುರ್ಗಿ, ಮೈಸೂರು ಸೇರಿ ರಾಜ್ಯದ ಎಲ್ಲ ಪ್ರಾಂತ್ಯಗಳಲ್ಲಿ ಸಾಲು–ಸಾಲು ಸಭೆಗಳನ್ನು ನಡೆಸಬೇಕು’ ಎಂದರು.

> ಈ ಪಕ್ಷಗಳು ಜನರ ಸಮಸ್ಯೆಗಳನ್ನು ಚರ್ಚಿಸುವ ಬದಲಿಗೆ ಮಂದಿರ–ಮಸೀದಿ, ಹಿಂದೂ–ಮುಸ್ಲಿಂ, ತಿರುಪತಿ ಲಾಡು ಬಗ್ಗೆ ಮಾತನಾಡುತ್ತಲೇ ಕಾಲಹರಣ ಮಾಡುತ್ತಿವೆ
> **ಬಿ.ಟಿ.ಲಲಿತಾ ನಾಯಕ್**, ಸಾಹಿತಿ

> ಪ್ರಬಲ ಪರ್ಯಾಯ ರಾಜಕಾರಣ ಕಟ್ಟಲು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಆರಿಸಿಬಂದು ತಳಮಟ್ಟದಿಂದ ಗಟ್ಟಿಯಾಗಬೇಕು
> **ಮಾರಸಂದ್ರ ಮುನಿಯಪ್ಪ**
> ರಾಜ್ಯಾಧ್ಯಕ್ಷ, ಬಿಎಸ್‌ಪಿ

> ಇಂತಹ ಹಲವು ಚರ್ಚೆಗಳನ್ನು ನಡೆಸಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಸಮಗ್ರ ಪ್ರಣಾಳಿಕೆಯನ್ನು ಸಿದ್ದಪಡಿಸಿ, ರಾಜಕಾರಣ ಕಟ್ಟಬೇಕು
> **ಎನ್.ಮೂರ್ತಿ**
> ರಾಜ್ಯಾಧ್ಯಕ್ಷ, ಡಿಎಸ್‌ಎಸ್

> ಬೆಂಗಳೂರನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕು ಎಂದು ರಾಷ್ಟ್ರಪತಿಗೆ ಮನವಿ ಸಲ್ಲಿಸಲು ನಗರದಲ್ಲಿನ ಹಿಂದಿ ಭಾಷಿಕರು ಈಚೆಗೆ ನಿರ್ಣಯ ಅಂಗೀಕರಿಸಿದ್ದಾರೆ
> **ಟಿ.ಎ.ನಾರಾಯಣ ಗೌಡ**
> ರಾಜ್ಯಾಧ್ಯಕ್ಷ, ಕರವೇ

ಗೆಹಲೋತ್ ವಿರುದ್ಧ ರಾಷ್ಟ್ರಪತಿಗೆ ದೂರು?

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಾಜ್ಯಪಾಲರ ವಿರುದ್ಧ ‘ಕೈ’ ನಾಯಕರು ಗರಂ
- ರಾಷ್ಟ್ರಪತಿ ಭವನ ಚಲೊ ನಡೆಸಲು ಚರ್ಚೆ

ಬೆಂಗಳೂರು: ರಾಜ್ಯ ಸರ್ಕಾರ ಮತ್ತು ರಾಜಭವನದ ನಡುವೆ ಸಂಘರ್ಷ ತೀವ್ರಗೊಂಡಿರುವ ನಡುವೆಯೇ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ವಾಪಸ್ ಕರೆಸಿಕೊಳ್ಳುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮೇಲೆ ಒತ್ತಡ ಹೇರಲು ರಾಜ್ಯ ಕಾಂಗ್ರೆಸ್ ನಾಯಕರು ಗಂಭೀರ ಚಿಂತನೆ ನಡೆಸಿದ್ದಾರೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿದ ಬಳಿಕ ಆರಂಭವಾದ ‘ಸರ್ಕಾರ–ರಾಜಭವನ’ ನಡುವಿನ ಮುಸುಕಿನ ಗುದ್ದಾಟ ‘ಕೈ’ ನಾಯಕರನ್ನು ಕೆರಳಿಸಿದೆ. ವಿವಿಧ ಪ್ರಕರಣಗಳ ಮಾಹಿತಿಗಾಗಿ ರಾಜ್ಯಪಾಲರು ಪದೇ ಪದೇ ಪತ್ರ ಬರೆಯುತ್ತಿರುವುದರ ವಿರುದ್ಧ ರಾಷ್ಟ್ರಪತಿಗೆ ದೂರು ನೀಡಲು ಕೂಡಾ ನಾಯಕರು ಮುಂದಾಗಿದ್ದಾರೆ ಎಂದು ಗೊತ್ತಾಗಿದೆ.

‘ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರು, ಎಚ್.ಡಿ. ಕುಮಾರಸ್ವಾಮಿ, ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ಮತ್ತು ಜನಾರ್ದನ ರೆಡ್ಡಿ ಮೇಲಿನ ಪ್ರಕರಣಗಳಲ್ಲಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದು ತಾರತಮ್ಯ ನೀತಿ’ ಎಂದು ಆರೋಪಿಸಿ ಈಗಾಗಲೇ ರಾಜಭವನ ಚಲೋ ನಡೆಸಿರುವ ಕಾಂಗ್ರೆಸ್ ನಾಯಕರು, ರಾಷ್ಟ್ರಪತಿ ಭವನ ಚಲೋ ನಡೆಸುವ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ ಎಂಬ ಮಾಹಿತಿಯಿದೆ.

ರಾಜ್ಯಪಾಲರ ವಿರುದ್ಧ ರಾಷ್ಟ್ರಪತಿಗೆ ದೂರು ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಈಗಾಗಲೇ ಪಕ್ಷದ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಿದ್ದಾರೆ. ಆದರೆ, ಈ ವಿಚಾರದಲ್ಲಿ ಕಾಂಗ್ರೆಸ್ ವರಿಷ್ಠರು ಯಾವುದೇ ತೀರ್ಮಾನವನ್ನು ಪ್ರಕಟಿಸಿಲ್ಲ..

ಮುಡಾ ಪ್ರಕರಣದಲ್ಲಿ ರಾಜ್ಯಪಾಲರ ನಡೆಯನ್ನು ಖಂಡಿಸಿ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿದ್ದ ರಾಜ್ಯ ಸರ್ಕಾರ, ತನ್ನ ಆಕ್ಷೇಪವನ್ನೂ ವ್ಯಕ್ತಪಡಿಸಿದೆ. ರಾಜಭವನ ಚಲೋ ನಡೆಸಿ ಮನವಿ ಪತ್ರವನ್ನೂ ಸಲ್ಲಿಸಿದೆ. ಆದರೂ, ಸಚಿವರುಗಳ ವಿರುದ್ಧ ತಮಗೆ ಬರುವ ದೂರುಗಳನ್ನು ಉಲ್ಲೇಖಿಸಿ ವಿವರಣೆ ನೀಡುವಂತೆ ರಾಜ್ಯಪಾಲರು ಪತ್ರ ಬರೆಯುತ್ತಿದ್ದಾರೆ. ರಾಜ್ಯಪಾಲರ ವಿರುದ್ಧ ಹೋರಾಟ ನಡೆಸುವ ಮೂಲಕ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯುವಂತೆ ಹೈಕಮಾಂಡ್ ನಾಯಕರಿಗೆ ಮನವಿ ಮಾಡಲಾಗಿದೆ. ದೆಹಲಿಯಲ್ಲಿ ಪ್ರತಿಭಟನೆ ಹಮ್ಮಿಕೊಂಡು ಶಕ್ತಿ ಪ್ರದರ್ಶನ ಮಾಡಲು ಮತ್ತು ರಾಷ್ಟ್ರಪತಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸುವ ಬಗ್ಗೆಯೂ ಚರ್ಚೆ ನಡೆದಿದೆ ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದರು.

‘ಹೈಕಮಾಂಡ್ ಸೂಚನೆಯ ಬಳಿಕ ಪಕ್ಷದ ರಾಜ್ಯ ಘಟಕದ ನಾಯಕರು ಮುಂದಿನ ಹೋರಾಟದ ರೂಪುರೇಷೆ ತಯಾರಿಸಲಿದ್ದಾರೆ’ ಎಂದೂ ಅವರು ಹೇಳಿದರು.

545 ಪಿಎಸ್‌ಐ: ‘ಹೈ.ಕ’ ಮೀಸಲು ಜಟಾಪಟಿ

ಒಂದನೇ ಪುಟದಿಂದ...

ಎಸಿಎಸ್ ನೀಡಿದ ಸೂಚನೆಯೇನು: ಪಿಎಸ್‌ಐ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕಿದ್ದು, ಹೈದರಾಬಾದ್–ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ವಿಚಾರದಲ್ಲಿ ಸ್ಪಷ್ಟೀಕರಣ ನೀಡುವಂತೆ ಪೊಲೀಸ್ ಮಹಾ ನಿರ್ದೇಶಕರು 2024ರ ಜೂನ್ 26ರಂದು ಗೃಹ ಇಲಾಖೆಯ ಎಸಿಎಸ್‌ಗೆ ಪತ್ರ ಬರೆದಿದ್ದರು.

ಈ ಪತ್ರಕ್ಕೆ ಗುರುವಾರ (ಸೆ. 19) ಪ್ರತಿಕ್ರಿಯಿಸಿರುವ ಎಸಿಎಸ್, ‘ಪಿಎಸ್‌ಐ ಹುದ್ದೆಗಳಿಗೆ ನೇಮಕಾತಿಗೆ 2021ರ ಜ 21ರಂದು ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ಹೈ–ಕ ಭಾಗದ ಅಭ್ಯರ್ಥಿಗಳಿಗೆ ಹುದ್ದೆಗಳಲ್ಲಿ ನೀಡುವ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ 2023ರ ಫೆ. 1ರಂದು ಹೊರಡಿಸಿದ್ದ ಸುತ್ತೋಲೆಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) 2024ರ ಜ. 1ರಂದು ರದ್ದುಪಡಿಸಿದೆ. ಕೆಎಟಿ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಸಲ್ಲಿಕೆಯಾಗಿರುವ ರಿಟ್ ಅರ್ಜಿ ವಿಚಾರಣೆಯ ಹಂತದಲ್ಲಿದೆ. ಆದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) 2023ರ ಫೆ. 1ರಂದು ಹೊರಡಿಸಿದ್ದ ಸುತ್ತೋಲೆಗಿಂತ ಎರಡು ವರ್ಷ ಮೊದಲೇ 545 ಪಿಎಸ್‌ಐ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿದೆ’ ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.


‘ಹೀಗಾಗಿ, ಹೈಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಟ್ಟು ಎಂಬ ಷರತ್ತು ವಿಧಿಸಿ, ಹೈ–ಕ ಭಾಗದ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ಕುರಿತಂತೆ 2020ರ ಜೂನ್ 6ರಂದು ಡಿಪಿಎಆರ್ ಹೊರಡಿಸಿರುವ ಅಧಿಸೂಚನೆ ಅನ್ವಯ ನೇಮಕಾತಿಗೆ ಕ್ರಮ ವಹಿಸಬೇಕು. ಈ ನಿರ್ದೇಶನವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅನುಮೋದನೆಗೊಂಡಿದೆ’ ಎಂದೂ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪಿಎಸ್‌ಐ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ಆಯ್ಕೆಯಾದ ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದು, ನೇಮಕಾತಿ ಆದೇಶ ನೀಡುವಂತೆ ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಮನವಿ ಸಲ್ಲಿಸಿ ತೀವ್ರ ಒತ್ತಡ ಹೇರಿದ್ದಾರೆ. ಸಚಿವರ ಸೂಚನೆಯಂತೆ ನೇಮಕಾತಿ ಪ್ರಕ್ರಿಯೆ ತ್ವರಿತಗೊಳಿಸಲು ಗೃಹ ಇಲಾಖೆ ಮುಂದಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಕೆಎಟಿ ರದ್ದುಪಡಿಸಿದ್ದ ಸುತ್ತೋಲೆಯಲ್ಲಿ ಏನಿತ್ತು?

ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವಾಗ ಅನುಸರಿಸಬೇಕಾದ ವಿಧಿ–ವಿಧಾನಗಳನ್ನು 2023ರ ಫೆ. 1ರ ಸುತ್ತೋಲೆಯಲ್ಲಿ ವಿವರಿಸಲಾಗಿದೆ. ಈ ಸುತ್ತೋಲೆಯ ಪ್ರಕಾರ, ‘ಹುದ್ದೆಗಳಿಗೆ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ತಯಾರಿಸುವಾಗ, ಮೊದಲು ಮೆರಿಟ್ (ಅರ್ಹತಾ) ಪಟ್ಟಿ ತಯಾರಿಸಬೇಕು. ಅಭ್ಯರ್ಥಿಗಳು ಯಾವುದೇ ವೃಂದವನ್ನು ಆಯ್ಕೆ ಮಾಡಿಕೊಂಡಿದ್ದರೂ ಅದನ್ನು ಪರಿಗಣಿಸದೆ, ಮೊದಲು ಅನ್ಯ ವೃಂದದ ಹುದ್ದೆಗಳನ್ನು ತುಂಬಬೇಕು. ನಂತರ ಕಲ್ಯಾಣ ಕರ್ನಾಟಕ ಮೀಸಲಾತಿ ಅಡಿ ಮೀಸಲಿಟ್ಟ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು’ ಎಂದಿದೆ. ಇದನ್ನು ಕೆಎಟಿ ರದ್ದುಪಡಿಸಿದೆ.

ಶಿರೂರು: ಅವಶೇಷ ಪತ್ತೆ



ಪ್ರಜಾವಾಣಿ ವಾರ್ತೆ

ಕಾರವಾರ: ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿತದ ವೇಳೆ ಕಣ್ಮರೆ ಯಾಗಿದ್ದ ಗ್ಯಾಸ್ ಟ್ಯಾಂಕರ್ ಹೊತ್ತಿದ್ದ ಟ್ರಕ್‌ನ ಎಂಜಿನ್ ಭಾಗ ಮತ್ತು ದುರ್ಘಟನೆಯಲ್ಲಿ ಮೃತರಾದ ಲಕ್ಷ್ಮಣ ನಾಯ್ಕ ಅವರಿಗೆ ಸೇರಿದ್ದ ಸ್ಕೂಟರ್ ಭಾನುವಾರ ಗಂಗಾವಳಿ ನದಿಯಲ್ಲಿ ಪತ್ತೆಯಾಗಿದೆ.

ಹೂಳೆತ್ತುವ ಬಾರ್ಜ್ ಮೂಲಕ ಮಣ್ಣು ತೆರವು ಕಾರ್ಯಾಚರಣೆ ವೇಳೆ ಎಂಜಿನ್‌ನ ಬಿಡಿಭಾಗ ಪತ್ತೆಯಾಗಿದ್ದರೆ, ಸ್ಕೂಟರನ್ನು ಮುಳುಗುತಜ್ಞ ಈಶ್ವರ ಮಲ್ಪೆ ಪತ್ತೆ ಹಚ್ಚಿದ್ದರು. ಅದನ್ನು ಕ್ರೇನ್ ಸಹಾಯದೊಂದಿಗೆ ಮೇಲಕ್ಕೆತ್ತಲಾಗಿದೆ. ಇದಲ್ಲದೆ ಪಾತ್ರೆ, ಮರದ ದಿಮ್ಮಿ ಸೇರಿ ಕೆಲ ವಸ್ತುಗಳು ಸಿಕ್ಕಿವೆ.

ಸತತ ಮೂರನೇ ದಿನವೂ ಕಾರ್ಯಾಚರಣೆ ಮುಂದುವರಿದಿದ್ದು, ಮಣ್ಣಿನ ರಾಶಿ ಮತ್ತು ಬಂಡೆಕಲ್ಲು ತೆರವುಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ.

ಕಾರ್ಯಾಚರಣೆ ವೀಕ್ಷಿಸಿದ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ‘ಹತ್ತು ದಿನಗಳ ಕಾಲ ಕಾರ್ಯಾಚರಣೆ ನಡೆಸುವ ಗುರಿ ಇಟ್ಟುಕೊಂಡಿದ್ದೇವೆ. ಅಷ್ಟರೊಳಗೆ ಕೇರಳದ ಲಾರಿ, ಕಣ್ಮರೆಯಾದ ಮೂವರ ಪತ್ತೆಯಾಗುವ ವಿಶ್ವಾಸ ಇದೆ’ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಪರಿಷತ್: ಟಿಕೆಟ್‌ಗೆ ಬಿಜೆಪಿಯಲ್ಲಿ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನಪರಿಷತ್‌ನ ಸ್ಥಳೀಯ ಸಂಸ್ಥೆಗಳ ಕ್ಷೇತ್ರಕ್ಕೆ ಅ.21 ಕ್ಕೆ ಚುನಾವಣಾ ದಿನಾಂಕ ನಿಗದಿಯಾದ ಬೆನ್ನಲ್ಲೇ ಟಿಕೆಟ್‌ಗಾಗಿ ಪಕ್ಷದಲ್ಲಿ ಭಾರೀ ಪೈಪೋಟಿ ಏರ್ಪಟ್ಟಿದೆ.

ಈ ಸ್ಥಾನಕ್ಕೆ ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಉದಯಕುಮಾರ್ ಶೆಟ್ಟಿ, ಪ್ರಮೋದ್ ಮಧ್ವರಾಜ್, ಕೆ.ಸುರೇಶ್ ಕುಮಾರ್ ಮತ್ತು ಸತೀಶ್ ಕಂಪಲ ಅವರ ಹೆಸರುಗಳು ಮುನ್ನೆಲೆಗೆ ಬಂದಿವೆ.

ಆದರೆ, ನಳಿನ್ ಕುಮಾರ್ ಕಟೀಲ್ ಅವರ ಹೆಸರನ್ನೇ ಶಿಫಾರಸು ಮಾಡಿ ಕಳಿಸಬೇಕು ಎಂದು ಬಿಜೆಪಿಯ ರಾಷ್ಟ್ರೀಯ ನಾಯಕರೊಬ್ಬರು ರಾಜ್ಯ ಘಟಕಕ್ಕೆ ಸೂಚಿಸಿದ್ದಾರೆ. ಇದರಿಂದ ಅಸಮಾಧಾನಗೊಂಡಿರುವ ದಕ್ಷಿಣ ಕನ್ನಡ ಮೂಲದ ಕೆಲವು ನಾಯಕರು ಈಗಾಗಲೇ ಹಲವು ಬಾರಿ ಸಂಸದರಾಗಿರುವ ಕಟೀಲ್ ಅವರ ಬದಲಿಗೆ ಹೊಸಬರಿಗೆ ಅವಕಾಶ ಕೊಡಬೇಕು ಎಂದು ಒತ್ತಡ ಹೇರಿದ್ದಾರೆ ಎಂದು ಮೂಲಗಳು ಹೇಳಿವೆ. ನಳಿನ್ ಕುಮಾರ್ ಕಟೀಲ್ ಅವರು ಬಿ.ಎಲ್. ಸಂತೋಷ್ ಆಪ್ತ ಬಣದಲ್ಲಿ ಗುರುತಿಸಿಕೊಂಡಿದ್ದಾರೆ.

ಸಿ.ಟಿ.ರವಿ ಅವರು ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದರೂ ಅವರಿಗೆ ವಿಧಾನಪರಿಷತ್‌ಗೆ ಪ್ರವೇಶಿಸಲು ಅವಕಾಶ ನೀಡಲಾಗಿದೆ. ಕಟೀಲ್ ಅವರು ಬೇರೊಬ್ಬರಿಗಾಗಿ ತಮ್ಮ ಸೀಟನ್ನು ಬಿಟ್ಟುಕೊಟ್ಟಿದ್ದಾರೆ. ಆದ್ದರಿಂದ ಕಟೀಲ್ ಅವರಿಗೆ ಅವಕಾಶ ನೀಡಬೇಕು ಎಂದು ದೆಹಲಿ ಮೂಲದ ನಾಯಕರು ಪ್ರತಿಪಾದಿಸಿದ್ದಾರೆ ಎಂದು ಮೂಲಗಳು ಹೇಳಿವೆ. ಅಭ್ಯರ್ಥಿ ಆಯ್ಕೆಗಾಗಿ ರಾಜ್ಯ ಬಿಜೆಪಿ ನಾಯಕರ ಸಭೆ ಸೋಮವಾರ ನಡೆಯಲಿದೆ.

‘ತಲವಾರು ಹಿಡಿದ 50 ಯುವಕರ ಕಳುಹಿಸುವೆವು’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ರಾಜ್ಯ ಸರ್ಕಾರದಿಂದ ಹಿಂದೂ ಹಬ್ಬಗಳಿಗೆ ರಕ್ಷಣೆ ಇಲ್ಲ ಎಂಬುದು ಸಾಬೀತಾಗಿದೆ. ಹಾಗಾಗಿ ನಾವೇ ಶಸ್ತ್ರ ಹಿಡಿದು ಹಬ್ಬ ಆಚರಿಸಲು ನಿರ್ಧರಿಸಿದ್ದೇವೆ. ಮುಂಬರುವ ಗಣೇಶ ಚತುರ್ಥಿ ಸಂದರ್ಭದಲ್ಲಿ, ಆಯೋಜಕರು ವಿನಂತಿಸಿದರೆ ಮೆರವಣಿಗೆಯ ರಕ್ಷಣೆಗಾಗಿ 50 ಯುವಕರನ್ನು ತಲವಾರುಸಹಿತ ಕಳುಹಿಸಲು ಸಿದ್ಧ’ ಎಂದು ಶ್ರೀರಾಮಸೇನೆಯ ರಾಜ್ಯ ಘಟಕದ ಅಧ್ಯಕ್ಷ ಗಂಗಾಧರ ಕುಲಕರ್ಣಿ ತಿಳಿಸಿದರು.

ಇಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ನಿಮಗಷ್ಟೇ ಕಲ್ಲು ಹಿಡಿಯಲು, ತಲವಾರು ಹಿಡಿಯಲು ಬರುವುದಲ್ಲ. ಹಿಂದೂ ಸಮಾಜಕ್ಕೂ ಗೊತ್ತಿದೆ ಎಂದು ಮುಸ್ಲಿಂ ಗೂಂಡಾಗಳಿಗೆ ಹೇಳಬಯಸುತ್ತೇನೆ’ ಎಂದರು.

‘ನಾಗಮಂಗಲ, ದಾವಣಗೆರೆಗಳಲ್ಲಿ ಗಣೇಶೋತ್ಸವ ಮೆರವಣಿಗೆ ಸಂದರ್ಭದಲ್ಲಿ ಗಲಾಟೆ ಮಾಡಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ‘ಜಿಹಾದಿ’ ಶಕ್ತಿಗಳು ಪೆಟ್ರೋಲ್ ಬಾಂಬ್ ಎಸೆಯುವ ಮಟ್ಟಕ್ಕೆ ತಲುಪಿದ್ದಾರೆ. ರಾಜ್ಯ ಸರ್ಕಾರ ಸಂಪೂರ್ಣವಾಗಿ ಅವರ ಜೊತೆಗೆ ನಿಂತಿರುವುದೇ ಇದಕ್ಕೆ ಕಾರಣ. ಮುಸ್ಲಿಂ ಗೂಂಡಾಗಳು ‘ನಮ್ಮದೇ ಸರ್ಕಾರ ಇದೆ’ ಎಂದು ಬಹಿರಂಗವಾಗಿ ಹೇಳಿಕೆ ನೀಡುತ್ತಿದ್ದಾರೆ’ ಎಂದು ಹೇಳಿದರು.

ಗವಿಮಠದಲ್ಲಿ ಸಮಸ್ಯೆ ಬಗೆಹರಿಸಿಕೊಳ್ಳಲು ಸೂಚಿಸಿದ್ದ ಹೈಕೋರ್ಟ್

ಕೂಡಿ ಬಾಳಲು ಸ್ವಾಮೀಜಿ ಸಲಹೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಠಕ್ಕೆ ಬಾರದ ದಂಪತಿ
- ಸ್ವಾಮೀಜಿ ಭೇಟಿ ಮಾಡಿದ ದಂಪತಿ ಬಂಧುಗಳು
- ಕೋರ್ಟ್ ಸೂಚನೆಗೆ ಸಾಹಿತಿಗಳಿಂದ ವಿರೋಧ

ಕೊಪ್ಪಳ: ನ್ಯಾಯಾಲಯದಲ್ಲಿ ವಿಚ್ಛೇದನ ಕೋರಿದ್ದ ಗದಗ ಜಿಲ್ಲೆಯ ದಂಪತಿಗೆ ಇಲ್ಲಿನ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಸಮ್ಮುಖದಲ್ಲಿ ಸಮಸ್ಯೆ ಪರಿಹರಿಸಿಕೊಳ್ಳುವಂತೆ ಧಾರವಾಡದ ಹೈಕೋರ್ಟ್ ಪೀಠ ಹೇಳಿದ್ದರಿಂದ ಆ ದಂಪತಿಯ ಸಂಬಂಧಿಕರು ಮಠಕ್ಕೆ ಭೇಟಿ ನೀಡಿದರು.

ಶನಿವಾರ ಪತ್ನಿಯ ಕಡೆಯುವರು ಹಾಗೂ ಭಾನುವಾರ ಪತಿ ಕಡೆಯುವರು ಮಠಕ್ಕೆ ಬಂದಿದ್ದರು. ಆದರೆ ಆ ದಂಪತಿ ಮಠಕ್ಕೆ ಬಂದಿಲ್ಲ ಎಂದು ಮೂಲಗಳು ತಿಳಿಸಿವೆ.

‘ಈ ಸಮಸ್ಯೆ ಕುರಿತು ಸ್ವಾಮೀಜಿ ಜೊತೆ ಚರ್ಚಿಸಲಾಗಿದ್ದು ಎಲ್ಲರ ಬದುಕಿನಲ್ಲಿಯೂ ಏರಿಳಿತಗಳು ಇದ್ದೇ ಇರುತ್ತವೆ. ಹೊಂದಿಕೊಂಡು ಹೋಗುವಂತೆ ಇಬ್ಬರಿಗೂ ತಿಳಿಹೇಳಿ ಎಂದು ಸ್ವಾಮೀಜಿ ನಮಗೆ ತಿಳಿಸಿದ್ದಾರೆ’ ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಹುಡುಗನ ಸಂಬಂಧಿಕರು, ಸ್ನೇಹಿತರು ಹೇಳಿದರು.

‘ಸ್ವಾಮೀಜಿ ಮಾರ್ಗದರ್ಶನದಂತೆಯೇ ನಡೆಯಬೇಕೆಂಬ ಸಂಕಲ್ಪದೊಂದಿಗೆ ಮಠಕ್ಕೆ ಆಗಮಿಸಿದ್ದೆವು. ಅದರಂತೆಯೇ ನಡೆಯುತ್ತೇವೆ. ದಂಪತಿ ಜೊತೆಗೂ ಸ್ವಾಮೀಜಿ ಮಾತನಾಡಲಿದ್ದಾರೆ' ಎಂದರು.

ವಿರೋಧ (ಗದಗ ವರದಿ): ನ್ಯಾಯ ಕೋರಿ ಬಂದಿದ್ದ ಸತಿ–ಪತಿಗಳಿಬ್ಬರನ್ನು ನ್ಯಾಯಮೂರ್ತಿ ಕೃಷ್ಣದೀಕ್ಷಿತ್ ಅವರು ಸ್ವಾಮೀಜಿ ಮಧ್ಯಸ್ಥಿಕೆ ಯಲ್ಲಿ ವಿವಾದ ಬಗೆಹರಿಸಿಕೊಳ್ಳಲು ಸೂಚಿಸಿರುವುದು ವಿಷಾದನೀಯ ಮತ್ತು ಕಾನೂನು ಬಾಹಿರ ನಡೆಯಾಗಿದೆ ಎಂದು ನಾಡಿನ ಸಾಹಿತಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

ವಿ.ಪಿ.ನಿರಂಜನಾರಾಧ್ಯ, ಬಸವರಾಜ ಸೂಳಿಭಾವಿ, ಡಾ. ವಸುಂಧರಾ ಭೂಪತಿ, ಬಿ. ಸುರೇಶ, ಸಬಿಹಾ ಭೂಮಿಗೌಡ, ಮೂಡ್ನಾಕೂಡು ಚಿನ್ನಸ್ವಾಮಿ, ಕ.ಮ. ರವಿಶಂಕರ, ಲಕ್ಷ್ಮಣ ಕೊಡಸೆ, ಜಯಲಕ್ಷ್ಮಿ ಎಚ್.ಜಿ., ಮಂಜುನಾಥ್ ಬಿ.ಆರ್., ನಗರಗೆರೆ ರಮೇಶ, ಶರೀಫ್ ಬಿಳೆಯಲಿ ಸೇರಿದಂತೆ 50ಕ್ಕೂ ಹೆಚ್ಚು ಮಂದಿ ಜಂಟಿ ಹೇಳಿಕೆಗೆ ಸಹಿ ಮಾಡಿ, ಈ ಬಗ್ಗೆ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ.

‘ನ್ಯಾಯ ಸಿಗುತ್ತದೆ ಎನ್ನುವ ಭರವಸೆಯಿಂದ ಜನ ನ್ಯಾಯಾಲಯಕ್ಕೆ ಹೋಗುತ್ತಾರೆ. ಆದರೆ, ನ್ಯಾಯಾಧೀಶರು ತಮ್ಮ ಕಾನೂನುಬದ್ಧ ಕರ್ತವ್ಯ ನಿರ್ವಹಿಸುವ ಬದಲು, ಸತಿ–ಪತಿಯನ್ನು ಮಠಾಧೀಶರ ಬಳಿ ಮಧ್ಯಸ್ಥಿಕೆ ವಹಿಸಿ ವಿವಾದ ಬಗೆಹರಿಸಲು ಸೂಚಿಸುವುದು ಅಥವಾ ನಿರ್ದೇಶಿಸುವುದು, ಮಠಗಳು ಸಂವಿಧಾನ ಕೊಡಮಾಡಿರುವ ನ್ಯಾಯಾಲಯಗಳಿಗಿಂತ ದೊಡ್ಡವು ಎಂಬ ಭಾವನೆಯನ್ನು ಜನರಲ್ಲಿ ಬೆಳೆಸುತ್ತವೆ’ ಎಂದು ಹೇಳಿದ್ದಾರೆ.

ಶಾಸಕ ಮುನಿರತ್ನ ವಶಕ್ಕೆ ಪಡೆಯಲು ಎಸ್‌ಐಟಿ ಸಿದ್ಧತೆ

ಒಂದನೇ ಪುಟದಿಂದ...

ಇದಕ್ಕೂ ಮೊದಲು ಮುನಿರತ್ನ ವಿರುದ್ಧ ದಾಖಲಾಗಿದ್ದ ಜಾತಿ ನಿಂದನೆ ಹಾಗೂ ಕೊಲೆ ಬೆದರಿಕೆ ಪ್ರಕರಣಗಳೂ ಸೇರಿ ಒಟ್ಟು ಮೂರು ಪ್ರಕರಣಗಳ ತನಿಖೆ ನಡೆಸಲು ಸರ್ಕಾರ ಎಸ್‌ಐಟಿ ರಚಿಸಿದ್ದು, ತನಿಖಾಧಿಕಾರಿಗಳು ಸಿದ್ಧತೆ ಆರಂಭಿಸಿದ್ದಾರೆ. ಸಿಐಡಿ (ಆರ್ಥಿಕ ಅಪರಾಧಗಳು) ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದ ಎಸ್‌ಐಟಿ ರಚಿಸಲಾಗಿದ್ದು, ಮೂವರು ಐಪಿಎಸ್ ಅಧಿಕಾರಿಗಳು ತಂಡದ ಸದಸ್ಯರಾಗಿದ್ದಾರೆ.

‘ಬಾಡಿ ವಾರಂಟ್ ಮೇಲೆ ಆರೋಪಿಯನ್ನು ವಶಕ್ಕೆ ಪಡೆಯಲಾಗುವುದು. ಈ ಸಂಬಂಧ ಸೋಮವಾರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಮನವಿ ಮಾಡಲಾಗುವುದು’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

‘ಕಗ್ಗಲೀಪುರ ಠಾಣೆ ಪೊಲೀಸರು ಆರೋಪಿಯ ಪ್ರಾಥಮಿಕ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ನ್ಯಾಯಾಧೀಶರ ಎದುರು ಸಿಆರ್‌ಪಿಸಿ 164ರ ಅಡಿ ಸಂತ್ರಸ್ತೆ ಹೇಳಿಕೆ ದಾಖಲು ಮಾಡಲಾಗಿದೆ. ನ್ಯಾಯಾಲಯವು ಆರೋಪಿಯನ್ನು ತಮ್ಮ ವಶಕ್ಕೆ ನೀಡಿದರೆ ಸ್ಥಳ ಮಹಜರು ನಡೆಸಿ, ಹೇಳಿಕೆಯನ್ನು ವಿಡಿಯೊ ರೆಕಾರ್ಡ್ ಮಾಡಿಕೊಳ್ಳಲಾಗುವುದು’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬೆದರಿಕೆ ಆರೋಪ: ಕಗ್ಗಲೀಪುರ ಠಾಣೆಯಲ್ಲಿ ಸಂತ್ರಸ್ತೆ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದ್ದು, ಆರೋಪಿ ಕಡೆಯ ವರು ಸಂತ್ರಸ್ತೆ ಹಾಗೂ ಅವರ ಕುಟುಂಬದವರಿಗೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ. ಸಂತ್ರಸ್ತೆ ಕಡೆಯವರು ಯಶವಂತಪುರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆಎಚ್‌ಐಆರ್–ಸಿಟಿ ಮೊದಲ ಹಂತಕ್ಕೆ 26ರಂದು ಚಾಲನೆ: ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾಹಿತಿ

ದಾಬಸ್‌ಪೇಟೆ ಬಳಿ ಹೈಟೆಕ್ ನಗರ

- ಜಗತ್ತಿನ ಅಗ್ರಮಾನ್ಯ 500 ಶಿಕ್ಷಣ ಸಂಸ್ಥೆಗಳ ಸ್ಥಳೀಯ ಕ್ಯಾಂಪಸ್ ಸ್ಥಾಪನೆಯಾಗಲು ಹಾದಿ ಸುಗಮ
- ವೈದ್ಯಕೀಯ ಹಾಗೂ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೂ ವ್ಯಾಪಕ ಹೇರಳ ಅವಕಾಶ
- ಉದ್ದೇಶಿತ ಕೆಎಚ್‌ಐಆರ್ ಸಿಟಿಯಲ್ಲಿ ಪ್ರಮುಖ ಕಂಪನಿಗಳ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ, ಆರೋಗ್ಯ ಮತ್ತು ಕೈಗಾರಿಕಾ ಸಂಶೋಧನಾ ಕೇಂದ್ರಗಳು ಒಂದೆಡೇ ಇರಲಿರುವ 'ಜ್ಞಾನ ಆರೋಗ್ಯ ನಾವೀನ್ಯತಾ ಸಂಶೋಧನಾ ನಗರ (ಕೆಎಚ್‌ಐಆರ್‌–ಸಿಟಿ)' ಯೋಜನೆಯ ಮೊದಲ ಹಂತಕ್ಕೆ ಇದೇ 26ರಂದು ಚಾಲನೆ ನೀಡಲಾಗುತ್ತದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

2,000 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗುವ ಕೆಎಚ್‌ಐಆರ್‌–ಸಿಟಿ ಯೋಜನೆಯಿಂದ 1 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳಿದರು.

'ಇದೇ 26ರಂದು ವಿಧಾನಸೌಧದ ಬಾಂಕ್ವೆಟ್ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮೊದಲ ಹಂತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ಸಿಂಗಪುರದ ಬಯೋಪೊಲಿಸ್, ರಿಸರ್ಚ್ ಟ್ರಯಾಂಗಲ್ ಪಾರ್ಕ್, ಸೈನ್ಸ್ ಪಾರ್ಕ್, ಬೋಸ್ಟನ್‌ನ ಇನ್ನೋವೇಷನ್ ಕ್ಲಸ್ಟರ್‌ಗಳಿಂದ ಸ್ಫೂರ್ತಿ ಪಡೆದು ಕೆಎಚ್‌ಐಆರ್‌–ಸಿಟಿ ವಿನ್ಯಾಸ, ಸ್ವರೂಪ ರೂಪಿಸಲಾಗಿದೆ. ಬೆಂಗಳೂರಿನ ಹೈಟೆಕ್–ಸಿಟಿ ಮತ್ತು ಎಲೆಕ್ಟ್ರಾನಿಕ್ಸ್ ಸಿಟಿಯಿಂದಲೂ ಸ್ಫೂರ್ತಿ ಪಡೆಯಲಾಗಿದೆ' ಎಂದರು.


2,000 ಎಕರೆ
ಕೆಎಚ್‌ಐಆರ್–ಸಿಟಿಯ ಒಟ್ಟು ವಿಸ್ತೀರ್ಣ


500 ಎಕರೆ
ಮೊದಲ ಹಂತದ ಕೆಎಚ್‌ಐಆರ್–ಸಿಟಿ ವಿಸ್ತೀರ್ಣ

₹ 40,000 ಕೋಟಿ
ಯೋಜನೆಯ ಒಟ್ಟು ವೆಚ್ಚ

1 ಲಕ್ಷ
ಯೋಜನೆಯಿಂದ ಸೃಷ್ಟಿಯಾಗಲಿರುವ ಪ್ರತ್ಯಕ್ಷ–ಪರೋಕ್ಷ ಉದ್ಯೋಗಗಳ ಸಂಖ್ಯೆ

- ದೊಡ್ಡಬಳ್ಳಾಪುರ ಮತ್ತು ದಾಬಸ್‌ಪೇಟೆ ನಡುವೆ ನಿರ್ಮಾಣ





50 ಕಿ.ಮೀ.
ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಇರುವ ದೂರ

ಕಲಾವಿದನ ಕಲ್ಪನೆಯಲ್ಲಿ ಕೆಎಚ್‌ಐಆರ್–ಸಿಟಿ ಮಾದರಿ

ಸಮಿತಿ
ಯೋಜನೆಯನ್ನು ಕಾಲಮಿತಿಯಲ್ಲಿ ಅನುಷ್ಠಾನ ಮಾಡಲು, ಉದ್ಯಮಿಗಳಾದ ಡಾ.ದೇವಿ ಶೆಟ್ಟಿ, ಕಿರಣ್ ಮಜುಂದಾರ್ ಶಾ, ಮೋಹನ್‌ದಾಸ್ ಪೈ, ಪ್ರಶಾಂತ್ ಪ್ರಕಾಶ್, ಥಾಮಸ್ ಓಶಾ, ರಾನ್ ಕಿಂಬಾಲ್ ಮತ್ತು ನಿಖಿಲ್ ಕಾಮತ್ ಅವರನ್ನು ಒಳಗೊಂಡ ಮೇಲ್ವಿಚಾರಣಾ ಸಮಿತಿ ರಚಿಸಲಾಗಿದೆ.

ಮಹತ್ವಾಕಾಂಕ್ಷಿ ಗುರಿಗಳಿವೆ: ಮೋದಿ

ನ್ಯೂಯಾರ್ಕ್ (ಪಿಟಿಐ): 'ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸಲು, ಆಡಳಿತದ ಮೂರನೆಯ ಅವಧಿಯಲ್ಲಿ ಮಹತ್ವಾಕಾಂಕ್ಷಿ ಗುರಿಗಳನ್ನು ಹೊಂದಿರುವುದಾಗಿ' ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಅವರು ಇಲ್ಲಿ ಭಾರತೀಯ ಅಮೆರಿಕನ್ನರನ್ನು ಉದ್ದೇಶಿಸಿ ಮಾತನಾಡಿದರು. '10 ವರ್ಷ ತಮ್ಮ ಸರ್ಕಾರದ ಆಡಳಿತವನ್ನು ನೋಡಿದ ಜನರು ಮೂರನೆಯ ಅವಧಿಗೆ ತಮಗೆ ಅಧಿಕಾರ ನೀಡಿದ್ದಾರೆ' ಎಂದರು. ಕಾರ್ಯಕ್ರಮದಲ್ಲಿ 13 ಸಾವಿರಕ್ಕೂ ಹೆಚ್ಚು ಮಂದಿ ಭಾಗಿಯಾಗಿದ್ದರು.

40 ರಾಜ್ಯಗಳ ಭಾರತೀಯ ಅಮೆರಿಕನ್ನರು ಕಾರ್ಯಕ್ರಮದಲ್ಲಿ ಇದ್ದರು ಎಂದು ಸಂಘಟಕರು ತಿಳಿಸಿದ್ದಾರೆ. 'ಪ್ರತಿ ಭಾರತೀಯನೂ ದೇಶದ ಬಗ್ಗೆ ವಿಶ್ವಾಸ ಹೊಂದಿದ್ದಾನೆ. ಭಾರತ ಇಂದು ಅವಕಾಶಗಳಿಗಾಗಿ ಕಾಯುತ್ತ ಕೂತಿಲ್ಲ, ಅದು ತಾನೇ ಅವಕಾಶಗಳನ್ನು ಸೃಷ್ಟಿಸುತ್ತಿದೆ' ಎಂದು ಮೋದಿ ಅವರು ಹೇಳಿದರು.

'ಮಾಧ್ಯಮ ಬಲವರ್ಧನೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವ ಗಟ್ಟಿಯಾಗಿರಲು ಮಾಧ್ಯಮ ಕ್ಷೇತ್ರ ಬಲಿಷ್ಠವಾಗಿರಬೇಕು. ಸಮಾಜ ಮತ್ತು ಸರ್ಕಾರ, ಮಾಧ್ಯಮ ಕ್ಷೇತ್ರ ಹಾಗೂ ಪತ್ರಕರ್ತರಿಗೆ ಬೆಂಬಲವಾಗಿ ನಿಲ್ಲುವ ಮೂಲಕ ಶಕ್ತಿ ತುಂಬಬೇಕಿದೆ' ಎಂದು ಶಾಸಕ ರಿಜ್ವಾನ್ ಅರ್ಷದ್ ಭಾನುವಾರ ಪ್ರತಿಪಾದಿಸಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ (ಕೆಜೆಸಿಎಸ್) 2023–24ನೇ ಸಾಲಿನ ಸರ್ವ ಸದಸ್ಯರ ಸಭೆಯಲ್ಲಿ ಪ್ರತಿಭಾನ್ವಿತ ಮಕ್ಕಳನ್ನು ಪುರಸ್ಕರಿಸಿ ಅವರು ಮಾತನಾಡಿದರು.

'ಮಾಧ್ಯಮವನ್ನು ದುರ್ಬಲಗೊಳಿಸುವ ಯತ್ನಗಳು ನಡೆಯುತ್ತಿವೆ. ಪತ್ರಕರ್ತರು ಮತ್ತು ಅವರ ಕುಟುಂಬದವರಿಗೆ ಭದ್ರತೆ ದೊರೆಯಬೇಕು. ಆಗ ಮಾಧ್ಯಮಗಳು ಉಳಿಯುತ್ತವೆ' ಎಂದರು.

ಐಆರ್‌ಎಸ್ ಅಧಿಕಾರಿ ಶಾಂತಪ್ಪ ಕುರುಬರ, 'ನಾನು ಎಂಟನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪಾಸಾದೆ. ಈ ಯಶಸ್ಸಿಗೆ ಓದಿನ ಜೊತೆಗೆ ನೆರವಾಗಿದ್ದು ನನ್ನ ಸಾಮಾಜಿಕ ಕಾರ್ಯ ಗುರುತಿಸಿದ ಪತ್ರಕರ್ತರು. ನನ್ನ ಕಾರ್ಯವನ್ನು ಗುರುತಿಸಿ 'ಪ್ರಜಾವಾಣಿ ಮತ್ತು ಡೆಕ್ಕನ್‌ಹೆರಾಲ್ಡ್' ಪತ್ರಿಕೆಗಳು ನೀಡಿದ 'ಯುವ ಸಾಧಕ' ಮತ್ತು 'ಚೇಂಜ್ ಮೇಕರ್' ಪ್ರಶಸ್ತಿಗಳು, ಸಾಧನೆಗೆ ಸಹಾಯವಾಯಿತು' ಎಂದು ನೆನಪಿಸಿಕೊಂಡರು.

ಸುಮಾರು ಎಸ್ಸೆಸ್ಸೆಲ್ಸಿಯ 24, ಪಿಯುಸಿಯ 31, ನಾಲ್ವರು ಪದವೀಧರರು, ಇಬ್ಬರು ಸ್ನಾತಕೋತ್ತರ ಪದವೀಧರರು, ಮೂವರು ಎಂಜಿನಿಯರಿಂಗ್ ಪದವೀಧರರು, ಒಬ್ಬರು ವೈದ್ಯಕೀಯ ಹಾಗೂ ಇತರೇ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ನಾಲ್ವರು ಪ್ರತಿಭಾನ್ವಿತರಿಗೆ ಪುರಸ್ಕಾರ ನೀಡಲಾಯಿತು.

ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ರಮೇಶ್ ಪಾಳ್ಯ , ಉಪಾಧ್ಯಕ್ಷ ದೊಡ್ಡ ಬೊಮ್ಮಯ್ಯ, ಖಜಾಂಚಿ ಬಿ.ಎನ್. ಮೋಹನ್ ಕುಮಾರ್, ನಿರ್ದೇಶಕರಾದ ರಾಜೇಂದ್ರ ಕುಮಾರ್, ವಿನೋದ್ ಕುಮಾರ್ ಬಿ. ನಾಯ್ಕ್, ರಮೇಶ್ ಹಿರೇಜಂಬೂರು, ಧ್ಯಾನ್ ಪೂಣಚ್ಚ, ಆನಂದ್ ಪರಮೇಶ್ ಬೈದನಮನೆ, ಸೋಮಶೇಖರ್ ಕೆ.ಎಸ್., ಪರಮೇಶ್ ಕೆ.ವಿ., ವನಿತಾ, ನಯನಾ, ಕೃಷ್ಣಕುಮಾರ್ ಉಪಸ್ಥಿತರಿದ್ದರು.

ನಾಲ್ವರಿಂದ ಕೃತ್ಯ: ಪೊಲೀಸರ ಶಂಕೆ

ಒಂದನೇ ಪುಟದಿಂದ...

'ಎಫ್‌ಐಆರ್‌ನಲ್ಲಿ ಯಾರ ಹೆಸರೂ ಉಲ್ಲೇಖವಾಗಿಲ್ಲ. ಕುಟುಂಬಸ್ಥರು ನಾಲ್ವರ ಮೇಲೆ ಶಂಕೆ ವ್ಯಕ್ತಪಡಿಸಿ, ಮಾಹಿತಿ ನೀಡಿದ್ದಾರೆ. ಕೊಲೆಯಾದ ಮಹಿಳೆ ಬಳಸುತ್ತಿದ್ದ ಮೊಬೈಲ್ ಸಂಖ್ಯೆ ಪಡೆಯಲಾಗಿದೆ. ಆಕೆ ಯಾರೊಂದಿಗೆ ಚಾಟಿಂಗ್ ನಡೆಸಿದ್ದರು. ಯಾರಿಗೆಲ್ಲ ಕರೆ ಮಾಡಿದ್ದರು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ. ಮನೆಯ ಆಸುಪಾಸಿನ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಪಡೆಯಲಾಗಿದೆ. ಮಹಿಳೆಯ ಬಳಿ ನಾಲ್ಕು ಸಿಮ್‌ಗಳಿದ್ದವು' ಎಂದು ಪೊಲೀಸರು ಹೇಳಿದರು.

ಪತಿಯ ವಿಚಾರಣೆ: 'ಒಂದು ವರ್ಷದಿಂದ ಪತ್ನಿಯಿಂದ ದೂರವಾಗಿ ಪ್ರತ್ಯೇಕವಾಗಿ ನೆಲಮಂಗದಲ್ಲಿಯೇ ವಾಸ ಮಾಡುತ್ತಿದ್ದೇನೆ. ನಾಲ್ಕು ವರ್ಷದ ಹೆಣ್ಣು ಮಗು ನನ್ನ ಜತೆಗಿದೆ. ನನ್ನಿಂದ ಪತ್ನಿ ದೂರವಾದ ಮೇಲೆ ಉತ್ತರಾಖಂಡದ ವ್ಯಕ್ತಿಯ ಜತೆಗೆ ಮಹಾಲಕ್ಷ್ಮಿ ಸಲುಗೆಯಿಂದ ಇದ್ದರು. ಅವರು ಕೆಲಸ ಮಾಡುತ್ತಿದ್ದ ಮಾಲ್‌ನ ಗಾರ್ಮೆಂಟ್ಸ್ ಸೇಲ್ಸ್ ವಿಭಾಗದಲ್ಲಿ ಆತ ಸಹ ಕೆಲಸ ಮಾಡುತ್ತಿದ್ದ. ಆತನ ವಿರುದ್ಧ ನೆಲಮಂಗಲ ಠಾಣೆಗೆ ದೂರ ಸಹ ನೀಡಿದ್ದೆ' ಎಂದು ಮಹಾಲಕ್ಷ್ಮಿ ಅವರ ಪತಿ ಹೇಮಂತ್ ದಾಸ್ ಅವರು ಪೊಲೀಸರ ವಿಚಾರಣೆ ವೇಳೆ ಮಾಹಿತಿ ನೀಡಿದ್ದಾರೆ.

'ಮಹಾಲಕ್ಷ್ಮಿ ಕುಟುಂಬವು 35 ವರ್ಷಗಳಿಂದ ನೆಲಮಂಗಲದಲ್ಲಿ ವಾಸವಿದೆ. ಐದು ವರ್ಷಗಳ ಹಿಂದೆ ಮಹಾಲಕ್ಷ್ಮಿ ಅವರನ್ನು ಮದುವೆ ಆಗಿದ್ದೆ. ಅವರು ನನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಒಂಬತ್ತು ತಿಂಗಳ ಹಿಂದೆ ನನ್ನಿಂದ ಬೇರೆ ಆಗಿದ್ದರು' ಎಂದೂ ದಾಸ್ ತಿಳಿಸಿದ್ದಾರೆ.

ಇನ್ನು ಪತಿಯೂ ಪತ್ನಿ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಆಗ ಮಹಾಲಕ್ಷ್ಮಿ ಅವರನ್ನು ನೆಲಮಂಗಲ ಠಾಣೆ ಪೊಲೀಸರು ಕರೆಸಿ ವಿಚಾರಣೆ ನಡೆಸಿ ಬುದ್ಧಿಮಾತು ಹೇಳಿ ಕಳುಹಿಸಿದ್ದರು ಎಂದು ಗೊತ್ತಾಗಿದೆ. ಈ ಸಂಬಂಧ ಗಂಭೀರವಲ್ಲದ ಪ್ರಕರಣ (ಎನ್‌ಸಿಆರ್) ದಾಖಲಾಗಿತ್ತು.

ಮೆನ್ಸ್ ಪಾರ್ಲರ್ ಕೆಲಸಗಾರ ನಾಪತ್ತೆ: 'ಮೆನ್ಸ್ ಪಾರ್ಲರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವಕನ ಜತೆಗೂ ಮಹಾಲಕ್ಷ್ಮಿ ಸಲುಗೆ ಮತ್ತು ಆತ್ಮೀಯತೆ ಹೊಂದಿದ್ದರು. ಆದರೆ, ಕೆಲವು ದಿನಗಳಿಂದ ಇಬ್ಬರ ಸಂಬಂಧದಲ್ಲಿ ಬಿರುಕು ಬಿಟ್ಟಿತ್ತು. ಹೀಗಾಗಿ, ಮೆನ್ಸ್ ಪಾರ್ಲರ್ ವ್ಯಕ್ತಿಯ ಮೇಲೆ ಪೊಲೀಸರಿಗೆ ಅನುಮಾನ ಹೆಚ್ಚಾಗಿದೆ. ಆತ ಸಹ ಸೆಪ್ಟೆಂಬರ್ ಮೊದಲ ವಾರದಿಂದ ನಾಪತ್ತೆ ಆಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ರಕ್ತ ಸೋರಿ ಹುಳುಗಳ ಓಡಾಟ

'ನೇಪಾಳದಿಂದ 35 ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದು ನೆಲಮಂಗಲದಲ್ಲಿ ನೆಲಸಿದ್ದೆವು. ಪತಿ ಚರಣ್‌ಸಿಂಗ್ ರಾಣಾ ಅವರು ವಯೋವೃದ್ಧರಾಗಿದ್ದು, ಎಲ್ಲಿಯೂ ಕೆಲಸಕ್ಕೆ ಹೋಗುತ್ತಿಲ್ಲ. ನಮಗೆ ನಾಲ್ವರು ಮಕ್ಕಳಿದ್ದಾರೆ. ಮೊದಲ ಪುತ್ರಿ ಲಕ್ಷ್ಮಿ ಅಲಿಯಾಸ್ ಶಹೀದಾ ಬಷೀರ್ ಅವರು ನೆಲಮಂಗಲದ ಸೈಯದ್ ಇಮ್ರಾನ್ ಅವರನ್ನು ಪ್ರೀತಿಸಿ ಮದುವೆ ಆಗಿದ್ದಾರೆ. ದ್ವಿತೀಯ ಪುತ್ರಿ ಮಹಾಲಕ್ಷ್ಮಿ, ಈಕೆ ಹೇಮಂತ್ ದಾಸ್ ಅವರನ್ನು ಮದುವೆ ಆಗಿದ್ದರು. ಮೂರನೇ ಪುತ್ರ ಹುಕ್ಕುಂಸಿಂಗ್ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದು ಮಾರತಹಳ್ಳಿಯಲ್ಲಿ ನೆಲಸಿದ್ದಾನೆ. ಕೊನೆಯ ಮಗ ನರೇಶ್ ನಮ್ಮೊಂದಿಗೆ ಇದ್ದಾನೆ. ಹುಕ್ಕುಂಸಿಂಗ್ ಹಾಗೂ ಅವರ ಪತ್ನಿ ದೀಪಿಕಾ ಅವರು ಮಹಾಲಕ್ಷ್ಮಿ ಮನೆಯಲ್ಲಿ ಈ ಹಿಂದೆ 15 ದಿನ ವಾಸವಿದ್ದರು. ಅವರೊಂದಿಗೂ ಗಲಾಟೆ ನಡೆದ ಮೇಲೆ ಮಹಾಲಕ್ಷ್ಮಿ ಒಬ್ಬಳೇ ಇದ್ದಳು' ಎಂದು ತಾಯಿ ಮೀನಾ ರಾಣಾ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

'ಸೆ.21ರಂದು ಲಕ್ಷ್ಮಿ ಕರೆ ಮಾಡಿ ನೀಡಿದ ಮಾಹಿತಿ ಆಧರಿಸಿ ಮಹಾಲಕ್ಷ್ಮಿ ಮನೆ ಬಳಿಗೆ ಹೋಗಿ ಪರಿಶೀಲಿಸಲಾಯಿತು. ಮನೆಗೆ ಬೀಗ ಹಾಕಲಾಗಿತ್ತು. ಮನೆ ಮಾಲೀಕರ ಬಳಿ ಇನ್ನೊಂದು ಕೀ ಪಡೆದು ಬಾಗಿಲು ತೆರೆದು ನೋಡಿದಾಗ, ಬಟ್ಟೆಗಳು ಮನೆಯ ತುಂಬ ಹರಡಿದ್ದವು. ಚಪ್ಪಲಿ, ಬ್ಯಾಗ್ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸೂಟ್ ಕೇಸ್ ಸಹ ಬಿದ್ದಿತ್ತು. ಮನೆಯಲ್ಲಿದ್ದ ಫ್ರಿಡ್ಜ್‌ನಲ್ಲಿ ತಳಭಾಗದಲ್ಲಿ ರಕ್ತ ಸೋರಿದಂತೆ ಆಗಿ ಹುಳುಗಳು ಮುತ್ತಿಕ್ಕಿದ್ದವು. ಫ್ರಿಡ್ಜ್ ಬಾಗಿಲು ತೆರೆದು ನೋಡಿದಾಗ ಪುತ್ರಿಯ ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಎಲ್ಲ ಬಾಕ್ಸ್‌ನಲ್ಲಿ ತುಂಬಲಾಗಿತ್ತು' ಎಂದು ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಆ್ಯಕ್ಸೆಲ್ ಬ್ಲೇಡ್ ಹಾಗೂ ಮಚ್ಚಿನಿಂದ ದೇಹ ಕತ್ತರಿಸಲಾಗಿದೆ. ಕೃತ್ಯ ನಡೆದ ಮನೆಯಲ್ಲಿ ಕೆಲವು ಸುಳಿವುಗಳು ಸಿಕ್ಕಿವೆ ಎಂದು ಪೊಲೀಸರು ಹೇಳಿದರು.

ದೇಹದ ತುಂಡು ಎಸೆಯಲು ಯತ್ನ

ಹಂತಕರು ಮಹಿಳೆಯ ದೇಹವನ್ನು ಕತ್ತರಿಸಿ ವಿಲೇವಾರಿ ಮಾಡಲು ಪ್ರಯತ್ನಿಸಿದ್ದಾರೆ. ಕೆಲವು ಭಾಗಗಳನ್ನು ಪ್ಲಾಸ್ಟಿಕ್‌ನಲ್ಲಿ ತುಂಬಿ ಇಡಲಾಗಿದೆ. ಅದು ಸಾಧ್ಯವಾಗದೇ ಇದ್ದಾಗ ಫ್ರಿಡ್ಜ್‌ನ ಎಲ್ಲ ಬಾಕ್ಸ್‌ಗಳಿಗೆ ತುಂಬಿಟ್ಟು ಆರೋಪಿಗಳು ಪರಾರಿ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

65 ಆಂಬುಲೆನ್ಸ್‌ಗಳ ಲೋಕಾರ್ಪಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಅಪತ್ಕಾಲಿಕ ಸೇವೆ' ಯೋಜನೆಯಡಿ 65 ನೂತನ ಆಂಬುಲೆನ್ಸ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮುಂಭಾಗದಲ್ಲಿ ಸೋಮವಾರ (ಸೆ. 23) ಬೆಳಿಗ್ಗೆ 11 ಗಂಟೆಗೆ ಲೋಕಾರ್ಪಣೆ ಮಾಡಲಿದ್ದಾರೆ.

ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಸಂಭವಿಸುವ ಅಪಘಾತಗಳಲ್ಲಿನ ಗಾಯಾಳುಗಳಿಗೆ ತ್ವರಿತ ಸ್ಪಂದನೆ ಮತ್ತು ಸುವರ್ಣ ಅವಧಿಯಲ್ಲಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ಆರೋಗ್ಯ ಸಂಸ್ಥೆಗಳಿಗೆ ರವಾನಿಸಲು ಈ ಆಂಬುಲೆನ್ಸ್‌ಗಳು ಕಾರ್ಯಚರಣೆ ಮಾಡಲಿವೆ.



ಸಂಗ್ರಹ ಚಿತ್ರ

26 ಅಡ್ವಾನ್ಸ್ ಲೈಫ್ ಸಪೋರ್ಟ್ ಆಂಬುಲೆನ್ಸ್‌ಗಳು ಹಾಗೂ 39 ಬೇಸಿಕ್ ಲೈಫ್ ಸಪೋರ್ಟ್ ಆಂಬುಲೆನ್ಸ್‌ಗಳಿವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಕುಲಸಚಿವ, ಇನ್‌ಸ್ಪೆಕ್ಟರ್ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶೋತ್ಸವದಲ್ಲಿ ವಿದ್ಯಾರ್ಥಿಗಳು ಭಾಗ ವಹಿಸಬಾರದು ಎಂದು ಸುತ್ತೋಲೆ ಹೊರಡಿಸಿದ ತುಮಕೂರು ವಿಶ್ವವಿದ್ಯಾಲಯದ ಕುಲಸಚಿವರನ್ನು ಕೂಡಲೇ ವಜಾ ಮಾಡಿ ಎಂದು ಬಿಜೆಪಿಯ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಒತ್ತಾಯಿಸಿದ್ದಾರೆ.

'ಇಂತಹ ಕ್ರಮ ತೆಗೆದುಕೊಳ್ಳಿ ಎಂದು ಕುಲಸಚಿವರಿಗೆ ಪೊಲೀಸ್ ಅಧಿಕಾರಿ ಪತ್ರ ಬರೆದಿದ್ದರು. ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಕಾನೂನಿನ ಮನವರಿಕೆ ಮಾಡಲಾಗದ ಇವರು ಜವಾಬ್ದಾರಿಯುತ ಸ್ಥಾನದಲ್ಲಿ ಮುಂದುವರೆಯಲು ಯೋಗ್ಯರಲ್ಲ' ಎಂದು ಟೀಕಿಸಿದರು.

'ಸುತ್ತೋಲೆ ಹೊರಡಿಸುವ ಮೂಲಕ ವ್ಯಕ್ತಿ ಸ್ವಾತಂತ್ರ್ಯ ಮತ್ತು ಧಾರ್ಮಿಕ ಭಾವನೆಗೆ ಇಬ್ಬರೂ ಧಕ್ಕೆ ತಂದಿದ್ದಾರೆ' ಎಂದು ಆಗ್ರಹಿಸಿದ್ದಾರೆ.

ಹಿಂಡಲಗಾಗೆ ವಿಲ್ಸನ್ ಗಾರ್ಡನ್ ನಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ನಟ ದರ್ಶನ್‌ಗೆ ವಿಶೇಷ ಆತಿಥ್ಯ ನೀಡಿದ್ದ ಪ್ರಕರಣದ ಸಂಬಂಧ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ ನಾಗರಾಜ್ ಸೇರಿದಂತೆ 20 ವಿಚಾರಣಾಧೀನ ಕೈದಿಗಳನ್ನು ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಭಾನುವಾರ ಸ್ಥಳಾಂತರಿಸಲಾಗಿದೆ.

ಬಿಗಿ ಭದ್ರತೆ ಮಧ್ಯೆ ಕೈದಿಗಳನ್ನು ಕರೆದೊಯ್ಯಲಾಯಿತು. ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್ ಒಂದು ಕೈನಲ್ಲಿ ಕಾಫಿ ಕಪ್, ಮತ್ತೊಂದು ಕೈನಲ್ಲಿ ಸಿಗರೇಟ್ ಹಿಡಿದಿದ್ದ ಫೋಟೊ ಜಾಲತಾಣದಲ್ಲಿ ಸಾಕಷ್ಟು ಹರಿದಾಡಿತ್ತು. ಬಳಿಕ ಕೋರ್ಟ್ ಅನುಮತಿ ಪಡೆದು ದರ್ಶನ್‌ರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲಾಗಿತ್ತು. ನಟ ದರ್ಶನ್ ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರಣೆ ಸೋಮವಾರ ನಡೆಯಲಿದೆ. ದರ್ಶನ್ ಪರ ವಕೀಲರು, ಶನಿವಾರ ಜಾಮೀನು ಕೋರಿ ನಗರದ 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಮಲ್ಲೇಶ್ವರ ಮೈದಾನದಲ್ಲಿ ಅವಗಢ • ಬಿಬಿಎಂಪಿ ವಿರುದ್ಧ ಆಕ್ರೋಶ

ಗೇಟ್ ಬಿದ್ದು ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ರಾಜಾಶಂಕರ್ ಆಟದ ಮೈದಾನದಲ್ಲಿ ಕಬ್ಬಿಣದ ಗೇಟ್ ಬಿದ್ದು ಬಾಲಕನೊಬ್ಬ ಭಾನುವಾರ ಮೃತಪಟ್ಟಿದ್ದಾನೆ.

ಪ್ಯಾಲೇಸ್ ಗುಟ್ಟಹಳ್ಳಿಯ ವಿವೇಕಾನಂದ ಬ್ಲಾಕ್‌ನ ನಿವಾಸಿ ವಿಜಯ್ ಪವಾರ್ ಎಂಬುವರ ಪುತ್ರ ನಿರಂಜನ್ (11) ಮೃತ ಬಾಲಕ. ಈ ಬಗ್ಗೆ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬಾಲಕನ ಮೇಲೆ ಬಿದ್ದಿದ್ದ ಕಬ್ಬಿಣದ ಗೇಟ್

ಆಟದ ಮೈದಾನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿದೆ. ತೀವ್ರ ಗಾಯಗೊಂಡಿದ್ದ ಬಾಲಕನನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ಒಯ್ದಿದ್ದು, ಅಲ್ಲಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದರು.

5ನೇ ತರಗತಿ ಓದುತ್ತಿದ್ದ ಬಾಲಕ ಭಾನುವಾರ ರಜೆಯಿದ್ದರಿಂದ ಮಧ್ಯಾಹ್ನ ಆಟವಾಡಲು ರಾಜಾಶಂಕರ್ ಆಟದ ಮೈದಾನಕ್ಕೆ ತೆರಳಿದ್ದ. ಕಬ್ಬಿಣದ ಗೇಟ್ ತೆಗೆಯುವಾಗ ಏಕಾಏಕಿ ಮೈಮೇಲೆ ಬಿದ್ದಿದ್ದು, ತಲೆಗೆ ತೀವ್ರವಾಗಿ ಪೆಟ್ಟಾಗಿದ್ದರಿಂದ ಸ್ಥಳದಲ್ಲೇ ಕುಸಿದು ಬಿದ್ದಿದ್ದ.

ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಪೋಷಕರು ಆತನನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ಸೇರಿಸಿದ್ದರು. ರಕ್ತಸ್ರಾವ ದಿಂದ ಬಾಲಕ ಮೃತಪಟ್ಟಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಪೊಲೀಸರು ಹೇಳಿದರು.

ಬಿಬಿಎಂಪಿ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಸ್ಥಳೀಯರು ಹಾಗೂ ಕ್ರೀಡಾಪಟುಗಳು ಆಕ್ರೋಶ ವ್ಯಕ್ತಪಡಿಸಿದರು. ಅಧಿಕಾರಿಗಳ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಆಕ್ರೋಶ ಹೊರಹಾಕಿದರು.

ಕರ್ಕಶ ಶಬ್ದ: 712 ಪ್ರಕರಣ ದಾಖಲು

ಬೆಂಗಳೂರು: ಖಾಸಗಿ ಬಸ್ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ವಿಭಾಗದ ಪೊಲೀಸರು, ಮದ್ಯ ಸೇವಿಸಿ ಬಸ್ ಚಾಲನೆ ಮಾಡುತ್ತಿದ್ದ ಹಾಗೂ ಕರ್ಕಶ ಶಬ್ದವನ್ನು ಮೊಳಗಿಸುತ್ತ ಕಿರಿಕಿರಿ ಸಾರ್ವಜನಿಕರಿಗೆ ಉಂಟು ಮಾಡುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಶನಿವಾರ ಒಂದೇ ದಿನ 2,057 ಖಾಸಗಿ ಬಸ್ ಪರಿಶೀಲಿಸಲಾಗಿದೆ. ಮದ್ಯಪಾನ ಮಾಡಿ ಚಾಲನೆ ಮಾಡಿದ್ದ ಚಾಲಕರ ವಿರುದ್ಧ 6 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಕರ್ಕಶ ಶಬ್ದ ಮಾಡಿದ್ದವರ ವಿರುದ್ಧ 712 ಪ್ರಕರಣ ದಾಖಲು ಮಾಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

'ಸಾರ್ವಜನಿಕರ ಸಂಚಾರಕ್ಕೆ ಕಿರಿಕಿರಿ ಉಂಟು ಮಾಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಖಾಸಗಿ ಬಸ್ ಚಾಲಕರ ವಿರುದ್ಧ ಇಂತಹ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್.ಅನುಚೇತ್ ತಿಳಿಸಿದ್ದಾರೆ.

'ರೀಲ್ಸ್' ಮಾಡಲು ಕೆರೆಗೆ ಇಳಿದಿದ್ದ ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ನಶೆಯಲ್ಲಿ 'ರೀಲ್ಸ್' ಮಾಡಲು ಪಣತ್ತೂರು ಕೆರೆಗೆ ಇಳಿದಿದ್ದ ಯುವಕ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ನೇಪಾಳದ ಅನಿಲ್ (22) ಮೃತ ಯುವಕ.

ಆತನ ಜತೆಗೇ ಕೆರೆಗೆ ಇಳಿದಿದ್ದ ದಿನೇಶ್ ಎಂಬಾತ ಈಜಿ ಸುರಕ್ಷಿತವಾಗಿ ದಡ ಸೇರಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.

ನೇಪಾಳದ ಅನಿಲ್, ದಿನೇಶ್ ಹಾಗೂ ಉಪೇಂದ್ರ ಎಂಬುವವರು ಭಾನುವಾರ ಸಂಜೆ ಮದ್ಯಪಾನ ಮಾಡಿ ಪಣತ್ತೂರು ಕೆರೆ ಬಳಿ ಹೋಗಿದ್ದರು. ಈ ಪೈಕಿ ಅನಿಲ್, ದಿನೇಶ್, ರೀಲ್ಸ್ ಮಾಡಲು ಕೆರೆಗೆ ಇಳಿದಿದ್ದರು. ಉಪೇಂದ್ರ, ದಡದಲ್ಲಿ ಕುಳಿತು ಮೊಬೈಲ್‌ನಿಂದ ಆ ಇಬ್ಬರ 'ರೀಲ್ಸ್' ದೃಶ್ಯ ಚಿತ್ರೀಕರಿಸುತ್ತಿದ್ದರು.

ಆಗ ಅನಿಲ್ ನೀರಿನಲ್ಲಿ ಮುಳುಗಿದ್ದರು. ಗಾಬರಿಯಾದ ದಿನೇಶ್, ಈಜಿ ದಡಕ್ಕೆ ಬಂದಿದ್ದಾರೆ. ನಂತರ, ದಿನೇಶ್ ಮತ್ತು ಉಪೇಂದ್ರ, ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿದ್ದಾರೆ. ಕೆಲವೇ ನಿಮಿಷಗಳಲ್ಲೇ ಪೊಲೀಸರು ಸ್ಥಳಕ್ಕೆ ತೆರಳಿದ್ದರು. ಆದರೆ, ಅಷ್ಟರಲ್ಲಿ ಅನಿಲ್ ಮೃತಪಟ್ಟಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಮೂವರು ಪಣತ್ತೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಅನಿಲ್ ಮತ್ತು ದಿನೇಶ್, ಸ್ಥಳೀಯ ಅಪಾರ್ಟ್‌ಮೆಂಟ್‌ನಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಉಪೇಂದ್ರ ಅವರು ಅದೇ ಅಪಾರ್ಟ್‌ಮೆಂಟ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಶವ ಪತ್ತೆಗಾಗಿ ಬೋಟ್‌ಗಳ ಮೂಲಕ ಶೋಧ ಕಾರ್ಯ ನಡೆಸಿದ್ದು, ರಾತ್ರಿ 9 ಗಂಟೆ ಸುಮಾರಿಗೆ ಶವ ಪತ್ತೆಯಾಯಿತು. ಮಾರತ್ತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉರುಳಿದ ಮರ: ವಾಹನಗಳು ಜಖಂ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಕೆಂಗೇರಿ ಉಪನಗರದಲ್ಲಿ ಭಾನುವಾರ ಮರವೊಂದು ವಾಹನಗಳ ಮೇಲೆ ಉರುಳಿಬಿದ್ದಿದೆ.

ಒಂದು ಕಾರು ಜಖಂಗೊಂಡಿದೆ. ಬೈಕ್‌ಗೆ ಭಾಗಶಃ ಹಾನಿಯಾಗಿದೆ. ಮರ ಉರುಳಿದ ಸಂದರ್ಭದಲ್ಲಿ ರಸ್ತೆಯಲ್ಲಿ ಯಾರು ಸಂಚರಿಸದಿದ್ದ ಕಾರಣ ಭಾರೀ ಅನಾಹುತ ತಪ್ಪಿದಂತಾಗಿದೆ.

ಉಪನಗರದ 6 ನೇ ಮುಖ್ಯರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ವೇಳೆ ಜಲಮಂಡಳಿಯ ಪೈಪ್ ಒಡೆದು ನೆಲವೆಲ್ಲಾ ತೇವವಾಗಿತ್ತು. ಚರಂಡಿ ನಿರ್ಮಾಣಕ್ಕಾಗಿ ಮರದ ಪಕ್ಕದಲ್ಲಿನ ಹೂಳು ತೆಗೆಯಲಾಗಿತ್ತು. ಹೀಗಾಗಿ ಮೋರಿಯಲ್ಲಿ ಬೇರು ಬಿಟ್ಟಿದ್ದ ಮರ ಬುಡ ಸಮೇತ ರಸ್ತೆಗೆ ಉರುಳಿದೆ.

ಮಂದಗತಿ ಕಾಮಗಾರಿ: ಮೂರ್ನಾಲ್ಕು ತಿಂಗಳಿನಿಂದ ವೈಟ್ ಟಾಪಿಂಗ್ ಹಾಗೂ ಪೈಪ್ ಅಳವಡಿಕೆ ಕಾಮಗಾರಿ ನಡೆಯುತ್ತಿದ್ದು, ಮಂದಗತಿಯಲ್ಲಿ ಸಾಗುತ್ತಿದೆ. ಜನರು ಹೈರಾಣಾಗಿದ್ದಾರೆ. ಕಾಮಗಾರಿಯಿಂದಾಗಿ ಇದೇ ರಸ್ತೆಯಲ್ಲಿ ಇನ್ನೂ ಕೆಲವು ಮರಗಳು ಬೀಳುವ ಹಂತದಲ್ಲಿವೆ ಎಂದು ನಾಗರಿಕರು ಆತಂಕಗೊಂಡಿದ್ದಾರೆ.

'ಬಿಬಿಎಂಪಿ ಮತ್ತು ಜಲಮಂಡಳಿಯ ಸಮನ್ವಯತೆ ಕೊರತೆ, ಅವೈಜ್ಞಾನಿಕ ಕಾಮಗಾರಿಯಿಂದಾಗಿ ಈ ಪ್ರದೇಶದ ಹಲವು ಮನೆಗಳಲ್ಲಿ ನೀರಿನ ಸಂಪರ್ಕ ಕಡಿತಗೊಂಡಿದೆ. ಕೆಲವೆಡೆ ಕಾವೇರಿ ನೀರಿನ ಪೈಪ್ ಒಡೆದು ನೀರು ಪೋಲಾಗುತ್ತಿದೆ' ಎಂದು ಸ್ಥಳೀಯ ನಿವಾಸಿ ಶಿವರಾಜ್ ಬೇಸರ ವ್ಯಕ್ತಪಡಿಸಿದರು.



ಕೆಂಗೇರಿ ಉಪನಗರದ 6ನೇ ಮುಖ್ಯರಸ್ತೆಯಲ್ಲಿ ಮರವೊಂದು ಬಿದ್ದು ಕಾರು ಜಖಂಗೊಂಡಿದೆ.



ಭಾನುವಾರ ಸಂಜೆ ನಗರದ ಕೆಲವೆಡೆ ಸಾಧಾರಣ ಮಳೆಯಾಗಿದ್ದು, ರಾಜಾಜಿನಗರ ಕಾರ್ಡ್ ರೋಡ್‌ನಲ್ಲಿ ಮಳೆಯಿಂದ ರಕ್ಷಣೆ ಪಡೆಯಲು ಮಹಿಳೆಯೊಬ್ಬರು ಮಗುವಿನೊಂದಿಗೆ ಅಂಗಡಿ ಕಡೆಗೆ ಓಡುತ್ತಿರುವುದು ಕಂಡು ಬಂತು

ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ನಗರದಲ್ಲಿ ಇಂದು

ಮಕ್ಕಳ ಹಕ್ಕುಗಳ ಸಂರಕ್ಷಣೆ, ನಗರ ಪ್ರದೇಶಗಳಲ್ಲಿ ಮಕ್ಕಳ ವಾರ್ಡ್ ಸಮಿತಿ ರಚನೆ ಕುರಿತು ಸಮುದಾಯ ಮುಖಂಡರಿಗೆ ತರಬೇತಿ: ಉದ್ಘಾಟನೆ: ಕೆ.ನಾಗಣ್ಣಗೌಡ, ಪ್ರಾಸ್ತಾವಿಕ ಮಾತು: ಎ.ನರಸಿಂಹಮೂರ್ತಿ, ವಿಷಯ ಮಂಡನೆ: ನಾಗಸಿಂಹ ರಾವ್, ಆಯೋಜನೆ: ಸ್ಲಂ ಜನಾಂದೋಲನ, ಸ್ಥಳ: ಎಸ್‌ಸಿಎಂ ಹೌಸ್, ಸುಬ್ಬಯ್ಯ ಸರ್ಕಲ್, ಬೆಳಿಗ್ಗೆ 10

ಖರೀದಿದಾರರು ಮತ್ತು ಮಾರಾಟಗಾರರ ಭೇಟಿ-2024: ಆಯೋಜನೆ: ಕೈಮಗ್ಗ ಇಲಾಖೆ ತಮಿಳುನಾಡು, ಸ್ಥಳ: ಹೋಟೆಲ್ ಪೈ ವಿಸ್ತಾ ಕನ್ವೆನ್ಷನ್ ಹಾಲ್, ಬಸವನಗುಡಿ, ಬೆಳಿಗ್ಗೆ 10

ಕೊಕ್ಕೊ ಪಂದ್ಯಾವಳಿ: ಅತಿಥಿಗಳು: ಯಶವಂತ ವಿ. ಗುರಿಕಾರ್, ಅನಿತಾ ಜಿ. ಸಸ್ವನ್, ಅಶ್ವಿನಿ ಆಕ್ಕುಂಜಿ ಚಿದಾನಂದ, ಅಧ್ಯಕ್ಷತೆ: ಎಲ್. ರೇವಣ್ಣಸಿದ್ಧಯ್ಯ, ಆಯೋಜನೆ: ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ, ಸ್ಥಳ: ಸಿದ್ಧಗಂಗಾ ಉನ್ನತ ಪ್ರೈಮರಿ ಸ್ಕೂಲ್ ಆವರಣ, ಬೆಳಿಗ್ಗೆ 10.30

'ಡಿಜಿಟಲ್ ಮೀಡಿಯಾ ಫೆಸ್ಟ್-2024': ಉದ್ಘಾಟನೆ: ಎ.ಸಿ. ಶ್ರೀನಿವಾಸ್, ಅತಿಥಿಗಳು: ಶಿವಾನಂದ ತಗಡೂರು, ಶಿವಕುಮಾರ್ ಬೆಳ್ಳಿತಟ್ಟೆ, ರಿಜ್ವಾನ್ ಅಸದ್, ಅಧ್ಯಕ್ಷತೆ: ಮಾರ್ಟಿನ್ ಸಿ. ಬೊರಗ್ಗೆ, ಭಾಷಣಕಾರ: ರಶೀದ್ ಕಪ್ಪನ್, ಆಯೋಜನೆ: ಕರ್ನಾಟಕ ಸ್ಟೇಟ್ ಡಿಜಿಟಲ್ ಮೀಡಿಯಾ ಅಸೋಸಿಯೇಷನ್, ಸ್ಥಳ: ಗುಡ್‌ವಿಲ್ ಕ್ರಿಶ್ಚಿಯನ್ ಕಾಲೇಜ್ ಫಾರ್ ವುಮೆನ್, ಫ್ರೇಜರ್‌ಟೌನ್, ಬೆಳಿಗ್ಗೆ 10.30

ಶಿವರಾತ್ರಿ ರಾಜೇಂದ್ರ ಶಿವಯೋಗಿ ಸ್ವಾಮೀಜಿ ಅವರ ಜನ್ಮಸ್ಮರಣೆ: ಪುಷ್ಪನಮನ, ದಾಸೋಹ, ಶಿವಯೋಗಿಗಳವರ ಸಂಗ್ರಹಣೀಯ ಶಿಲ್ಪ ಅನಾವರಣ, ಆಯೋಜನೆ: ವೀರಶೈವ ಲಿಂಗಾಯತ ಮಹಾ ವೇದಿಕೆ, ಸ್ಥಳ: ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 10.30

'ಕುರುಕ್ಷೇತ್ರ ಅಥವಾ ಭಗವದ್ಗೀತೆ' ನಾಟಕ ಪ್ರದರ್ಶನ: ಆಯೋಜನೆ: ಮಾರುತಿ ಕಲಾ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ತಿಂಗಳ ಉಪನ್ಯಾಸ ಕಾರ್ಯಕ್ರಮ: 'ಪ್ರಾಕೃತ ಮತ್ತು ಕನ್ನಡ-ಕರಳು ಬಳ್ಳಿ ಸಂಬಂಧ' ಉಪನ್ಯಾಸ: ಹಂ.ಪ. ನಾಗರಾಜಯ್ಯ, ಪ್ರಸ್ತಾವನೆ: ನಾರಾಯಣ ಘಟ್ಟ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಕಚೇರಿ ಆವರಣ, ಮಲ್ಲತ್ತಹಳ್ಳಿ, ಸಂಜೆ 5

ಶಿಕ್ಷಕರ ದಿನಾಚರಣೆ: ಅತಿಥಿಗಳು: ಗೋಪಾಲನ್ ಜಗದೀಶ್, ಬಿ.ಎಸ್. ರಾಗಿಣಿ ನಾರಾಯಣ, ಅಧ್ಯಕ್ಷತೆ: ಪಿ. ದಯಾನಂದ್ ಪೈ., ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಿಎಂಎಸ್‌ಸಿಇ ಆವರಣ, ಸಂಜೆ 5

54ನೇ ಬಹುಭಾಷಾ ನಾಟಕ ಸ್ಪರ್ಧೆ-2024: ಉದ್ಘಾಟನೆ: ಚೇತನ್ ಜಯಸಿಂಗ್ ಪಾಟೀಲ್ ಔಟಿ, ಅಧ್ಯಕ್ಷತೆ: ನರಸಿಂಹ ನಾಯ್ಕ, ಅತಿಥಿ: ಶಿವಶಂಕರ್ ಜಿ., 'ಧರ್ಮನಟಿ' ನಾಟಕ ಪ್ರದರ್ಶನ: ರಚನೆ: ಸಿದ್ದಲಿಂಗ ಪಟ್ಟಣಶೆಟ್ಟಿ, ನಿರ್ದೇಶನ: ಆಸಿಫ್ ಕ್ಷತ್ರೀಯ, ಶ್ವೇತ ಶ್ರೀನಿವಾಸ್, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಸಂಸ ನಾಟಕೋತ್ಸವ: ಉದ್ಘಾಟನೆ: ಎಚ್. ಎಲ್. ಪುಷ್ಪ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿ: ಜಯಶಂಕರ್ ಬೆಳಗುಂಬ, ಉಪಸ್ಥಿತಿ: ಸೋಮಶೇಖರ್ ಎನ್.ಎ., 'ಸಂಜೆ ಹಾಡು' ನಾಟಕ ಪ್ರದರ್ಶನ: ಪ್ರಸ್ತುತಿ: ಕಲಾಸಿರಿ ನಾಟಕ ಶಾಲೆ, ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಜಯಶಂಕರ್ ಬೆಳಗುಂಬ, ಆಯೋಜನೆ: ಸಂಸ ಥಿಯೇಟರ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.45







ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದಲ್ಲಿ ಜೆಎಸ್‌ಡಬ್ಲ್ಯು ಅಕಾಡೆಮಿಕ್ ಬ್ಲಾಕ್ ಮತ್ತು ಜೆಎಸ್‌ಡಬ್ಲ್ಯು ಸೆಂಟರ್‌ಗೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಶಂಕುಸ್ಥಾಪನೆ ನೆರವೇರಿಸಿದರು. ಭಾರತದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಜೆಎಸ್‌ಡಬ್ಲ್ಯು ಫೌಂಡೇಶನ್‌ನ ಅಧ್ಯಕ್ಷೆ ಸಂಗೀತಾ ಜಿಂದಾಲ್, ಜೆಎಸ್‌ಡಬ್ಲ್ಯೂ ಸಿಮೆಂಟ್ ಮತ್ತು ಪೇಂಟ್ಸ್‌ನ ವ್ಯವಸ್ಥಾಪಕ ನಿರ್ದೇಶಕಿ ಪಾರ್ಥ್ ಜಿಂದಾಲ್ ಮತ್ತು ಬಾರ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಭಾಗವಹಿಸಿದ್ದರು (ಎಡಚಿತ್ರ) ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದ 32ನೇ ಘಟಿಕೋತ್ಸವದಲ್ಲಿ 7 ಚಿನ್ನದ ಪದಕ ಕಡೆದ ಸೌಮ್ಯಾ ಸಿಂಗ್, 6 ಚಿನ್ನದ ಪದಕ ಪಡೆದ ಅನ್‌ಮೋಲ್ ಕೊಹ್ಲಿ, 8 ಚಿನ್ನದ ಪದಕ ಪಡೆದ ಅಧಿತಿ ವಿಶ್ವಾಸ್ ಶೇಠ್, 5 ಚಿನ್ನದ ಪದಕ ಪಡೆದ ಅನುರಾಗ್ ತಿವಾರಿ, 4 ಚಿನ್ನದ ಪದಕ ಪಡೆದ ಆಡಿನ್ ಕಾಶಿಸ್ ಗುಪ್ತ

ಪ್ರಜಾವಾಣಿ ಚಿತ್ರಗಳು

ರಾಷ್ಟ್ರೀಯ ಕಾನೂನು ಶಾಲೆ ವಿ.ವಿ ಘಟಿಕೋತ್ಸವದಲ್ಲಿ ಸಿಜೆಐ ಡಿ.ವೈ. ಚಂದ್ರಚೂಡ್ ಅಭಿಮತ

ವಕೀಲರಿಗೆ ಸಂವಿಧಾನವೇ ಮೌಲ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನವು ಪ್ರತಿಪಾದಿಸುವ ಅಂಶಗಳೇ ವಕೀಲರಿಗೆ ಮೌಲ್ಯಗಳು' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮತ್ತು ರಾಷ್ಟ್ರೀಯ ಕಾನೂನು ವಿಶ್ವವಿಶ್ವವಿದ್ಯಾಲಯದ ಕುಲಾಧಿಪತಿ ಡಿ.ವೈ. ಚಂದ್ರಚೂಡ್ ಇಲ್ಲಿ ಅಭಿಪ್ರಾಯಪಟ್ಟರು.

ಭಾನುವಾರ ಇಲ್ಲಿ ನಡೆದ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದ 32ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 'ಮಾನವೀಯತೆ ಹೊಂದಿರುವ, ಒಳಧ್ವನಿಗೆ ಕಿವಿಯಾಗುವ ವಕೀಲರು ಯಶಸ್ವಿಯಾಗುತ್ತಾರೆ' ಎಂದು ಪ್ರತಿಪಾದಿಸಿದರು.

'ಕಾನೂನು ಪದವಿ ಪಡೆದು ವಿಶ್ವವಿದ್ಯಾಲಯದಲ್ಲಿ ಹೊರ ಹೋದ ಬಳಿಕ ನಿಮ್ಮ ಸಂಪರ್ಕಕ್ಕೆ ವೈವಿಧ್ಯಮಯ ಜನರು ಬರಲಿದ್ದಾರೆ. ಜನರ ನೋವುಗಳಿಗೆ ಧ್ವನಿಯಾಗಬೇಕು. ಅವರ ಬಗ್ಗೆ ಸಹಾನುಭೂತಿ ಹೊಂದಿರಬೇಕು. ಕಾನೂನುಗಳನ್ನು ಗೌರವಿಸಿ ನ್ಯಾಯ ಒದಗಿಸಲು ಪ್ರಯತ್ನಿಸಬೇಕು' ಎಂದು ಸಲಹೆ ನೀಡಿದರು.

ಮುಖ್ಯಾಂಶಗಳು
- ವೃತ್ತಿಬದುಕಿಗೆ ಸ್ವಂತಿಕೆ, ಮೌಲ್ಯಗಳು ಅಗತ್ಯ
- ಜನರ ನೋವುಗಳಿಗೆ ಧ್ವನಿಯಾಗಿ
- ಉತ್ತಮ, ನಿಕಟ ಸ್ನೇಹಬಳಗ ಹೊಂದಿ

ವೃತ್ತಿ ಜೀವನದ ಆರಂಭದಲ್ಲಿ ಪ್ರತಿ ಘಟನೆಯೂ ಜೀವನ್ಮರಣದ ಪ್ರಶ್ನೆಯಾಗಬಹುದು. ಆಗ ಅಭದ್ರತೆ, ಒಂಟಿತನ, ಅಸಾಮರ್ಥ್ಯದ ಭಾವ ಕಾಡಬಹುದು. ಜುಗುಪ್ಸೆಗೆ ಒಳಗಾಗಬಹುದು. ಯಾರೂ ಒಂಟಿ ಎಂದು ಭಾವಿಸದೇ ಸಂಕಷ್ಟಗಳನ್ನು ಎದುರಿಸಲು ಬಲಿಷ್ಠ ಬೆಂಬಲ ಜಾಲವನ್ನು ಕಟ್ಟಿಕೊಳ್ಳಬೇಕು. ಉತ್ತಮ ಮತ್ತು ನಿಕಟ ಸ್ನೇಹಿತರನ್ನು ಹೊಂದುವುದರ ಜೊತೆಗೆ ಕುಟುಂಬದ ಸದಸ್ಯರೊಂದಿಗೆ ನೋವು ಹಂಚಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿ ವ್ಯಕ್ತಿಯ ಸ್ವಾತಂತ್ರ್ಯ, ಘನತೆ, ಸ್ವಾಯತ್ತೆಯಂತಹ ಶಾಶ್ವತ ಮೌಲ್ಯಗಳ ರಕ್ಷಣೆಗೆ ನಿಲ್ಲಬೇಕು. ವೃತ್ತಿ ಜೀವನದಲ್ಲಿ ಸ್ವಂತಿಕೆ, ವೈಯಕ್ತಿಕ ಅನುಭವ, ಮೌಲ್ಯಗಳು ಮುಖ್ಯ ಎಂದು ಪ್ರತಿಪಾದಿಸಿದರು.

ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಮಾತನಾಡಿ, 'ವಕೀಲರಿಗೆ ಆಧುನಿಕ ತಂತ್ರಜ್ಞಾನದ ಅರಿವು ಇರಬೇಕು. ಸಮಾಜದಲ್ಲಿ ಉಂಟಾಗುವ ಆರ್ಥಿಕ ಮತ್ತು ಸಾಮಾಜಿಕ ಸ್ಥಿತ್ಯಂತರದ ಅರಿವೂ ಇರಬೇಕು. ಮಾನವೀಯತೆ ಮತ್ತು ದೂರದೃಷ್ಟಿ ಇಟ್ಟುಕೊಂಡು ಕಾರ್ಯನಿರ್ವಹಿಸಬೇಕು' ಎಂದು ಸಲಹೆ ನೀಡಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಕುಲಪತಿ ಸುಧೀರ್‌ಕೃಷ್ಣ, ಬಾರ್ ಕೌನ್ಸಿಲ್ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಉಪಸ್ಥಿತರಿದ್ದರು.

ಪದವಿ ಪ್ರದಾನ

ಒಟ್ಟು 1,079 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಎರಡು ಪಿಎಚ್.ಡಿ, 52 ಸ್ನಾತಕೋತ್ತರ ಸಾರ್ವಜನಿಕ ನೀತಿ ಕಾರ್ಯಕ್ರಮಗಳು, 90 ಸ್ನಾತಕೋತ್ತರ ಕಾನೂನು ಕಾರ್ಯಕ್ರಮ, 85 ಕಲಾ ಮತ್ತು ಕಾನೂನು (ಆನರ್ಸ್) ಮತ್ತು 850 ಆನ್‌ಲೈನ್ ಮತ್ತು ಹೈಬ್ರಿಡ್ ಶಿಕ್ಷಣ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೊಮಾ ಪದವಿ ಪಡೆದರು.

'ಗಂಗಾ ಆರತಿ' ಮಾದರಿ ಕ್ರಮ – ಎನ್. ಚಲುವರಾಯಸ್ವಾಮಿ

ಕಾವೇರಿ ಆರತಿ: ಶೀಘ್ರ ವರದಿ

• ಕೆ.ಎಸ್. ಸುನಿಲ್

ವಾರಾಣಸಿ, ಉತ್ತರ ಪ್ರದೇಶ: 'ಗಂಗಾ ಆರತಿ' ಮಾದರಿಯಲ್ಲಿ ರಾಜ್ಯದಲ್ಲೂ ಕಾವೇರಿ ಆರತಿ ನಡೆಸಲು ಅಧ್ಯಯನಕ್ಕಾಗಿ ಹರಿದ್ವಾರ ಮತ್ತು ವಾರಾಣಸಿಗೆ ತೆರಳಿದ್ದ, ರಾಜ್ಯದ ಕಾವೇರಿ ಆರತಿ ಅಧ್ಯಯನ ಸಮಿತಿ ನಿಯೋಗ ಭಾನುವಾರ ರಾಜ್ಯಕ್ಕೆ ಹಿಂದಿರುಗಿತು.

ಮೂರು ದಿನದ ಪ್ರವಾಸದಲ್ಲಿ 'ಗಂಗಾ ಆರತಿ' ಕಾರ್ಯಕ್ರಮ ವೀಕ್ಷಿಸಿದ ನಿಯೋಗದ ಸದಸ್ಯರು, ಸ್ಥಳೀಯ ಅಧಿಕಾರಿಗಳು ಹಾಗೂ ಗಂಗಾ ಸೇವಾ ಸಮಿತಿ ಪದಾಧಿಕಾರಿಗಳ ಜೊತೆ ಚರ್ಚಿಸಿದರು. ಪೂಜಾ ವಿಧಿ ವಿಧಾನಗಳ ಪ್ರಕ್ರಿಯೆಗಳನ್ನು ಪರಿಶೀಲಿಸಿದರು. ಭಾನುವಾರ ಸ್ಥಳೀಯ ಅಧಿಕಾರಿಗಳ ಜತೆಗೂ ಚರ್ಚಿಸಿ ಮಾಹಿತಿ ಪಡೆದರು.

ವಾರಾಣಸಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಕಾವೇರಿ ಆರತಿ ಅಧ್ಯಯನ ಸಮಿತಿ ಅಧ್ಯಕ್ಷ, ಸಚಿವ ಎನ್. ಚಲುವರಾಯಸ್ವಾಮಿ ಅವರು, 'ಗಂಗಾ ಆರತಿ ಮತ್ತು ಕಾವೇರಿ ಆರತಿ ಕುರಿತುಸೋಮವಾರ ಅಥವಾ ಮಂಗಳವಾರ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಹೆಚ್ಚಿನ ಅಧ್ಯಯನಕ್ಕಾಗಿ ಅಧಿಕಾರಿಗಳ ತಂಡವನ್ನು ವಾರಾಣಸಿ ಮತ್ತು ಹರಿದ್ವಾರಕ್ಕೆ ಕಳುಹಿಸಲಾಗುವುದು. ಬಳಿಕ, ಪರಿಷ್ಕೃತ ವರದಿಯನ್ನು ಸರ್ಕಾರಕ್ಕೆ ನೀಡಲಾಗುವುದು' ಎಂದು ತಿಳಿಸಿದರು.

'ಹರಿದ್ವಾರದಲ್ಲಿ ಸಹಕಾರ ಕಾಯ್ದೆ ಅಡಿ ನೋಂದಣಿಯಾಗಿರುವ ಗಂಗಾ ಮಹಾಸಭಾ ಗಂಗಾ ಆರತಿ ನಡೆಸುತ್ತಿದೆ. ಇದಕ್ಕೆ ಸರ್ಕಾರದ ಅನುದಾನವಿಲ್ಲ. ಆದರೆ, ನಮ್ಮಲ್ಲಿ ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಕಾವೇರಿ ಆರತಿ ಮುಂದುವರಿಸುವಂತೆ ಕಾರ್ಯಕ್ರಮ ರೂಪಿಸಲಾಗುವುದು' ಎಂದು ತಿಳಿಸಿದರು.

'ಕಾವೇರಿ ಆರತಿಯ ವ್ಯವಸ್ಥಿತ ಜಾರಿಗೆ ಸಾಕಷ್ಟು ಸಮಯ ಬೇಕು. ಆದರೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೈಸೂರು ದಸರಾ ಸಂದರ್ಭದಲ್ಲಿ ಕಾವೇರಿ ಆರತಿ ಆರಂಭಿಸಲು ಇಚ್ಛಿಸಿದ್ದಾರೆ. ದಸರಾ ವೇಳೆಗೆ ಕಾವೇರಿ ಆರತಿ ಆರಂಭಿಸುವುದಾದರೆ ಹರಿದ್ವಾರ ಅಥವಾ ವಾರಾಣಸಿಯಿಂದಲೇ ಸಾಧು ಸಂತರನ್ನು ಆಹ್ವಾನಿಸಿ ಅವರಿಂದ ಸಾಂಕೇತಿಕವಾಗಿ ಕಾರ್ಯಕ್ರಮ ನಡೆಸಲಾಗುವುದು. ಜತೆಗೆ, ನಮ್ಮ ಸ್ಥಳೀಯರಿಗೆ ವಾರಾಣಸಿ/ಹರಿದ್ವಾರ ತಂಡದಿಂದ ತರಬೇತಿ ಕೊಡಿಸಲಾಗುವುದು' ಎಂದರು.

ಕೊಡಗಿನ ಭಾಗಮಂಡಲ, ಮಂಡ್ಯದ ಕೆಆರ್‌ಎಸ್ ಜಲಾಶಯ ಹಾಗೂ ಶ್ರೀರಂಗಪಟ್ಟಣದಲ್ಲಿ ಕಾವೇರಿ ಆರತಿ ನಡೆಸಲು ಒತ್ತಾಯಗಳು ಕೇಳಿ ಬಂದಿವೆ. ಈಗ ಕೆಆರ್‌ಎಸ್ ಬೃಂದಾವನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇಲ್ಲೇ ಕಾರ್ಯಕ್ರಮ ನಡೆಸಿದರೆ ಹೇಗೆ ಎಂಬ ಚಿಂತನೆಯಿದೆ' ಎಂದರು.

'ಕಾವೇರಿ ಆರತಿ ಆರಂಭದಿಂದ ಈಗಿರುವ ನದಿ ನೀರು ಹಂಚಿಕೆ ವಿವಾದಕ್ಕೆ ಮುಕ್ತಿ ಸಿಗಬಹುದು ಎಂಬ ನಂಬಿಕೆ, ವಿಶ್ವಾಸ ಇದೆ' ಎಂದು ಹೇಳಿದರು.

ಕಾವೇರಿ ಆರತಿಗೆ ಗೀತೆ ರಚನೆ: ಸಾಧು

'ಕಾವೇರಿ ಆರತಿ ಕಾರ್ಯಕ್ರಮಕ್ಕೆ ಹಾಡು ಸಿದ್ಧಪಡಿಸುವ ಹೊಣೆಯನ್ನು ರಾಜ್ಯ ಸರ್ಕಾರ ನನಗೆ ಒಪ್ಪಿಸಿದೆ. ಆರತಿ ವೇಳೆ ನಿರಂತರ ಎರಡು ತಾಸು ಜನರು ಒಂದೆಡೆ ಕುಳಿತು ಕೇಳುವಂತಹ ಗೀತೆ ರಚಿಸಿ, ಸಂಗೀತ ಸಂಯೋಜಿಸಲಾಗುವುದು' ಎಂದು ನಿಯೋಗದಲ್ಲಿದ್ದ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ, ನಟ ಸಾಧುಕೋಕಿಲ ತಿಳಿಸಿದರು.

> **ಕಾವೇರಿ ಆರತಿಯಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೋಟ್ಯಂತರ ಜನರ ಬದುಕು ಕಟ್ಟಿಕೊಳ್ಳಲು ಸಹಾಯ ಆಗಲಿದೆ.**
> **ದಿನೇಶ್ ಗೂಳಿಗೌಡ,** ವಿಧಾನ ಪರಿಷತ್ ಸದಸ್ಯ



ಭಾನುವಾರ ನಡೆದ ಬೆಂಗಳೂರು ನಗರ ಪತ್ರಿಕಾ ವಿತರಕರ ಸಭೆಯಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಅಧ್ಯಕ್ಷ ಕೆ. ಶಂಭುಲಿಂಗ ಅವರು ಒಕ್ಕೂಟದ ಅಗತ್ಯ ಮತ್ತು ಸದಸ್ಯರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳ ಬಗ್ಗೆ ಸದಸ್ಯರೊಂದಿಗೆ ಚರ್ಚೆ ನಡೆಸಿದರು

ಪ್ರಜಾವಾಣಿ ಚಿತ್ರ

ಹದಗೆಟ್ಟ ರಸ್ತೆ, ಹೆಚ್ಚಿದ ದಟ್ಟಣೆ, ಸವಾರರು ಹೈರಾಣ

ಪ್ರಜಾವಾಣಿ ವಾರ್ತೆ

ಕೆಂಗೇರಿ: ರಾಮೋಹಳ್ಳಿ ಸಂಪರ್ಕ ರಸ್ತೆಯ ದುಃಸ್ಥಿತಿ ಮತ್ತು ರೈಲ್ವೆ ಲೆವೆಲ್ ಕ್ರಾಸಿಂಗ್‌ನಿಂದಾಗಿ ಆರ್. ಆರ್. ಎಂಜಿನಿಯರಿಂಗ್ ಕಾಲೇಜು ವ್ಯಾಪ್ತಿಯಲ್ಲಿ ದಟ್ಟಣೆ ಹೆಚ್ಚಿದ್ದು, ವಾಹನ ಸವಾರರು ಹೈರಾಣಾಗುತ್ತಿದ್ದಾರೆ.

ಆರ್.ಆರ್.ಎಂಜಿನಿಯರಿಂಗ್ ಕಾಲೇಜು ಬಳಿ ರೈಲ್ವೆ ಲೆವೆಲ್ ಕ್ರಾಸಿಂಗ್ ಇದೆ. ಮೈಸೂರು ರಸ್ತೆಯಿಂದ ರಾಮೋಹಳ್ಳಿ ಕಡೆಗೆ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಾಮೋಹಳ್ಳಿ ವ್ಯಾಪ್ತಿಯಲ್ಲಿ ಹತ್ತಾರು ಕ್ವಾರಿಗಳಿವೆ. ಕುಂಬಳಗೋಡು ಕೈಗಾರಿಕಾ ಪ್ರದೇಶವಿದೆ. ಹೀಗಾಗಿ, ಭಾರಿ ವಾಹನಗಳ ಸಂಚಾರ ಅಧಿಕವಾಗಿದೆ.

ಮುಖ್ಯಾಂಶಗಳು
- ಸಂಚಾರ ನಿಧಾನಗೊಳಿಸುವ ದಟ್ಟಣೆ
- ವಿದ್ಯಾರ್ಥಿಗಳಿಗೆ ಸಂಚಾರಕ್ಕೆ ಸಂಕಷ್ಟ
- ರೈಲ್ವೆ ಕೆಳ ಸೇತುವೆ ನಿರ್ಮಾಣಕ್ಕೆ ಆಗ್ರಹ

ಮೂರ್ನಾಲ್ಕು ನಿಮಿಷ ರೈಲ್ವೆ ಗೇಟ್ ಮುಚ್ಚಿದರೂ ಇಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಸಾಲು ಒಮ್ಮೊಮ್ಮೆ ಕುಂಬಳಗೋಡು ಠಾಣೆವರೆಗೂ ಇರಲಿದೆ. ರೈಲ್ವೆ ಗೇಟ್ ದಾಟುವ ಧಾವಂತದಲ್ಲಿ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿವೆ.



ರೈಲ್ವೆಗೇಟ್ ಬಳಿ ಸಾಲುಗಟ್ಟಿ ನಿಂತಿರುವ ವಾಹನಗಳು

ಆರ್.ಆರ್.ಎಂಜಿನಿಯರಿಂಗ್ ಕಾಲೇಜು ಎದುರಿನ ರಸ್ತೆಯೂ ಹದಗೆಟ್ಟಿದ್ದು, ಸಮಸ್ಯೆ ಹೆಚ್ಚಿಸಿದೆ. ರಸ್ತೆಯ ಒಂದು ಬದಿಯಲ್ಲಿ ಡಾಂಬರು ಕಿತ್ತು ಬಂದಿದ್ದರೆ, ಮತ್ತೊಂದು ಬದಿಯಲ್ಲಿ ಗುಂಡಿಗಳಾಗಿವೆ. ಭಾರಿ ವಾಹನಗಳು ಮಂದಗತಿಯಲ್ಲಿ ಚಲಿಸುತ್ತವೆ. ದಟ್ಟಣೆ ಸಮಸ್ಯೆಯನ್ನು ದುಪ್ಪಟ್ಟಾಗಿಸುತ್ತಿದೆ. ವಿದ್ಯಾರ್ಥಿಗಳು ಕಾಲೇಜು ಗೇಟ್ ದಾಟಿ ಮೈಸೂರು ರಸ್ತೆ ತಲುಪಲು ಹರಸಾಹಸಪಡಬೇಕಿದೆ. 'ರೈಲ್ವೆ ಗೇಟ್ ತೆರೆದಾಗ ಉಂಟಾಗುವ ದಿಢೀರ್ ವಾಹನ ದಟ್ಟಣೆಯು ಅಪಘಾತಗಳಿಗೆ ಕಾರಣವಾಗುತ್ತಿದೆ. ಸಮರ್ಪಕ ರಸ್ತೆ ಹಾಗೂ ರೈಲ್ವೆ ಕೆಳಸೇತುವೆ ನಿರ್ಮಾಣಕ್ಕೆ ಸರ್ಕಾರ ಶೀಘ್ರ ಕ್ರಮ ವಹಿಸಬೇಕು ಎಂದು ಚಳ್ಳೇಘಟ್ಟ ನಿವಾಸಿ ಮಂಜುನಾಥ್ ಬಿ.ಎನ್. ಆಗ್ರಹಿಸಿದರು.

> **ರೈಲ್ವೆ ಗೇಟ್ ತೆಗೆಯುತ್ತಿದ್ದಂತೆ ವಾಹನಗಳು ನುಗ್ಗುತ್ತವೆ. ಹೊಗೆ, ದೂಳಿನಿಂದ ಸಮೀಪದ ಬಸ್ ನಿಲ್ದಾಣದಲ್ಲಿದ್ದವರು ತೀವ್ರ ಕಿರಿಕಿರಿ ಅನುಭವಿಸುತ್ತಿದ್ದಾರೆ**
> **ನವೀನ್,** ಕಾಲೇಜು ವಿದ್ಯಾರ್ಥಿ

ಕೆಎಸ್‌ಸಿಎಯಲ್ಲಿ ಕನ್ನಡಿಗರಿಗೆ ಸಿಗದ ಅವಕಾಶ –ಆಕ್ಷೇಪ

ಬೆಂಗಳೂರು: 'ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನಲ್ಲಿ (ಕೆಎಸ್‌ಸಿಎ) ಕನ್ನಡ ಭಾಷೆಗೂ, ಕನ್ನಡಿಗ ಆಟಗಾರರಿಗೂ ಅವಕಾಶ ನೀಡುತ್ತಿಲ್ಲ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಷಾದಿಸಿದೆ. ಏಳು ದಿನಗಳಲ್ಲಿ ವರದಿ ಸಲ್ಲಿಸಲು ಕೆಎಸ್‌ಸಿಎಗೆ ಪತ್ರ ಬರೆದಿದೆ.

ಕೆಎಸ್‌ಸಿಎ ಕನ್ನಡ ಭಾಷೆಯನ್ನು ನಿರ್ಲಕ್ಷಿಸುತ್ತಿರುವ ಬಗ್ಗೆ ಮತ್ತು ಕನ್ನಡಿಗರಿಗೆ ಅವಕಾಶ ನೀಡದ ಬಗ್ಗೆ ಮರಿಲಿಂಗಗೌಡ ಮಾಲಿ ಪಾಟೀಲ್ ದೂರು ನೀಡಿದ್ದರು. ಅದರ ಆಧಾರದಲ್ಲಿ ಪ್ರಾಧಿಕಾರ ಪತ್ರ ಬರೆದಿದೆ.

ಕೇಂದ್ರ ಸರ್ಕಾರ ಏಕ ರೂಪದ ನೀತಿ ರೂಪಿಸಲಿ: ಮಂತ್ರಾಲಯ ಶ್ರೀ

ಪ್ರಜಾವಾಣಿ ವಾರ್ತೆ

ರಾಯಚೂರು: 'ಧಾರ್ಮಿಕ ದತ್ತಿ ಇಲಾಖೆಯಿಂದ ಧಾರ್ಮಿಕ ಕ್ಷೇತ್ರಗಳನ್ನು ಮುಕ್ತವಾಗಿಡಬೇಕು. ಧರ್ಮಕ್ಷೇತ್ರಗಳ ಪಾವಿತ್ರ್ಯ ರಕ್ಷಣೆ ಹಾಗೂ ಸಂಪ್ರದಾಯ ಮುಂದುವರಿಸಿಕೊಂಡು ಹೋಗಲು ಕೇಂದ್ರ ಸರ್ಕಾರ ಏಕರೂಪದ ನೀತಿಯನ್ನು ರೂಪಿಸಬೇಕು' ಎಂದು ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಹೇಳಿದರು.

ಭಾನುವಾರ ಸಂಜೆ ಅಸ್ಕಿಹಾಳ ಗೋವಿಂದದಾಸರ ಸ್ಮರಣೋತ್ಸವದ ನಿಮಿತ್ತ ನಡೆದ ಗೋವಿಂದ ಗಾನ ದಶಮಾನೋತ್ಸವ ಕಾರ್ಯಕ್ರಮದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.



ಸುಬುಧೇಂದ್ರ ತೀರ್ಥರು

'ಹಿಂದೆ ಮಠಮಾನ್ಯಗಳ ನಿರ್ವಹಣೆ ಸ್ಥಳೀಯರ ವಶದಲ್ಲಿತ್ತು. ಈಗ ಲೌಕಿಕ ಕಾನೂನುಗಳ ಹಸ್ತಕ್ಷೇಪವಿದೆ. ಆಯಾ ಊರಿನ ದೇವಸ್ಥಾನಗಳು, ಮಠ ಮಾನ್ಯಗಳು ಆಯಾ ಪ್ರಾಂತ್ಯದ ಜನರ, ಭಕ್ತರ ನೇತೃತ್ವದಲ್ಲಿಯೇ ವ್ಯವಸ್ಥೆ ನಡೆಯಬೇಕು' ಎಂದು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ತಿರುಪತಿ ತಿಮ್ಮಪ್ಪ ದೇವಸ್ಥಾನದ ಪ್ರಸಾದ ವಿವಾದ ಕುರಿತು ಸಮಗ್ರ ತನಿಖೆ ನಡೆಸಬೇಕು. 'ಮಂತ್ರಾಲಯಕ್ಕೆ ಕರ್ನೂಲ್‌ನ ವಿಜಯ ಡೇರಿಯ ತುಪ್ಪ ಪೂರೈಕೆಯಾಗುತ್ತದೆ. ಇನ್ನು ತುಪ್ಪದ ಶುದ್ಧತೆ ಪರೀಕ್ಷಿಸಿದ ಪ್ರಮಾಣಪತ್ರ ನೀಡಿದ ನಂತರವೇ ತುಪ್ಪ ಪೂರೈಸಲು ಸೂಚಿಸಲಾಗುವುದು ಎಂದು ತಿಳಿಸಿದರು.

'ರಾಘವೇಂದ್ರ ರಾಯರ ಆರಾಧನಾ ಮಹೋತ್ಸವದ ಸಂದರ್ಭದಲ್ಲಿ ತಿರುಪತಿ ತಿರುಮಲ ದೇವಸ್ಥಾನದಿಂದ ಶ್ರೀವಾರಿ ವಸ್ತ್ರ ಹಾಗೂ ಲಡ್ಡು ಪ್ರಸಾದ ಬಂದಿತ್ತು. ಆದರೆ, ಶ್ರೀಮಠದಲ್ಲಿ ಶ್ರೀವಾರಿ ವಸ್ತ್ರವನ್ನೇ ಪ್ರಸಾದ ರೂಪದಲ್ಲಿ ರಾಯರಿಗೆ ಅರ್ಪಿಸುವ ಸಂಪ್ರದಾಯವಿದೆ' ಎಂದು ಸ್ಪಷ್ಟಪಡಿಸಿದರು.

ಆಕ್ಷೇಪಾರ್ಹ ಭಾಷಣ: ಸತೀಶ್ ಪೂಜಾರಿ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಲ್ಲಿ ಹಿಂದೂ ಜಾಗರಣಾ ವೇದಿಕೆ ಪ್ರಾಂತ ಸಂಚಾಲಕ ಸತೀಶ್ ಪೂಜಾರಿ ಅವರನ್ನು ಶನಿವಾರ ತಡರಾತ್ರಿ ಪೊಲೀಸರು ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ ಬಂಧಿಸಿದ್ದಾರೆ.

ದಾವಣಗೆರೆಯ ಬಸವನಗರ ಠಾಣೆ ಪೊಲೀಸರು ಪೂಜಾರಿ ಅವರನ್ನು ತಡರಾತ್ರಿ ನಗರಕ್ಕೆ ಕರೆತಂದು ನ್ಯಾಯಾಧೀಶರ ಎದುರು ಹಾಜರುಪಡಿಸಿದರು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಜಿಲ್ಲಾ ಕಾರಾಗೃಹಕ್ಕೆ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಗಮಂಗಲ ಗಲಭೆ ಖಂಡಿಸಿ ಸೆ.18ರಂದು ನಡೆದಿದ್ದ ಪ್ರತಿಭಟನೆ ವೇಳೆ ಸತೀಶ್ ಪೂಜಾರಿ ಪ್ರಚೋದನಕಾರಿ ಭಾಷಣ ಮಾಡಿದ್ದರು. ಮರುದಿನ ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದಿತ್ತು.

ಆದಿಚುಂಚನಗಿರಿ: ರಾಜ್ಯಮಟ್ಟದ ಜನಪದ ಕಲಾಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಆದಿಚುಂಚನಗಿರಿ ಮಠದಲ್ಲಿ ಬಾಲಗಂಗಾಧರನಾಥ ಸ್ವಾಮೀಜಿಯವರ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಸೆ.23ರಿಂದ 25ರವರೆಗೆ ರಾಜ್ಯ ಮಟ್ಟದ 45ನೇ ಕಾಲಭೈರವೇಶ್ವರ ಜನಪದ ಕಲಾಮೇಳ ಆಯೋಜಿಸಲಾಗಿದೆ.

ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದೆ. ಕಲಾಮೇಳ ಸೆ.23ರ ಸಂಜೆ 5ಕ್ಕೆ ಉದ್ಘಾಟನೆಗೊಳ್ಳಲಿದೆ. ಸೆ. 24ರಂದು ಬೆಳಿಗ್ಗೆ 10.30ಕ್ಕೆ ವಿವಿಧ ಕ್ಷೇತ್ರದ ಸಾಧಕರಿಗೆ 'ಚುಂಚಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವುದು.


ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಕೊತ್ತಲಗಾಲದ ಕೆ.ಪಿ. ಬಸವೇಗೌಡ (ಶೈಕ್ಷಣಿಕ), ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕೊಳವಾರ ಗ್ರಾಮದ ಹಿರಿಯಣ್ಣ ಹೆಗಡೆ (ಸಮಾಜಸೇವೆ), ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಕಂಚನಹಳ್ಳಿಯ ಕೆ. ಎನ್. ಪುಟ್ಟೇಗೌಡ (ನ್ಯಾಯಾಂಗ), ಮದ್ದೂರು ತಾಲ್ಲೂಕಿನ ಹಿರೇಗೌಡನದೊಡ್ಡಿಯ ರಾಮೇಗೌಡ (ರಾಗೌ) (ರಾಮೇಗೌಡ) ಹಾಗೂ ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಮಲ್ಲವ್ವ ಬಸಪ್ಪ ಮ್ಯಾಗೇರಿ (ಜಾನಪದ) ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹50ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.



ಪ್ರೊ.ಕೆ.ಪಿ. ಬಸವೇಗೌಡ



ಹಿರಿಯಣ್ಣ ಹೆಗಡೆ



ಕೆ.ಎನ್. ಪುಟ್ಟೇಗೌಡ



ರಾಮೇಗೌಡ



ಮಲ್ಲವ್ವ ಬಸಪ್ಪ ಮ್ಯಾಗೇರಿ

ಅಂದು ಸಂಜೆ 7ಕ್ಕೆ ಕ್ಷೇತ್ರದ ಜೋಡಿ ರಸ್ತೆಯಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅವರ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ಬಳಿಕ ಕಾಲಭೈರವೇಶ್ವರಸ್ವಾಮಿ ಪುಷ್ಕರಿಣಿಯಲ್ಲಿ ತೆಪ್ಪೋತ್ಸವ ಜರುಗಲಿದೆ.

25ರಂದು ಬೆಳಿಗ್ಗೆ 9.30ಕ್ಕೆ ಬಾಲಗಂಗಾಧರನಾಥ ಸ್ವಾಮೀಜಿ ಅವರ ವಾರ್ಷಿಕ ಪಟ್ಟಾಭಿಷೇಕ, ಗುರು ಸಂಸ್ಮರಣೋತ್ಸವ ಮತ್ತು ಕಲಾಮೇಳದ ಸಮಾರೋಪ ಸಮಾರಂಭ ಜರುಗಲಿದೆ. ಜನಪದ ಕಲಾಮೇಳದಲ್ಲಿ ಭಾಗವಹಿಸುವ ಕಲಾವಿದರಿಗೆ ಪ್ರಯಾಣ ಭತ್ಯೆ, ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ತಿಳಿಸಿದ್ದಾರೆ.

ಮೂಡ್ನಾಕೂಡು ಚಿನ್ನಸ್ವಾಮಿ-70 ಕಾರ್ಯಕ್ರಮದಲ್ಲಿ ಅಗ್ರಹಾರ ಕೃಷ್ಣಮೂರ್ತಿ

'ಸಾವಿನ ಅನಕ್ಷರತೆಯ ಸಂಸ್ಕೃತಿ ನಮ್ಮದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾವಿನ ಬಗ್ಗೆ ಹಿಂಜರಿಕೆ, ಹೆದರಿಕೆ ಭಾರತೀಯರ ಮನಸ್ಸಿನಲ್ಲಿ ಹೆಚ್ಚಿದೆ. ಕೊನೆಯ ದಿನಗಳ ಬಗ್ಗೆ ಹೆಚ್ಚು ಮಾತನಾಡಲು ನಮ್ಮವರು ಇಷ್ಟಪಡುವುದಿಲ್ಲ. ಸಾವಿನ ಬಗ್ಗೆ ಅನಕ್ಷರತೆ ಇರುವ ಸಂಸ್ಕೃತಿ ನಮ್ಮದು' ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ನಡೆದ 'ಮೂಡ್ನಾಕೂಡು ಚಿನ್ನಸ್ವಾಮಿ-70' ಜನ್ಮ ದಿನಾಚರಣೆ, ಮೂರು ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು 'ಧಮ್ಮಯಾನ-ಬೌದ್ಧತತ್ವ ಮೀಮಾಂಸೆ' ಕೃತಿ ಬಗ್ಗೆ ಮಾತನಾಡಿದರು.


'ಕುರೂಪಿಗಳನ್ನು, ರೋಗಿಗಳನ್ನು, ಭಿಕ್ಷುಕರನ್ನು ನೋಡಲು ನಮ್ಮ ಮನಸ್ಸು ಇಷ್ಟಪಡುವುದಿಲ್ಲ. ಮುಖ ತಿರುಗಿಸಿಕೊಂಡು ಹೋಗಿ ಬಿಡುತ್ತೇವೆ. ಇಂಥ ಮನಃಸ್ಥಿತಿ ಈಗಲೂ ಇದೆ. ಆದರೆ, 2500 ವರ್ಷಗಳ ಹಿಂದೆಯೇ ಇದಕ್ಕೆ ಭಿನ್ನವಾಗಿ ದೈನೇಸಿ ಸ್ಥಿತಿಯ ಬಗ್ಗೆ, ಸಾವಿನ ಬಗ್ಗೆ ಬುದ್ಧ ಚಿಂತನೆ ನಡೆಸಿದ್ದ' ಎಂದು ತಿಳಿಸಿದರು.

'ಜನರ ಸಂಕಷ್ಟಗಳನ್ನು, ಸುಖ-ದುಃಖಗಳನ್ನು, ಸಾವನ್ನು ಮನಸ್ಸಿನೊಳಗೆ ತಂದುಕೊಂಡು ನಾವು ಧ್ಯಾನಸ್ಥರಾಗಿ ಯೋಚಿಸಬೇಕು ಎಂದು ತಿಳಿಸಿಕೊಟ್ಟಿದ್ದೇ ಬುದ್ಧ. ನೀವು ಇಲ್ಲಿರುವುದಷ್ಟೇ ಸತ್ಯ. ಆಮೇಲೆ ಏನೂ ಇಲ್ಲ ಎಂದು ಸ್ವರ್ಗ-ನರಕಗಳನ್ನು ನಿರಾಕರಿಸಿ ಕ್ರಾಂತಿಕಾರಕ ಸತ್ಯವನ್ನು ಬುದ್ಧ ಹೇಳಿದ್ದ. ಪುನರ್ಭವ ಎಂಬ ಬೌದ್ಧ ಧರ್ಮದ ಕಲ್ಪನೆಯು, ಮತ್ತೊಂದು ಜನ್ಮದ ಬಗ್ಗೆಯಲ್ಲ. ಒಂದು ಜೀವ ಅಂತ್ಯವಾಗುವ ಹೊತ್ತಿಗೆ ಇನ್ನೊಂದು ಜೀವ ಬಂದಿರುತ್ತದೆ ಎಂಬುದಾಗಿದೆ. ಇದೆಲ್ಲವೂ ಈ ಕೃತಿಯಲ್ಲಿದೆ' ಎಂದರು.

ಮುಖ್ಯಾಂಶಗಳು
- 'ಧಮ್ಮಯಾನ-ಬೌದ್ಧತತ್ವ ಮೀಮಾಂಸೆ' ಕೃತಿ ಕುರಿತು ಮಾತು
- 'ಪುನರ್ಭವ ಎಂಬುದು ಮತ್ತೊಂದು ಜನ್ಮದ ಬಗ್ಗೆ ಅಲ್ಲ'
- 'ಸಾವಿನ ಕುರಿತು ಚಿಂತನೆ ನಡೆಸಿದ್ದ ಬುದ್ಧ'

'ಆ ಮಹಾ ಮುಗುಳುನಗೆ' ಬಗ್ಗೆ 'ಸುಧಾ' ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., 'ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ-ಮೂ.ಚಿ. ಸಾಹಿತ್ಯ ವಿಮರ್ಶೆ' ಕೃತಿ ಬಗ್ಗೆ ಅಕ್ಕ ಐಎಎಸ್ ಅಕಾಡೆಮಿಯ ನಿರ್ದೇಶಕ ಶಿವಕುಮಾರ ಮಾತನಾಡಿದರು.

ಸಾಹಿತಿ ಎಲ್. ಹನುಮಂತಯ್ಯ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್. ಪುಷ್ಪ, ಮೂಡ್ನಾಕೂಡು ಅಭಿನಂದನಾ ಸಮಿತಿಯ ಧನಂಜಯ್, ಆಕೃತಿ ಗುರುಪ್ರಸಾದ್, ಸೂರ್ಯಕೀರ್ತಿ ಭಾಗವಹಿಸಿದ್ದರು. ಬಾಲು ಜಂಬೆ ತಂಡದಿಂದ ಜಂಬೆ ವಾದನ ನಡೆಯಿತು.



'ಮುಡ್ನಾಕೂಡು ಚಿನ್ನಸ್ವಾಮಿ 70' ಕಾರ್ಯಕ್ರಮದಲ್ಲಿ ಭಾಗ್ಯ ಚಿನ್ನಸ್ವಾಮಿ ಮತ್ತು ಮುಡ್ನಾಕೂಡು ಚಿನ್ನಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಶಿವಕುಮಾರ್, ಸಾಹಿತಿ ಎಲ್. ಹನುಮಂತಯ್ಯ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್. ಪುಷ್ಪ, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಪಾಲ್ಗೊಂಡಿದ್ದರು


ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256



'ಗಾಂಧಿ ಉದ್ಯಾನ ಸ್ವಚ್ಛತೆ ಕಾಪಾಡಿ'

ಉತ್ತರಹಳ್ಳಿಯ ಕೆಎಸ್‌ಆರ್‌ಟಿಸಿ ಲೇಔಟ್‌ನ ಗಾಂಧಿ ಉದ್ಯಾನದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ವಾಯುವಿಹಾರಿಗಳು ಮೂಗು ಮುಚ್ಚಿ ಓಡಾಡುವ ಸ್ಥಿತಿ ಇದೆ. ಬಿಬಿಎಂಪಿ ಸಿಬ್ಬಂದಿ ಆದಷ್ಟು ಶೀಘ್ರ ಇಲ್ಲಿ ಸ್ವಚ್ಛತೆಯ ಜೊತೆಗೆ ಮೂಲಸೌಕರ್ಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ಮೂರ್ತಿ, ಕೆಎಸ್‌ಆರ್‌ಟಿಸಿ ಲೇಔಟ್



'ಅಗೆದಿರುವ ರಸ್ತೆ ಸರಿಪಡಿಸಿ'

ಚೋಳನಗರದ ಗುಂಡಪ್ಪ ರೆಡ್ಡಿ ಲೇಔಟ್‌ನಲ್ಲಿ ಏಳೆಂಟು ತಿಂಗಳ ಹಿಂದೆ ಮೋರಿ ನಿರ್ಮಿಸಲು ಅಗೆದಿದ್ದ ರಸ್ತೆಯನ್ನು ಸರಿಪಡಿಸುವ ಕೆಲಸ ಇದುವರೆಗೂ ಆಗಿಲ್ಲ. ಇದರಿಂದ ನಿತ್ಯ ಸಂಚಾರಕ್ಕೆ ತೊಂದರೆ ಆಗಿದೆ. ಈ ಮೋರಿಯ ಪಕ್ಕದಲ್ಲಿ ಶಾಲೆ ಇದ್ದು, ವಿದ್ಯಾರ್ಥಿಗಳಿಗೂ ಸಮಸ್ಯೆಯಾಗಿದೆ. ವಾಹನ ಸವಾರರ ಸಂಚಾರಕ್ಕೆ ಸಂಚಕಾರವಾಗಿದೆ. ಬಿಬಿಎಂಪಿ ಕೂಡಲೇ ರಸ್ತೆ ದುರಸ್ತಿಗೆ ಕ್ರಮಕೈಗೊಳ್ಳಬೇಕು.

ಜಿ.ಎಸ್.ಮಂಜುನಾಥ್, ಚೋಳನಗರ

'ಒಣಗಿರುವ ಮರ ತೆರವುಗೊಳಿಸಿ'

ರಾಜಾಜಿನಗರದ 6ನೇ ಬ್ಲಾಕ್‌ನ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಶ್ರೀಸಾಗರ್ ಹೋಟೆಲ್ ಮುಂಭಾಗ ಬೃಹತ್ ಮರವೊಂದರ ಕೊಂಬೆಗಳ ಒಣಗಿದ್ದು, ಜೋರು ಗಾಳಿಗೆ ಬೀಳುವ ಸಾಧ್ಯತೆ ಇದೆ. , ಬಿಬಿಎಂಪಿ ಕೂಡಲೇ ಮರ ತೆರವಿಗೆ ಮುಂದಾಗಲಿ.

ಎಂ. ಉಮಾಶಂಕರಬಾಬು, ಕೆಂಪಾಪುರ





ಕಾವೇರಿ ಭವನ ಮುಂಭಾಗದ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು.

ಶಿಕ್ಷಣ



ಅಂತರ್ಮುಖಿ ವಿದ್ಯಾರ್ಥಿಗಳಿಗೆ ಕಲಿಸುವುದು ಹೇಗೆ?

ಆರ್. ಶ್ರೀನಾಗೇಶ್

ತರಗತಿಯಲ್ಲಿ ಅನೇಕ ವಿದ್ಯಾರ್ಥಿಗಳಿದ್ದಾಗ ಶಿಕ್ಷಕರಿಗೆ ಕೆಲವು ಸಮಸ್ಯೆಗಳು ಎದುರಾಗುತ್ತವೆ. ಕೆಲವು ವಿದ್ಯಾರ್ಥಿಗಳು ಸುಮ್ಮನೆ ಕೂರಲಾಗದೆ ಏನಾದರೂ ಕೀಟಲೆ ಮಾಡುತ್ತಿರುತ್ತಾರೆ. ಕೆಲವರು ಚಿತ್ರಗಳನ್ನು ಬಿಡಿಸುತ್ತಿರುತ್ತಾರೆ.

ಕೆಲವು ಮಕ್ಕಳು ಅಂತರ್ಮುಖಿಗಳಾಗಿ ಮಾತನಾಡದೆ, ಪ್ರತಿಕ್ರಿಯೆ ನೀಡದೆ ಇರುವರು. ಆ ಮಕ್ಕಳಿಗೆ ಕಲಿಸಿದ್ದು ಅರ್ಥವಾಗುತ್ತಿದೆಯೇ ಇಲ್ಲವೇ ಎನ್ನುವುದು ಗೊತ್ತಾಗದೇ ಹೋಗಬಹುದು. ಅನೇಕ ಶಿಕ್ಷಕರಿಗೆ ಈ ಅಂತರ್ಮುಖಿ ವಿದ್ಯಾರ್ಥಿಗಳು ಒಂದು ಬಗೆಹರಿಯದ ಸಮಸ್ಯೆಯೇ ಆಗಿಬಿಡುವ ಸಾಧ್ಯತೆ ಹೆಚ್ಚು. ಅವರನ್ನು ಅರ್ಥ ಮಾಡಿಕೊಂಡರೆ ಶಿಕ್ಷಕರಿಗೆ ಮಾತ್ರವಲ್ಲ, ಪೋಷಕರಿಗೂ ಸಹಾಯವಾಗುವುದು.

> ಅಂತರ್ಮುಖಿ ಮಕ್ಕಳು ದಡ್ಡರಲ್ಲ. ಸಮಾಜದಲ್ಲಿ ಸುಲಭವಾಗಿ ಬೆರೆಯುವ ಕೌಶಲ ಇರುವುದಿಲ್ಲ ಅಷ್ಟೆ. ಹಾಗೆಂದ ಮಾತ್ರಕ್ಕೆ ಕಲಿಕೆಯಲ್ಲಿ ಹಿಂದುಳಿದವರಲ್ಲ. ಅವರ ಗ್ರಹಣ ಶಕ್ತಿ ಪ್ರಬಲವಾಗಿಯೇ ಇರುತ್ತದೆ.

ಅಂತರ್ಮುಖಿಗಳನ್ನು ಹೀಗೆ ವಿಂಗಡಿಸಬಹುದು. ಕೆಲವರು ಕೀಳರಿಮೆಯಿಂದ, ಹೇಳಿಕೊಳ್ಳಲಾಗದ ಭಯದಿಂದ, ಆತ್ಮವಿಶ್ವಾಸವಿಲ್ಲದ ಕಾರಣ ಅಂತರ್ಮುಖಿಗಳಾಗಿ ಉಳಿದಕೊಂಡಿರುತ್ತಾರೆ. ಕೆಲವರು ಯಾವುದೋ ಸಮಸ್ಯೆಯಿಂದಾಗಿ ಅಂತರ್ಮುಖಿಗಳಾಗಿರಬಹುದು. ಅವರ ಈ ನಡವಳಿಕೆಯನ್ನು ಗಮನಿಸಿದರೆ, ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡತೊಡಗಿದರೆ, ಕಾರಣ ತಿಳಿಯಬಹುದು. ಅದಕ್ಕೆ ಪರಿಹಾರ ಒದಗಿಸುವುದು ಸಾಧ್ಯವಾಗುತ್ತದೆ. ಮತ್ತೆ ಕೆಲವರು ಯಾವುದೇ ನಕಾರಾತ್ಮಕ ಅಂಶಗಳಿಲ್ಲದೇ ಸ್ವಭಾವತಃ ಅಂತರ್ಮುಖಿಗಳಾಗಿರಬಹುದು. ಅದಕ್ಕೆ ಆನುವಂಶಿಕ ಕಾರಣಗಳಿರಬಹುದು. ವಿಷಯಗಳನ್ನು ಅವರ ಮನಸ್ಸಿನಲ್ಲಿ ಮೆಲುಕು ಹಾಕುವ ರೀತಿ ಇರಬಹುದು, ದೇಹಗತಿ ತುಸು ಕಡಿಮೆ ವೇಗದ್ದಿರಬಹುದು, ಕೆಲವರು ಸಮರ್ಪಕತೆಯ ಮಟ್ಟ ತಲುಪಲು ಯಾವುದು ಸರಿ ಎಂಬ ತಾಕಲಾಟದಲ್ಲಿ ಇರಬಹುದು. ಇದಕ್ಕೆ ಕಾರಣ ಹುಡುಕಬೇಕಾದರೆ ಅವರ ನಡವಳಿಕೆಯನ್ನು ತುಸು ಸೂಕ್ಷ್ಮವಾಗಿ ಗಮನಿಸಬೇಕು.


- ತಮ್ಮ ಮನಸ್ಸಿಗೆ ಹಿತವೆನಿಸುವ ಜನರೊಂದಿಗೆ ತಡೆಯಿಲ್ಲದೆ ಮಾತನಾಡುತ್ತಿರುವವರು ಎಲ್ಲರೊಡನೆಯೂ ಬೆರೆಯಲು ಇಷ್ಟಪಡದೇ ಹೋಗಬಹುದು. ವ್ಯಕ್ತಿಗಳ ನಡವಳಿಕೆ, ವರ್ತನೆಯ ಆಧಾರದಲ್ಲಿ ಅವರು ಬೆರೆಯಲು ಇಷ್ಟಪಡಬಹುದು.
- ಪ್ರತಿಕ್ರಿಯೆ ನಿಧಾನ ಎಂದ ಮಾತ್ರಕ್ಕೆ ಅವರು ದಡ್ಡರಲ್ಲ. ಬಹುಮುಖ ಆಯಾಮಗಳಲ್ಲಿ ಅವರು ವಿಷಯವನ್ನು ಮನಸ್ಸಿನಲ್ಲಿ ಆಳವಾಗಿ ವಿಶ್ಲೇಷಿಸುತ್ತಿರಬಹುದು.
- ಅನ್ಯಮನಸ್ಕತೆ ಒಂದು ಪ್ರಮುಖ ಗುಣ. ತಮ್ಮದೇ ಲೋಕದಲ್ಲಿ ಅವರ ಯೋಚನೆಗಳು ಹರಿಯುವ ಕಾರಣ ಪ್ರಸ್ತುತ ಪರಿಸ್ಥಿತಿಗೆ ಅವರು ಗಮನ ಕೊಡದಿರಬಹುದು. ಹೀಗಾಗಿ ಅವರು ಅನ್ಯಮನಸ್ಕರ ರೀತಿ ಕಾಣಬಹುದು. ತಾವು ಮಾಡುತ್ತಿರುವ ಕೆಲಸ ಕುರಿತು ಅವರಿಗೆ ಪೂರ್ಣ ಗಮನವೂ ಇಲ್ಲದಿರಬಹುದು.
- ಅನೇಕ ವೇಳೆ ಅವರಿಗೆ ಗುಂಪಿನ ಜತೆ ಬೆರೆಯವುದು ಒಪ್ಪಿಗೆಯಾಗದಿರಬಹುದು. ಹಲವು ವಿಷಯಗಳನ್ನು ಒಮ್ಮೆಗೇ ಹೇಳುವುದರಿಂದ ಅವರ ಆಂತರಿಕ ಯೋಚನಾ ಲಹರಿಗೆ ಧಕ್ಕೆಯಾಗಬಹುದು.

ಇಂಥ ಅಂತರ್ಮುಖಿ ಮಕ್ಕಳು ಬುದ್ಧಿವಂತರೋ, ದಡ್ಡರೋ ಎಂಬುದನ್ನು ಅಂದಾಜು ಮಾಡಲಾಗದೆ ಪೋಷಕರು ಮತ್ತು ಶಿಕ್ಷಕರು ಪರದಾಡುತ್ತಾರೆ. ಅಂತರ್ಮುಖಿ ಮಕ್ಕಳು ದಡ್ಡರಲ್ಲ. ಸಮಾಜದಲ್ಲಿ ಸುಲಭವಾಗಿ ಬೆರೆಯುವ ಕೌಶಲ ಇರುವುದಿಲ್ಲ ಅಷ್ಟೆ. ಕಲಿಕೆಯಲ್ಲಿ ಹಿಂದುಳಿದವರಲ್ಲ. ಅವರ ಗ್ರಹಣ ಶಕ್ತಿ ಪ್ರಬಲವಾಗಿಯೇ ಇರುತ್ತದೆ. ದೊರೆತ ಮಾಹಿತಿಯನ್ನು ಹಲವು ಆಯಾಮಗಳಲ್ಲಿ ವಿಶ್ಲೇಷಿಸುವುದರಿಂದ ಆ ವಿಧಾನ ತುಸು ನಿಧಾನ ಎನಿಸಬಹುದು. ಮಾತಾಡಿಬಿಟ್ಟು, ತಪ್ಪು ಮಾಡಿದೆನಾ ಎಂದು ಕೊರಗುವ ಗುಂಪಿಗೆ ಸೇರುವುದಿಲ್ಲ. ಪ್ರತಿಕ್ರಿಯೆ ವ್ಯಕ್ತ ಪಡಿಸುವ ಮೊದಲು ವಿಶ್ಲೇಷಣೆಗೆ ಆದ್ಯತೆ ಕೊಡುತ್ತಾರೆ. ನಮಗೆ ಸಹಜ ಎನಿಸುವ ಕೆಲವು ನಡವಳಿಕೆಗಳು ಅವರಿಗೆ ಅಸಹಜ ಎನಿಸಬಹುದು.

ಅವಕಾಶ ಹೀಗೆ ಕಲ್ಪಿಸಿ

- ಅಂತರ್ಮುಖಿ ವಿದ್ಯಾರ್ಥಿಗಳಲ್ಲಿರುವ ಕೌಶಲವನ್ನು ಮೊದಲು ಅರಿಯುವ ಪ್ರಯತ್ನವನ್ನು ಮಾಡಬೇಕು. ಕೆಲವರು ಓದುವುದಕ್ಕೆ ಆದ್ಯತೆ ನೀಡಿದರೆ, ಕೆಲವರು ಯಂತ್ರಗಳ ಕಾರ್ಯನಿರ್ವಹಣೆಯನ್ನು ಗಮನಿಸುತ್ತಾರೆ. ಯಂತ್ರಗಳನ್ನು ಜೋಡಿಸುವುದು, ಇರುವ ವಸ್ತುಗಳನ್ನು ವಿಶಿಷ್ಟವಾಗಿ ಬಳಸುವುದು ಇಂಥವುಗಳಲ್ಲಿ ಗಮನಹರಿಸಬಹುದು. ಅವರಲ್ಲಿ ಹಾಸ್ಯ ಪ್ರಜ್ಞೆ ಹೇರಳವಾಗಿರಬಹುದು. ಅದಕ್ಕೆ ಪೂರಕವಾದ ವಾತಾವರಣ ಇಲ್ಲದಿದ್ದರೆ, ಅದನ್ನು ತಡೆದಿಟ್ಟುಕೊಳ್ಳಬಹುದು. ಅವಕಾಶ ಸಿಗಲಿಲ್ಲ ಎಂದು ಕೊರಗುವುದೂ ಇಲ್ಲ. ಮನೆಗಳಲ್ಲಿ, ಶಾಲೆಯಲ್ಲಿ ಎಲ್ಲರ ಜೊತೆ ಬೆರೆಯಬೇಕಾದ ಪರಿಸ್ಥಿತಿಯಲ್ಲಿ ಅವರಿಗೆ ಆಗಾಗ ಅವರದೇ ಪ್ರತ್ಯೇಕ ಲೋಕದಲ್ಲಿ ಕೆಲವು ಕ್ಷಣ ಕಳೆಯುವ ತುಡಿತ ಇರುತ್ತದೆ. ಅದಕ್ಕೆ ಅವಕಾಶ ಕೊಡಬೇಕು.
- ತರಗತಿಗಳಲ್ಲಿ ಬ್ರೇಕ್ ಸಮಯದಲ್ಲಿ ಅವರ ಆಯ್ಕೆಗೆ ಅವಕಾಶವನ್ನು ಕೊಡಬಹುದು.
- ಕೆಲವು ವಿಷಯಗಳನ್ನು ಕಲಿಯುವುದರಲ್ಲಿ ಹಿಂದಿರುವ ಸಹಪಾಠಿಗಳಿಗೆ ಮಾರ್ಗದರ್ಶನ ನೀಡುವ, ತಮ್ಮ ಯಾವುದಾದರೂ ಅನುಭವವನ್ನು ಕುರಿತು ಮಾತನಾಡುವ ಕೆಲಸಗಳನ್ನು ಈ ವಿದ್ಯಾರ್ಥಿಗಳಿಗೆ ಕೊಟ್ಟರೆ ಅಚ್ಚುಕಟ್ಟಾಗಿ ಮಾಡುತ್ತಾರೆ.
- ಜಟಿಲ ಸಮಸ್ಯೆಯನ್ನು ಬಿಡಿಸಲು ಹೇಳಬಹುದು.
- ಅವರ ಇಷ್ಟಕ್ಕೆ ವಿರುದ್ಧವಾಗಿ ಜನರೊಡನೆ ಬೆರೆಯಲು, ಮಾತನಾಡಲು ಒತ್ತಾಯಿಸಿದರೆ ಅವರಿಗೆ ಅದು ಸಮ್ಮತವಾಗದೆ ಅಳು ಅಥವ ಸಿಟ್ಟು ಬರಬಹುದು.
- ಬದಲಿಗೆ ಚೆನ್ನಾಗಿ ಪುಸಲಾಯಿಸುವ ಮೂಲಕ ಅವರಿಗೆ ಬೆರೆಯಲು, ಮಾತನಾಡಲು ಪ್ರೇರೇಪಿಸಬೇಕು. ಅವರದ್ದೇ ವೇಗದಲ್ಲಿ ಅರಳಲು ಅವಕಾಶ ಕೊಟ್ಟರೆ ಅವರಿಂದ ಅಪ್ರತಿಮ ಕೊಡುಗೆಗಳನ್ನು ನಿರೀಕ್ಷಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ



ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಡಿ-ನೋಟಿಫೈಡ್ ಟ್ರೈಬ್ಸ್ (ಡಿಎನ್‌ಟಿ), ಅಲೆಮಾರಿ ಬುಡಕಟ್ಟುಗಳು (ಎನ್‌ಟಿ) ಮತ್ತು ಅರೆ-ಅಲೆಮಾರಿ ಬುಡಕಟ್ಟುಗಳಿಗೆ (ಎಸ್‌ಎನ್‌ಟಿ) ಸೇರಿದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ನೀಡಲಾಗುವುದು.

- **ಅರ್ಹತೆ:** ಡಿ-ನೋಟಿಫೈಡ್, ಅಲೆಮಾರಿ ಮತ್ತು ಅರೆ-ಅಲೆಮಾರಿ ಬುಡಕಟ್ಟುಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮುಕ್ತ.

12ನೇ ತರಗತಿಯ ನಂತರ ಜೆಇಇ, ನೀಟ್, ಕ್ಲಾಟ್, ಎನ್‌ಡಿಎ, ನಾನ್-ಕಮಿಷನ್ಡ್ ಮಿಲಿಟರಿ ರ್‍ಯಾಂಕ್ಸ್, ಸಿಎ-ಸಿಪಿಟಿ, ಬ್ಯಾಂಕಿಂಗ್, ಇನ್ಶೂರೆನ್ಸ್, ಪಿಎಸ್‌ಯು, ಎಸ್‌ಎಸ್‌ಸಿ, ಆರ್‌ಆರ್‌ಬಿ, ರಾಜ್ಯ ಮತ್ತು ಕೇಂದ್ರೀಯ ಪೊಲೀಸ್ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಪಡೆದುಕೊಳ್ಳಲು ಆಸಕ್ತರಾಗಿರಬೇಕು.

ಕುಟುಂಬದ ವಾರ್ಷಿಕ ಆದಾಯವು ₹2,50,000 ಅಥವಾ ಕಡಿಮೆ ಇರಬೇಕು. 12ನೇ ತರಗತಿ ಕಲಿಯುತ್ತಿರಬೇಕು ಅಥವಾ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. 12ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವಷ್ಟು ಕನಿಷ್ಠ ಅರ್ಹತಾ ಅಂಕಗಳನ್ನು ಪಡೆದುಕೊಂಡಿರಬೇಕು (ಅಭ್ಯರ್ಥಿಯು ಎದುರಿಸಲು ಬಯಸುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ಅವಲಂಬಿಸಿ) ಆದರೆ ಪ್ರಸ್ತುತ 12ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳು 10ನೇ ತರಗತಿಯಲ್ಲಿ ಕನಿಷ್ಠ ಶೇ 50 ಅಂಕಗಳನ್ನು ಪಡೆದಿರಬೇಕು. ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಇತರ ಯಾವುದೇ ಯೋಜನೆಗಳಿಂದ ಈ ರೀತಿಯ ಪ್ರಯೋಜನಗಳನ್ನು (ಕೋಚಿಂಗ್ ತರಗತಿಗಳ) ಪಡೆದುಕೊಂಡಿರಬಾರದು.

- **ಆರ್ಥಿಕ ಸಹಾಯ:** ₹1,20,000ದ ವರೆಗಿನ ಕೋಚಿಂಗ್ ಶುಲ್ಕ ಮತ್ತು ಹೆಚ್ಚುವರಿ ಪ್ರಯೋಜನಗಳು.
- **ಅರ್ಜಿ ಸಲ್ಲಿಸಲು ಕೊನೆ ದಿನ:** 13-10-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಮಾಹಿತಿಗೆ:** Short Url: www.b4s.in/praja/FCDNT1

ಡಿಎಕ್ಸ್‌ಸಿ ಪ್ರೋಗ್ರೆಸಿಂಗ್ ಮೈಂಡ್ಸ್

ಡಿಎಕ್ಸ್‌ಸಿ ಟೆಕ್ನಾಲಜಿಯ ಸಿಎಸ್‌ಆರ್ ಉಪಕ್ರಮವಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ/ಕ್ರೀಡಾ ವೆಚ್ಚಗಳಿಗೆ ಸಹಾಯ ನೀಡಲಿದೆ.

- **ಅರ್ಹತೆ:** ಸ್ಟೆಮ್-ಸಂಬಂಧಿತ ಕ್ಷೇತ್ರಗಳಲ್ಲಿ ಯಾವುದೇ ವರ್ಷದ ಪದವಿ ಅಭ್ಯಾಸ ಮಾಡುತ್ತಿರುವ ಮಹಿಳೆಯರು ಮತ್ತು ಲಿಂಗಪರಿವರ್ತಿತ ವಿದ್ಯಾರ್ಥಿಗಳು ಅರ್ಹರು. 13ರಿಂದ 25 ವರ್ಷ ವಯಸ್ಸಿನೊಳಗಿನ ಮತ್ತು ಕಳೆದ 2/3 ವರ್ಷಗಳಲ್ಲಿ ರಾಜ್ಯ/ ರಾಷ್ಟ್ರೀಯ / ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ / ದೇಶವನ್ನು ಪ್ರತಿನಿಧಿಸಿರುವ ಮಹಿಳಾ ಕ್ರೀಡಾಪಟುಗಳು ಅರ್ಜಿ ಸಲ್ಲಿಸಬಹುದು.

ಪದವಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಹಿಂದಿನ ತರಗತಿ/ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು.

ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹4,00,000ಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು (ಕ್ರೀಡಾಪಟುಗಳಿಗೆ ₹5,00,000)

- **ಆರ್ಥಿಕ ಸಹಾಯ:** ಸ್ಟೆಮ್‌ನಲ್ಲಿ ಪದವಿಗೆ - ₹50,000
- **ಕ್ರೀಡಾಪಟುಗಳಿಗೆ** - ₹1,25,000
- **ಅರ್ಜಿ ಸಲ್ಲಿಸಲು ಕೊನೆ ದಿನ:** 06-10-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/DXCS4

ಕೋರ್ಟೇವಾ ಅಗ್ರಿಸೈನ್ಸ್

ಕೃಷಿ ಕ್ಷೇತ್ರದಲ್ಲಿ ಸ್ನಾತಕೋತ್ತರ, ಡಾಕ್ಟರಲ್ ಅಥವಾ ಪದವಿಪೂರ್ವ ಕೋರ್ಸ್‌ಗಳಲ್ಲಿ ಮತ್ತು ಸ್ಟೆಮ್ ವಿಷಯಗಳೊಂದಿಗೆ 11 ಮತ್ತು 12ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಹಣಕಾಸಿನ ನೆರವು ನೀಡಲಿದೆ.

- **ಅರ್ಹತೆ:** ಸ್ನಾತಕೋತ್ತರ (ಎಂಬಿಎ/ಎಂ.ಎಸ್‌ಸಿ/ಎಂಟೆಕ್), ಡಾಕ್ಟರಲ್ ಅಥವಾ ಪದವಿಪೂರ್ವ ಕೋರ್ಸ್‌ಗಳು ಮತ್ತು ಸ್ಟೆಮ್ ವಿಷಯಗಳೊಂದಿಗೆ 11 ಮತ್ತು 12ನೇ ತರಗತಿಯಲ್ಲಿರುವ (ಸರ್ಕಾರಿ/ ಖಾಸಗಿ ಶಾಲೆಗಳು) ವಿದ್ಯಾರ್ಥಿನಿಯರು.

ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6,00,000 ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಕೋರ್ಟೇವಾ ಮತ್ತು ಬಡ್ಡಿ4ಸ್ಟಡಿಯ ಉದ್ಯೋಗಿಗಳ ಮಕ್ಕಳು ಅರ್ಹರಲ್ಲ

ಆರ್ಥಿಕ ಸಹಾಯ

- **ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ:** ₹ 50,000
- **ಪದವಿ ವಿದ್ಯಾರ್ಥಿನಿಯರಿಗೆ:** ₹ 25,000
- **ಶಾಲಾ ವಿದ್ಯಾರ್ಥಿನಿಯರಿಗೆ:** ₹10,000
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-09-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/CASP4

ಐಎಎಸ್‌ಗೆ ತಯಾರಿ ಹೇಗಿರಬೇಕು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಬಿಬಿಎ ಮಾಡುತ್ತಿದ್ದು ಐಎಎಸ್ ಮಾಡುವಾಸೆಯಿದೆ. ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.

ಯುಪಿಎಸ್‌ಸಿ ಕಠಿಣವಾದ ಸ್ಪರ್ಧಾತ್ಮಕ ಪರೀಕ್ಷೆ. ಈ ಪರೀಕ್ಷೆಯ ಯಶಸ್ಸಿಗೆ ಸೂಕ್ತವಾದ ಕಾರ್ಯತಂತ್ರ, ಸಾಕಷ್ಟು ಪರಿಶ್ರಮ ಹಾಗೂ ಏಕಾಗ್ರತೆಯಿದ್ದರೆ ಯಾರು ಬೇಕಾದರೂ ಐಎಎಸ್ ಅಧಿಕಾರಿಯಾಗಬಹುದು. ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಬಹು ಆಯ್ಕೆ ಮಾದರಿಯಾಗಿರುತ್ತದೆ. ಮುಖ್ಯ ಪರೀಕ್ಷೆಯಲ್ಲಿ ಎರಡು ಐಚ್ಛಿಕ ವಿಷಯಗಳೂ ಸೇರಿದಂತೆ 250 ಅಂಕಗಳ ಏಳು ಪತ್ರಿಕೆಗಳಿರುತ್ತವೆ. ಇದಾದ ನಂತರ, ಸಂದರ್ಶನದ ಮೂಲಕ ವ್ಯಕ್ತಿತ್ವ ಪರೀಕ್ಷೆ ಮಾಡಿ ಅಂತಿಮ ಆಯ್ಕೆಯಾಗುತ್ತದೆ.

ಐಚ್ಛಿಕ ವಿಷಯ ಯಾವುದಿದ್ದರೂ ಪಠ್ಯಕ್ರಮವನ್ನು ಅರಿತು, ಪುಸ್ತಕಗಳು ಮತ್ತು ಅಧ್ಯಯನದ ಸಾಮಗ್ರಿಯನ್ನು ಸಿದ್ಧ ಪಡಿಸಿಕೊಳ್ಳಬೇಕು. ಪ್ರಮುಖವಾಗಿ, ಓದುವಿಕೆ ಪರಿಣಾಮಕಾರಿಯಾಗಿರಬೇಕು.

ಐಚ್ಛಿಕ ವಿಷಯದ ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಿ ಸ್ವತಂತ್ರವಾಗಿ ತಯಾರಾಗಬಹುದು ಅಥವಾ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಕೋಚಿಂಗ್ ಇನ್‌ಸ್ಟಿಟ್ಯೂಟ್ ಸೇರಬಹುದು. ಈ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು, ಆಡಳಿತಾತ್ಮಕ ವಿಷಯಗಳ ಕುರಿತ ಜ್ಞಾನ ಮತ್ತು ಕೌಶಲಗಳ ಜೊತೆಗೆ ಸಕಾರಾತ್ಮಕ ಆಲೋಚನೆ, ನಿಷ್ಠೆ, ಪ್ರಾಮಾಣಿಕತೆ, ಸ್ವಯಂಪ್ರೇರಣೆ ಮತ್ತು ಆತ್ಮವಿಶ್ವಾಸವಿರಬೇಕು. ಪರಿಣಾಮಕಾರಿ ಅಧ್ಯಯನ ಮಾಡುವ ಬಗ್ಗೆ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = 3PzmKRaJHmk

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

27) ....(1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು.

ಎ) ಸರ್ ಚಾರ್ಲ್ಸ್ ವುಡ್ಸ್‌ನ ಬಿ) ಲಾರ್ಡ್ ಮೆಕಾಲೆನ
ಸಿ) ಜೋನಾಥ್ ಡೆಂಕನ್‌ನ ಡಿ) ಮನ್ರೋನ

ಉತ್ತರ:– ಎ

28) ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದವನು. ಯಾರು?

ಎ) ಜೋಜೋ ಮೆಥ್ಯೂ ಬಿ) ರೋಜ್ ಮೇರಿ
ಸಿ) ಲಾರ್ಡ್ ಮೆಕಾಲೆ ಡಿ) ಎಡ್ಮಂಡ್ ಬರ್ಕ್

ಉತ್ತರ:– ಡಿ

30) ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. .... ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.

ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

31) 'ನಿಯಂತ್ರಣ ಮಂಡಳಿ' (Board of Control) ಎನ್ನುವ ಆರು ಜನ ಕಮಿಷನರ್‌ಗಳನ್ನೊಳಗೊಂಡ ಹೊಸ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು. ಈ ಹಿಂದೆ ಇದ್ದ 'ನಿರ್ದೇಶನ' ಮಂಡಳಿಯ (Court of Directors) ಜಾಗದಲ್ಲಿ ನಿಯಂತ್ರಣ ಮಂಡಳಿ (Board of Control) ಹುಟ್ಟಿಕೊಂಡಿತು' ಈ ವ್ಯವಸ್ಥೆ ಈ ಕೆಳಗಿನ ಯಾವ ಕಾಯ್ದೆಯ ಮೂಲಕ ಸಾಧ್ಯ ಮಾಡಲಾಯಿತು?

ಎ) 1935 ಭಾರತ ಸರ್ಕಾರದ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಉತ್ತರ:– ಬಿ (ವಿವರಣೆ:– **Board of Control** ಮಂಡಳಿಯು ನಾಗರಿಕ, ಮಿಲಿಟರಿ, ಕಂದಾಯದ ವಿಷಯಗಳಲ್ಲಿ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಪಡೆದಿತ್ತು)

32) ಯಾವ ಕಾಯ್ದೆಯ ಅನ್ವಯ ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ನೇರವಾಗಿ ಬ್ರಿಟಿಷ್ ರಾಣಿಯ ಆಡಳಿತಕ್ಕೆ ವರ್ಗಾಯಿಸಲಾಯಿತು?

ಎ) 1935 ಭಾರತ ಸರ್ಕಾರದ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) ಭಾರತ ಸರ್ಕಾರದ ಕಾಯ್ದೆ – 1858
ಡಿ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಉತ್ತರ:–ಸಿ

33) ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿದ್ದು ಯಾವ ಕಾಯ್ದೆ?

ಎ) 1935 ಭಾರತ ಸರ್ಕಾರದ ಕಾಯ್ದೆ
ಬಿ) ಭಾರತ ಸರ್ಕಾರದ ಕಾಯ್ದೆ – 1858
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಉತ್ತರ:– ಬಿ

34) ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ಯಾರು?

ಎ) ಲಾರ್ಡ್ ಕ್ಯಾನಿಂಗ್ ಬಿ) ಲಾರ್ಡ್ ಮಿಂಟೊ
ಸಿ) ಲಾರ್ಡ್ ವಾರನ್ ಹೇಸ್ಟಿಂಗ್
ಡಿ) ಲಾರ್ಡ್ ಮೆಟ್ಕಾಫ್ ಡಿ) ಮೌಂಟ್ ಬ್ಯಾಟನ್

ಉತ್ತರ:–ಎ

35) ಭಾರತದ ಸಂವಿಧಾನ ರಚನೆ ಮುಖ್ಯವಾದ ಕಾಯ್ದೆ ಯಾವುದು?

ಎ) 1935ರ ಭಾರತ ಸರ್ಕಾರದ ಕಾಯ್ದೆ
ಬಿ) 1909 ಭಾರತೀಯ ಪರಿಷತ್ ಕಾಯ್ದೆ
ಸಿ) 1861ರ ಭಾರತೀಯ ಪರಿಷತ್ ಕಾಯ್ದೆ
ಡಿ) ಮೇಲಿನಯಾವುದೂ ಅಲ್ಲ

ಉತ್ತರ:– ಎ

ಪ್ರಶ್ನೋತ್ತರ:

ಒಂದು ವಾಕ್ಯದಲ್ಲಿ ಉತ್ತರಿಸಿ

1) ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ಯಾರು?

ಉತ್ತರ:– ಲಾರ್ಡ್ ಕಾರ್ನ್‌ವಾಲೀಸನು ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದನು.

2) ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್ ವಾಲೀಸನು ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದನು. ಆದರೆ ಇದಕ್ಕೆ ಯಾರು ಬೆಂಬಲ ನೀಡಲಿಲ್ಲ?

ಉತ್ತರ:– ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಇದಕ್ಕೆ ಬೆಂಬಲ ನೀಡಲಿಲ್ಲ.

3) ಯಾವ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು?

ಉತ್ತರ:– 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು

4) ಯಾವ ವರ್ಷದ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು?

ಉತ್ತರ:– 1853ರ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು

5) ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?

ಉತ್ತರ:– ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ : 'ದಿವಾನಿ ಅದಾಲತ್' ಎಂಬ ನಾಗರಿಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು.

6) ಕ್ರಿಮಿನಲ್ ನ್ಯಾಯಾಲಯದಲ್ಲಿ ಎಲ್ಲರಿಗೂ ಯಾವ ಕಾನೂನು ಅನುಸಾರ ವಿಚಾರಣೆ ನಡೆಸಲಾಗುತಿತ್ತು?

ಉತ್ತರ:– ಕ್ರಿಮಿನಲ್ ನ್ಯಾಯಾಲಯದಲ್ಲಿ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು.

7) ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುವ ವರ್ಗವೇ ಪೊಲೀಸರು ಆಗಿದ್ದು ಮೊಟ್ಟಮೊದಲ ಭಾರಿಗೆ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು ಯಾರು?

ಉತ್ತರ:– ಲಾರ್ಡ್ ಕಾರ್ನ್ ವಾಲೀಸ್

8) 'ಸೂಪರಿಟೆಂಡೆಂಟ್ ಆಫ್ ಪೊಲೀಸ್' (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು. ಯಾರು?

ಉತ್ತರ:– ಲಾರ್ಡ್ ಕಾರ್ನ್ ವಾಲೀಸ್

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

INTEGRALS

More Problems:-

1. Evaluate the following integral:

$$\int \frac{dx}{(x-1)\sqrt{2x+3}}$$

Soln :– Put $\sqrt{2x+3}=t$

$$\Rightarrow 2x+3=t^2 \Rightarrow x=\frac{1}{2}(t^2-3)$$

$$\Rightarrow dx=\frac{1}{2}(2t)\,dt=t\,dt$$

$$\therefore \int \frac{dx}{(x-1)\sqrt{2x+3}}=\int \frac{t\,dt}{\left[\frac{1}{2}(t^2-3)-1\right]t}$$

$$=2\int \frac{dt}{t^2-3-2}=2\int \frac{dt}{t^2-\left(\sqrt{5}\right)^2}$$

$$=2.\frac{1}{2\sqrt{5}}\log\left|\frac{t-\sqrt{5}}{t+\sqrt{5}}\right|+C$$

$$=\frac{1}{\sqrt{5}}\log\left|\frac{\sqrt{2x+3}-\sqrt{5}}{\sqrt{2x+3}+\sqrt{5}}\right|+C$$

2. Evaluate $\int \frac{dx}{(x+1)\sqrt{x^2-1}}$

Soln :– Put $x+1=\frac{1}{t}$

$$\Rightarrow dx=-\frac{1}{t^2}dt \;\&\; x=\frac{1}{t}-1$$

$$\therefore \int \frac{dx}{(x+1)\sqrt{x^2-1}}=\int \frac{-\frac{1}{t^2}dt}{\frac{1}{t}\sqrt{\left(\frac{1}{t}-1\right)^2-1}}$$

$$\Rightarrow -\int \frac{dt}{\sqrt{1-2t}}=-\int (1-2t)^{-1/2}\,dt$$

$$\Rightarrow -\frac{(1-2t)^{1/2}}{\frac{1}{2}(-2)}+C=\sqrt{1-2t}+C$$

$$\Rightarrow \sqrt{1-2\frac{1}{x+1}}+C=\sqrt{\frac{x-1}{x+1}}+C$$

3. Evaluate the following integral

$$\int \frac{x}{(x^2+4)\sqrt{x^2-5}}dx$$

Soln :– Put $\sqrt{x^2-5}=t$

$$\Rightarrow x^2=t^2+5$$

$$\Rightarrow 2x\,dx=2t\,dt$$

$$\Rightarrow x\,dx=t\,dt$$

$$\therefore \int \frac{x}{(x^2+4)\sqrt{(x^2-5}}dx=\int \frac{t\,dt}{\left[(t^2+5)+4\right]t}$$

$$\Rightarrow \int \frac{dt}{t^2+9}=\frac{1}{3}\tan^{-1}\frac{t}{3}+C$$

$$\Rightarrow \frac{1}{3}\tan^{-1}\left(\sqrt{\frac{x^2-5}{3}}\right)+C$$

4. Evaluate $\int \frac{dx}{x^2\sqrt{x+1}}$

Soln :– Put $\sqrt{x+1}=t \Rightarrow x+1=t^2 \Rightarrow dx=2t\,dt$

$$\therefore \int \frac{dx}{x^2\sqrt{x+1}}=\int \frac{2t\,dt}{(t^2-1)^2t}=\int \frac{2\,dt}{(t-1)^2(t+1)^2}$$

Let $\frac{2}{(t-1)^2(t+1)^2}=\frac{A}{t-1}+\frac{B}{(t-1)^2}+\frac{C}{t+1}+\frac{D}{(t+1)^2}$

$$\Rightarrow 2=A(t-1)(t+1)^2+B(t+1)^2+C(t+1)(t-1)^2+D(t-1)^2$$

On putting $t=1,-1$

we get; $2=B(2)^2,\ 2=D(-2)^2 \Rightarrow B=\frac{1}{2},\ D=\frac{1}{2}$

Equating coefficients of t^3 and constant terms on both sides, we get

$0=A+C,\ 2=-A+B+C+D$

$$\Rightarrow A+C=0,\ 2=-A+C+\frac{1}{2}+\frac{1}{2}$$

$$\Rightarrow A+C=0 \;\&\; -A+C=1 \Rightarrow A=-\frac{1}{2} \;\&\; C=\frac{1}{2}$$

$$\therefore \int \frac{dx}{x^2\sqrt{x+1}}=\int\left[\frac{-\frac{1}{2}}{t-1}+\frac{\frac{1}{2}}{(t-1)^2}+\frac{\frac{1}{2}}{t+1}+\frac{\frac{1}{2}}{(t+1)^2}\right]dt$$

$$\Rightarrow \frac{1}{2}\left[-\log|t-1|+\frac{(t-1)^{-1}}{-1}+\log|t+1|+\frac{(t+1)^{-1}}{-1}\right]+C$$

$$\Rightarrow -\frac{1}{2}\left[\log\left|\frac{t-1}{t+1}\right|+\frac{1}{t-1}+\frac{1}{t+1}\right]+C$$

$$\Rightarrow -\frac{1}{2}\left[\log\left|\frac{t-1}{t+1}\right|+\frac{2t}{t^2-1}\right]+C$$

$$\Rightarrow -\frac{1}{2}\log\left|\frac{\sqrt{x+1}-1}{\sqrt{x+1}+1}\right|-\frac{\sqrt{x+1}}{x}+C$$

5. Evaluate $\int \frac{\sqrt{1+x^2}}{1-x^2}dx$

Soln :– $\int \frac{\sqrt{1+x^2}}{1-x^2}dx=\int \frac{1+x^2}{(1-x^2)\sqrt{1+x^2}}dx$

$$\Rightarrow \int \frac{-(1-x^2)+2}{(1-x^2)\sqrt{1+x^2}}dx$$

$$\Rightarrow -\int \frac{1}{\sqrt{1+x^2}}dx+2\int \frac{dx}{(1-x^2)\sqrt{1+x^2}}$$

$$\Rightarrow -\log\left|x+\sqrt{1+x^2}\right|+2I$$

(Contd....)

ತಿರುಪತಿ ಲಾಡು ಪ್ರಕರಣ: ಕೋಟ್ಯಂತರ ಹಿಂದೂಗಳ ಭಾವನೆಗೆ ಧಕ್ಕೆ, ಇಂದು ಶುದ್ಧೀಕರಣ ಪ್ರಕ್ರಿಯೆ – ಸಿ.ಎಂ ನಾಯ್ಡು

ಕಲಬೆರಕೆ ತುಪ್ಪ: ತನಿಖೆಗೆ ಎಸ್‌ಐಟಿ ರಚನೆ

ಅಮರಾವತಿ (ಪಿಟಿಐ): ತಿರುಮಲ ತಿರುಪತಿ ದೇವಸ್ಥಾನದಲ್ಲಿ (ಟಿಟಿಡಿ) ತುಪ್ಪ ಖರೀದಿಗೆ ಇದ್ದ ನಿಯಮಗಳ ಬದಲಾವಣೆ ಸೇರಿದಂತೆ ಅಕ್ರಮಗಳ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗುವುದು ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಭಾನುವಾರ ಪ್ರಕಟಿಸಿದರು.

‘ಹಿಂದಿನ ವೈಎಸ್‌ಆರ್‌ಸಿಪಿ ನೇತೃತ್ವದ ಸರ್ಕಾರದ ವಿರುದ್ಧ ಕಿಡಿಕಾರಿದ ಅವರು, ತುಪ್ಪ ಖರೀದಿಗೆ ಇದ್ದ ಹಲವು ನಿಯಮಗಳನ್ನು ಹಿಂದಿನ ಸರ್ಕಾರದ ಅವಧಿಯಲ್ಲಿ ಬದಲಿಸಲಾಗಿದೆ’ ಎಂದು ಆರೋಪಿಸಿದರು.

ತಮ್ಮ ನಿವಾಸದಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ನಾಯ್ಡು, ತಿರುಪತಿಯ ಲಾಡು ತಯಾರಿಸುವಾಗ ಪ್ರಾಣಿಗಳ ಕೊಬ್ಬನ್ನು ಬಳಸಲಾಗಿದೆ ಎಂಬುದು ಬಹಿರಂಗವಾದ ನಂತರ ಕೋಟ್ಯಂತರ ಮಂದಿ ಹಿಂದೂಗಳ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಹೇಳಿದರು.

ಟಿಟಿಡಿ ಮಂಡಳಿಗೆ ಮಾಡುವ ನೇಮಕಗಳು ಹಿಂದಿನ ಸರ್ಕಾರದ ಅವಧಿಯಲ್ಲಿ ‘ಜೂಜಿನಂತೆ’ ಆಗಿದ್ದವು. ಧರ್ಮದಲ್ಲಿ ನಂಬಿಕೆ ಇಲ್ಲದವರನ್ನು ಮಂಡಳಿಗೆ ನೇಮಿಸಿರುವ ನಿದರ್ಶನಗಳಿವೆ, ಹಿಂದೂಗಳಲ್ಲದವರಿಗೆ ಮಂಡಳಿಯಲ್ಲಿ ಆದ್ಯತೆ ನೀಡಿದ ನಿದರ್ಶನವೂ ಇದೆ ಎಂದು ನಾಯ್ಡು ಹೇಳಿದರು.

‘ಐಜಿ ಅಥವಾ ಅವರಿಗಿಂತ ಮೇಲಿನ ಹಂತದ ಅಧಿಕಾರಿ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗುತ್ತದೆ. ಅದರ ವರದಿ ಆಧರಿಸಿ ಲಾಡು ಕಲಬೆರಕೆ ಪುನರಾವರ್ತನೆ ಆಗದಂತೆ ಸರ್ಕಾರ ಕಠಿಣ ಕ್ರಮ ಜರುಗಿಸಲಿದೆ. ಇದರಲ್ಲಿ ರಾಜಿ ಇಲ್ಲ. ಜನರ ಭಾವನೆಗಳ ಜೊತೆ ಆಟವಾಡಲು ಯಾರಿಗೂ ಅಧಿಕಾರವಿಲ್ಲ’ ಎಂದು ತಿಳಿಸಿದರು.

ತಿರುಮಲದ ಶುದ್ಧೀಕರಣಕ್ಕೆ ಸೋಮವಾರ ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯವರೆಗೆ ಶಾಂತಿ ಹೋಮ ಪಂಚಗವ್ಯ ಪ್ರೋಕ್ಷಣ ನಡೆಯಲಿದೆ ಎಂದೂ ಅವರು ತಿಳಿಸಿದರು. ‘ತಾಳೆ ಎಣ್ಣೆಯೇ ದುಬಾರಿ ಆಗಿರುವಾಗ ಯಾರಾದರೂ ತುಪ್ಪವನ್ನು ಕೆ.ಜಿ.ಗೆ ₹319ಕ್ಕೆ ಪೂರೈಸಲು ಹೇಗೆ ಸಾಧ್ಯ’ ಎಂದು ನಾಯ್ಡು ಪ್ರಶ್ನಿಸಿದರು.

ಎಆರ್ ಡೈರಿ ಫುಡ್ಸ್ ಪ್ರೈ.ಲಿ. ಕಂಪನಿ ಜೂನ್ 12ರಿಂದ ತುಪ್ಪ ಪೂರೈಸಲು ಆರಂಭಿಸಿತ್ತು ಎಂದರು. ರಾಜ್ಯದ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ಪ್ರಮಾಣಿತ ವಿಧಿ ವಿಧಾನಗಳನ್ನು ರೂಪಿಸಲು, ಅಲ್ಲಿನ ಸಂಪ್ರದಾಯಗಳನ್ನು ಗೌರವಿಸಲು ವರದಿಯೊಂದನ್ನು ಸಿದ್ಧಪಡಿಸಲು ವೈದಿಕ, ಧಾರ್ಮಿಕ ಮತ್ತು ಆಗಮ ಪಂಡಿತರ ಸಮಿತಿಯನ್ನು ರಚಿಸಲಾಗುವುದು ಎಂದು ಹೇಳಿದರು.

ನಾಯ್ಡುಗೆ ಛೀಮಾರಿ ಹಾಕಿ: ರೆಡ್ಡಿ ಒತ್ತಾಯ



ಜಗನ್‌ಮೋಹನ್



ಅಮರಾವತಿ(ಪಿಟಿಐ): ತಿರುಪತಿ ದೇವಸ್ಥಾನದ ಲಾಡು ವಿಚಾರದಲ್ಲಿ ಭುಗಿಲೆದ್ದಿರುವ ವಿವಾದಕ್ಕೆ ಸಂಬಂಧಿಸಿ ಕೂಡಲೇ ಮಧ್ಯಪ್ರವೇಶಿಸಿ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರಿಗೆ ಛೀಮಾರಿ ಹಾಕುವಂತೆ ಆಂಧ್ರಪ್ರದೇಶ ಮಾಜಿ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾನುವಾರ ಒತ್ತಾಯಿಸಿದ್ದಾರೆ.

ಈ ವಿಚಾರ ಕುರಿತು ಅವರು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ‘ಮುಖ್ಯಮಂತ್ರಿ ನಾಯ್ಡು ಸುಳ್ಳು ಹೇಳುವುದನ್ನೇ ಅಭ್ಯಾಸ ಮಾಡಿಕೊಂಡಿದ್ದಾರೆ’ ಎಂದು ಟೀಕಿಸಿರುವ ರೆಡ್ಡಿ, ‘ರಾಜಕೀಯ ಲಾಭಕ್ಕಾಗಿ ಕೋಟ್ಯಂತರ ಜನರ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಮಾಡುವಷ್ಟು ಕೀಳು ಮಟ್ಟಕ್ಕೆ ಇಳಿದಿದ್ದಾರೆ’ ಎಂದು ಆರೋಪಿಸಿದ್ದಾರೆ.

ತಿರುಪತಿ ದೇವಸ್ಥಾನದ ಲಾಡು ಸಿದ್ಧಪಡಿಸಲು ಬಳಸುವ ತುಪ್ಪದಲ್ಲಿ ಪ್ರಾಣಿಯ ಕೊಬ್ಬು ಪತ್ತೆಯಾಗಿರುವುದಕ್ಕೆ ಭಾರಿ ಆಕ್ರೋಶ ವ್ಯಕ್ತವಾಗುತ್ತಿದ್ದು, ಇದು ತೀವ್ರ ವಿವಾದದ ಸ್ವರೂಪ ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಜಗನ್ ಮೋಹನ್ ರೆಡ್ಡಿ, ಪ್ರಧಾನಿ ಅವರಿಗೆ ಎಂಟು ಪುಟಗಳ ಪತ್ರ ಬರೆದಿದ್ದಾರೆ.

ಪ್ರಸಾದ ತಯಾರಿಸಲು ಬಳಸುವ ತುಪ್ಪವನ್ನು ಸ್ವೀಕರಿಸುವುದಕ್ಕೂ ಮುನ್ನ, ವೆಂಕಟೇಶ್ವರ ದೇವಸ್ಥಾನದ ಕಸ್ಟೋಡಿಯನ್ ಆದ ಟಿಟಿಡಿ ಅನುಸರಿಸುವ ವಿಧಾನಗಳನ್ನು ಅವರು ಪತ್ರದಲ್ಲಿ ವಿವರಿಸಿದ್ದು, ‘ನಾಯ್ಡು ಅವರ ಈ ನಡೆ ಮುಖ್ಯಮಂತ್ರಿ ಸ್ಥಾನ ಮಾತ್ರವಲ್ಲ, ಸಾರ್ವಜನಿಕ ಜೀವನದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಘನತೆ ಕುಂದುಂಟು ಮಾಡಿದೆ’ ಎಂದಿದ್ದಾರೆ.

‘ಈಗ ಉದ್ಭವಿಸಿರುವ ಸನ್ನಿವೇಶದಲ್ಲಿ, ಇಡೀ ರಾಷ್ಟ್ರವೇ ನಿಮ್ಮತ್ತ ಮುಖ ಮಾಡಿದೆ. ಸುಳ್ಳುಗಳನ್ನು ಹಬ್ಬಿಸುತ್ತಿರುವ ನಾಯ್ಡು ಅವರಿಗೆ ಕಠಿಣ ವಾಗ್ದಂಡನೆ ವಿಧಿಸಬೇಕು ಹಾಗೂ ಸತ್ಯವನ್ನು ಜನರಿಗೆ ತಿಳಿಸಬೇಕು’ ಎಂದು ಕೋರಿದರು.

ವರದಿ ಸಲ್ಲಿಸಿದ ಟಿಟಿಡಿ ಇಒ

ಲಾಡು ವಿವಾದಕ್ಕೆ ಸಂಬಂಧಿಸಿ ಟಿಟಿಡಿ ಕಾರ್ಯ ನಿರ್ವಾಹಕ ಅಧಿಕಾರಿ ಜೆ.ಶ್ಯಾಮಲ ರಾವ್, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರಿಗೆ ಪ್ರಾಥಮಿಕ ವರದಿ ಸಲ್ಲಿಸಿದ್ದಾರೆ.

ಪ್ರಾಥಮಿಕ ವರದಿ ಅಧ್ಯಯನ ಮಾಡಿದ ಬಳಿಕ, ಮುಖ್ಯಮಂತ್ರಿ ನಾಯ್ಡು ಸಮಗ್ರ ತನಿಖೆಗೆ ಆದೇಶಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಆಹ್ವಾನ: ಅಕ್ಟೋಬರ್ 4ರಂದು ತಿರುಮಲದಲ್ಲಿ ನಡೆಯಲಿರುವ ಬ್ರಹ್ಮೋತ್ಸವಕ್ಕೆ ಮುಖ್ಯಮಂತ್ರಿ ನಾಯ್ಡು ಅವರಿಗೆ ಟಿಟಿಡಿ ಭಾನುವಾರ ಆಹ್ವಾನ ನೀಡಿದೆ.

‘ಪ್ರಾಯಶ್ಚಿತ್ತ ದೀಕ್ಷೆ’ ಕೈಗೊಂಡ ಪವನ್

ಹೈದರಾಬಾದ್: ಲಾಡು ಕಲಬೆರಕೆಯಾಗಿದೆ ಎಂಬ ಆರೋಪಗಳಿಂದಾಗಿ ತಿರುಮಲ ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆಯಾಗಿವ ಕಾರಣ, ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು 11 ದಿನಗಳ ‘ಪ್ರಾಯಶ್ಚಿತ್ತ ದೀಕ್ಷೆ’ ಕೈಗೊಂಡಿದ್ದಾರೆ.

ಗುಂಟೂರು ಜಿಲ್ಲೆಯ ನಂಬೂರಿನ ದಶಾವತಾರ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪವನ್ ಕಲ್ಯಾಣ್ ಅವರು ಭಾನುವಾರ ವಿಶೇಷ ಧಾರ್ಮಿಕ ವಿಧಿಗಳನ್ನು ನೆರವೇರಿಸಿ ಈ ‘ದೀಕ್ಷೆ’ ಪಡೆದರು.

‘ಪ್ರಾಯಶ್ಚಿತ್ತ ದೀಕ್ಷೆ’ ಅಂಗವಾಗಿ ಅವರು 11 ದಿನ ಕಠಿಣ ವ್ರತಾಚರಣೆ ನಡೆಸಲಿದ್ದಾರೆ. ಈ ಅವಧಿಯಲ್ಲಿ ತಿರುಮಲ ದೇವಸ್ಥಾನಕ್ಕೆ ಭೇಟಿ ನೀಡಿ, ಕ್ಷಮೆ ಕೋರಿ ವೆಂಕಟೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸುವರು.

‘ದೀಕ್ಷೆ’ ಕೈಗೊಳ್ಳುವುದಕ್ಕೂ ಮುನ್ನ ಮಾತನಾಡಿದ ಅವರು, ‘ಕಲಬೆರಕೆ ತುಪ್ಪವನ್ನು ಬಳಸಿ ತಯಾರಿಸಿದ್ದ ಲಾಡುಗಳನ್ನು ಅಯೋಧ್ಯೆಯ ರಾಮ ಜನ್ಮಭೂಮಿ ದೇವಸ್ಥಾನಕ್ಕೆ ಕಳುಹಿಸುವ ಮೂಲಕ ಈ ಹಿಂದಿನ ಸರ್ಕಾರ ದೊಡ್ಡ ತಪ್ಪು ಮಾಡಿದೆ’ ಎಂದರು. ‘ಪ್ರಸಾದವನ್ನು ಕಲಬೆರಕೆ ಮಾಡಲಾಗುತ್ತಿದ್ದರೂ ಟಿಟಿಡಿ ಮಂಡಳಿ ಸದಸ್ಯರು ಹಾಗೂ ಅಲ್ಲಿನ ಹಿಂದೂ ಅಧಿಕಾರಿಗಳು ಸುಮ್ಮನಿದ್ದದ್ದು ಏಕೆ’ ಎಂದು ಪ್ರಶ್ನಿಸಿದರು.

‘ಕಠಿಣ ಕ್ರಮಕ್ಕೆ ಆಗ್ರಹ’




ಮೀನಿನ ಎಣ್ಣೆ, ಹಂದಿ, ಹಸುವಿನ ಕೊಬ್ಬನ್ನು ಬಳಸಿ ಪ್ರಸಾದ ತಯಾರಿಸಿರುವುದು ಹಿಂದೂ ಸಮಾಜಕ್ಕೆ ಬಗೆದಿರುವ ದೊಡ್ಡ ಅಪಚಾರ. ಇಂತಹ ಕಾರ್ಯಕ್ಕೆ ಸರ್ಕಾರ ಮುಂದಾಗಿರುವುದು ಅತ್ಯಂತ ಖಂಡನೀಯ

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಉಡುಪಿಯ ಪೇಜಾವರ ಮಠ




ಬ್ರಿಟಿಷರು ಕೂಡ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡಿರಲಿಲ್ಲ. ಬಹುಸಂಖ್ಯಾತ ಹಿಂದೂಗಳಿಗೆ ಇದರಿಂದ ತುಂಬ ಆಘಾತವಾಗಿದೆ.

ವಿದ್ಯಾಪ್ರಸನ್ನತೀರ್ಥ ಶ್ರೀಪಾದರು, ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠಾಧೀಶ



ಯಾರಾದರೂ ಪ್ರಸಾದದ ಮೂಲಕ ಮಾಂಸಾಹಾರ ಸೇವನೆ ಮಾಡಿಸುವ ದುಷ್ಟ ಪ್ರಯತ್ನ ಮಾಡಿದ್ದರೆ ಅವರಿಗೆ ಕಠಿಣ ಶಿಕ್ಷೆ ಆಗಬೇಕು. ಅವರನ್ನು ದೇಶದಿಂದ ಗಡಿಪಾರು ಮಾಡಬೇಕು

ಗುಣಧರನಂದಿ ಮಹಾರಾಜರು, ವರೂರಿನ ನವಗ್ರಹ ತೀರ್ಥ ಕ್ಷೇತ್ರ



ಜಗನ್‌ಮೋಹನ್ ರೆಡ್ಡಿ ಅವರು ಹಿಂದೂಗಳಿಗೆ ಮಾಡಿರುವ ದೊಡ್ಡ ದ್ರೋಹ ಇದಾಗಿದೆ. ಅವರ ವಿರುದ್ಧ ಎಫ್‌ಐಆರ್ ಹಾಕಿ, ಬಂಧಿಸಿ, ಜೈಲಿಗೆ ಕಳುಹಿಸಬೇಕು

ಕೆ.ಎಸ್.ಈಶ್ವರಪ್ಪ, ಮಾಜಿ ಉಪ ಮುಖ್ಯಮಂತ್ರಿ

ವಿಎಚ್‌ಪಿ ಸಭೆಯಲ್ಲಿ ಇಂದು ಚರ್ಚೆ

ನವದೆಹಲಿ (ಪಿಟಿಐ): ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಕೇಂದ್ರೀಯ ಮಾರ್ಗದರ್ಶಕ ಮಂಡಳಿಯ ಸಭೆಯು ತಿರುಪತಿಯಲ್ಲಿ ಸೋಮವಾರ ನಡೆಯಲಿದ್ದು, ತಿರುಪತಿ ಲಾಡು ಕುರಿತ ವಿವಾದ ಹಾಗೂ ಹಿಂದೂ ದೇವಸ್ಥಾನಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸುವ ವಿಚಾರವು ಪ್ರಮುಖವಾಗಿ ಚರ್ಚೆಯಾಗಲಿದೆ.

ಮತಾಂತರದ ವಿಚಾರವಾಗಿಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ವಿಎಚ್‌ಪಿಯ ಹಿರಿಯ ಪದಾಧಿಕಾರಿಯೊಬ್ಬರು ತಿಳಿಸಿದರು. ಆಂಧ್ರಪ್ರದೇಶ, ತೆಲಂಗಾಣ ಮತ್ತು ದಕ್ಷಿಣ ಭಾರತದ ಇತರ ರಾಜ್ಯಗಳ ಹಿಂದೂ ಮಠಾಧೀಶರು, ಸಂತರು ಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ವಿಎಚ್‌ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಜರಂಗ ಬಾಗಡಾ ಮತ್ತು ಇತರ ಹಿರಿಯ ಪದಾಧಿಕಾರಿಗಳು ಸಭೆಯಲ್ಲಿ ಭಾಗಿಯಾಗಲಿದ್ದಾರೆ. ‘ಹಿಂದೂ ಸಮಾಜದ ಮುಂದಿರುವ ಸವಾಲುಗಳು ಹಾಗೂ ಅವುಗಳನ್ನು ನಿವಾರಿಸುವ ಮಾರ್ಗೋಪಾಯಗಳ ಕುರಿತಾಗಿ ಸಭೆಯು ಚರ್ಚೆ ನಡೆಸಲಿದೆ’ ಎಂದು ಬಾಗಡಾ ತಿಳಿಸಿದರು.

ತಿರುಪತಿ ಲಾಡು ವಿಚಾರವಾಗಿ ಸಭೆಯು ನಿರ್ಣಯವೊಂದನ್ನು ಅಂಗೀಕರಿಸುವ ಸಾಧ್ಯತೆಯೂ ಇದೆ ಎಂದು ಬಾಗಡಾ ಹೇಳಿದರು.

ತಿರುಮಲಕ್ಕೆ ‘ನಂದಿನಿ’ ತುಪ್ಪ ರವಾನೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತಿರುಪತಿ ತಿಮ್ಮಪ್ಪನ ಲಾಡು ಪ್ರಸಾದಕ್ಕಾಗಿ ಕಳೆದ 15 ದಿನಗಳಿಂದ ನಂದಿನಿ ತುಪ್ಪವಷ್ಟೇ ರವಾನೆಯಾಗುತ್ತಿದೆ. ಹಾಲು ತುಂಬಿಕೊಂಡು ಹೋಗುವ ನಂದಿನಿ ಟ್ಯಾಂಕರ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿದೆ. ಅದೇ ರೀತಿ ತಿರುಪತಿಗೆ ರವಾನೆಯಾಗುವ ತುಪ್ಪ ಸಾಗಿಸುವ ವಾಹನಗಳಿಗೂ ಜಿಪಿಎಸ್ ಅಳವಡಿಸಲಾಗಿದೆ. ಹೀಗಾಗಿ ನಮ್ಮ ಹಾಲು ಮತ್ತು ತುಪ್ಪಕ್ಕೆ ಕಲಬೆರಕೆ ಆಗುವ ಸಾಧ್ಯತೆ ಇಲ್ಲ’ ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ತಿಳಿಸಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ತಿರುಪತಿ ಲಾಡುವಿಗೆ ಬಳಸುವ ತುಪ್ಪದಲ್ಲಿ ಕಲಬೆರಕೆ ಆರೋಪ ಬಂದ ಮೇಲೆ ಮತ್ತೆ ನಂದಿನಿ ತುಪ್ಪವನ್ನು ಕಳುಹಿಸುವಂತೆ ಟಿಟಿಡಿಯಿಂದ ಬೇಡಿಕೆ ಬಂದಿದೆ. ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿ ತುಪ್ಪ ಸೇರಿದಂತೆ ಎಲ್ಲಾ ಉತ್ಪನ್ನಗಳೂ ಲಭ್ಯ ಇವೆ, ತಿರುಮಲದಿಂದ ಬರುವ ಬೇಡಿಕೆಯಷ್ಟೂ ತುಪ್ಪವನ್ನು ರವಾನಿಸಬಹುದಾಗಿದೆ’ ಎಂದು ಹೇಳಿದರು.

‘ಜತೆಗೆ, ರಾಜ್ಯದ ಎಲ್ಲಾ ದೇವಸ್ಥಾನಗಳಲ್ಲಿ ಸಹ ನಂದಿನಿ ತುಪ್ಪವನ್ನೇ ಬಳಸಬೇಕೆಂದು ಸರ್ಕಾರ ಆದೇಶ ಹೊರಡಿಸಿದ್ದು, ಅವುಗಳಿಗೆ ಸಹ ಪೂರೈಸುವಷ್ಟು ತುಪ್ಪ ನಮ್ಮಲ್ಲಿದೆ’ ಎಂದರು. ‘ಕೆಎಂಎಫ್ ವಿಚಾರದಲ್ಲಿ ಸಾಕಷ್ಟು ಹೆಮ್ಮೆ ಇದೆ. ನಂದಿನ ಬ್ರ್ಯಾಂಡ್ ಸಮಸ್ತ ಕನ್ನಡಿಗರ ಗೌರವ ಹೆಚ್ಚಿಸಿದೆ. ಕಳೆದ ನಾಲ್ಕು ವರ್ಷಗಳಿಂದ ತಿರುಮಲಕ್ಕೆ ಕೆಎಂಎಫ್‌ನ ಯಾವುದೇ ಉತ್ಪನ್ನವನ್ನೂ ಕಳುಹಿಸಿರಲಿಲ್ಲ’ ಎಂದು ಹೇಳಿದರು.



ಪ್ರವಾಹ. ಬಿಹಾರದ ಹಾಜಿಪುರ ಸಮೀಪದ ಪ್ರವಾಹ ಪೀಡಿತ ಗ್ರಾಮದ ಜನರು ಸುರಕ್ಷಿತ ಪ್ರದೇಶದತ್ತ ಭಾನುವಾರ ತೆರಳಿದರು –ಪಿಟಿಐ ಚಿತ್ರ

ಮೋದಿ ವಿರುದ್ಧ ವಾಗ್ದಾಳಿ • ಜಂತರ್ ಮಂತರ್‌ನಲ್ಲಿ ನಡೆದ ‘ಜನತಾ ಕಿ ಅದಾಲತ್’

ಆರ್‌ಎಸ್‌ಎಸ್‌ಗೆ 5 ಪ್ರಶ್ನೆ ಕೇಳಿದ ಕೇಜ್ರಿವಾಲ್



ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿರುವ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು, ಮೋದಿ ಅವರ ಕ್ರಮಗಳಿಗೆ ಉತ್ತರ ನೀಡುವಂತೆ ಆರ್‌ಎಸ್‌ಎಸ್‌ಗೆ ಐದು ಪ್ರಶ್ನೆಗಳನ್ನು ಭಾನುವಾರ ಕೇಳಿದ್ದಾರೆ.

ಬಿಜೆಪಿಯ ಪೋಷಕ ಸ್ಥಾನದಲ್ಲಿರುವ ಹಿಂದುತ್ವ ಸಂಘಟನೆಯು ತನ್ನ ಮಗುವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂದು ಹೇಳಿರುವ ಅವರು, ‘ಮಗ ಈಗ ತನ್ನ ತಾಯಿಗೇ ದರ್ಪ ತೋರಿಸುವಷ್ಟು ದೊಡ್ಡವನಾಗಿದ್ದಾನೆಯೇ’ ಎಂದು ಅವರು ಪ್ರಶ್ನಿಸಿದ್ದಾರೆ.

ಅಲ್ಲದೆ ತನ್ನ ಐದು ಪ್ರಶ್ನೆಗಳಿಗೆ ಉತ್ತರಿಸುವಂತೆ ಅವರು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರನ್ನು ಆಗ್ರಹಿಸಿದ್ದಾರೆ. ಅವರ ಪ್ರಶ್ನೆಗಳಲ್ಲಿ ವಿವಿಧ ರಾಜಕೀಯ ಒಳಾರ್ಥಗಳು ಅಡಗಿವೆ.

ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ, ಜಂತರ್ ಮಂತರ್‌ನಲ್ಲಿ ನಡೆದ ಮೊದಲ ‘ಜನತಾ ಕಿ ಅದಾಲತ್’ನ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

ಕೇಜ್ರಿವಾಲ್ ಪರ ಘೋಷಣೆ: ಹಳದಿ ಮತ್ತು ನೀಲಿ ಬಣ್ಣದ ಧ್ವಜಗಳು ಸಭೆಯಲ್ಲಿ ರಾರಾಜಿಸಿದವು. ಸಹಸ್ರಾರು ಬೆಂಬಲಿಗರು ಧ್ವಜ ಮತ್ತು ಬ್ಯಾನರ್‌ಗಳನ್ನು ಹಿಡಿದು ಕೇಜ್ರಿವಾಲ್ ಪರ ಘೋಷಣೆಗಳನ್ನು ಕೂಗಿದರು. ಕೇಜ್ರಿವಾಲ್ ‘ನಮ್ಮಲ್ಲಿ ಒಬ್ಬರು, ನಾವು ಅವರ ಪರ ನಿಲ್ಲುತ್ತೇವೆ’, ‘ನಮ್ಮ ಕೇಜ್ರಿವಾಲ್ ಪ್ರಾಮಾಣಿಕರು’, ‘ಅವರು ತಲೆಬಾಗುವುದಿಲ್ಲ’ ಎಂಬ ಘೋಷಣೆಗಳನ್ನು ಕೂಗಿ ಬೆಂಬಲ ವ್ಯಕ್ತಪಡಿಸಿದರು.

ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ತಿಂಗಳ ಸೆರೆವಾಸದ ಬಳಿಕ ಕೇಜ್ರಿವಾಲ್ ಸೆ. 13ರಂದು ತಿಹಾರ್ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾದರು.

ಬಿಜೆಪಿಯಿಂದ ಪ್ರತಿಭಟನೆ: ಜಂತರ್ ಮಂತರ್‌ನಲ್ಲಿ ಕೇಜ್ರಿವಾಲ್ ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ, ಅಲ್ಲಿಂದ ಒಂದು ಕಿ.ಮೀ ದೂರದಲ್ಲಿರುವ ಕನ್ನಾಟ್‌ನಲ್ಲಿ ಬಿಜೆಪಿಯು, ಭ್ರಷ್ಟಾಚಾರ ವಿಷಯಗಳಿಗೆ ಸಂಬಂಧಿಸಿದಂತೆ ಕೇಜ್ರಿವಾಲ್ ಮತ್ತು ಎಎಪಿ ವಿರುದ್ಧ ಪ್ರತಿಭಟನೆ ನಡೆಸಿತು. ಅಲ್ಲದೆ ರಾಜಘಾಟ್ ಬಳಿಯೂ ಬಿಜೆಪಿಯು ಅರವಿಂದ ಕೇಜ್ರಿವಾಲ್ ವಿರುದ್ಧ ಪ್ರತಿಭಟಿಸಿತು.

ಕೇಜ್ರಿವಾಲ್ ಪ್ರಶ್ನೆಗಳು

1. ಪಕ್ಷಗಳನ್ನು ವಿಭಜಿಸಲು ಮತ್ತು ಪ್ರತಿ ಪಕ್ಷಗಳ ಸರ್ಕಾರಗಳನ್ನು ಉರುಳಿಸಲು ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಳ್ಳುವುದನ್ನು ಆರ್‌ಎಸ್‌ಎಸ್ ಒಪ್ಪುತ್ತದೆಯೇ?
2. ‘ಭ್ರಷ್ಟ’ರು ಎಂದು ತಾನು ಹೇಳಿದ ರಾಜಕಾರಣಿಗಳನ್ನೇ ಪಕ್ಷಕ್ಕೆ ಸೇರಿಸಿಕೊಳ್ಳುವ ಬಿಜೆಪಿ ರಾಜಕೀಯವನ್ನು ಒಪ್ಪುವಿರಾ?
3. ಕೇಸರಿ ಪಕ್ಷದ ಸೈದ್ಧಾಂತಿಕ ಮಾರ್ಗದರ್ಶಕ ಸ್ಥಾನದಲ್ಲಿರುವ ಆರ್‌ಎಸ್‌ಎಸ್ ಅನ್ನು, ತಮ್ಮ ಪಕ್ಷಕ್ಕೆ ಅಗತ್ಯವಿಲ್ಲ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಹೇಳಿದಾಗ ನಿಮಗೆ ಏನೆನಿಸಿತು?
4. ಬಿಜೆಪಿಯ ಈಗಿನ ರಾಜಕೀಯದ ಬಗ್ಗೆ ಆರ್‌ಎಸ್‌ಎಸ್ ಮುಖ್ಯಸ್ಥರಿಗೆ ತೃಪ್ತಿಯಿದೆಯೇ?
5. ನಾಯಕನಿಗೆ 75 ವರ್ಷವಾದಾಗ ನಿವೃತ್ತಿಯಾಗಬೇಕು ಎಂಬ ನಿಯಮವನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ಮಾಡಿತ್ತು. ಇದರನ್ವಯ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ್ ಜೋಶಿ, ಕಲ್ರಾಜ್ ಮಿಶ್ರಾ ಸೇರಿದಂತೆ ಹಲವು ನಾಯಕರು ನಿವೃತ್ತರಾಗಿದ್ದಾರೆ. ಈಗ ಗೃಹ ಸಚಿವ ಅಮಿತ್ ಶಾ ಅವರು ಈ ನಿಯಮ ಮೋದಿ ಅವರಿಗೆ ಅನ್ವಯಿಸುವುದಿಲ್ಲ ಎಂದಿದ್ದಾರೆ. ಅಡ್ವಾಣಿ ಅವರಿಗೆ ಅನ್ವಯಿಸಿದ ಈ ನಿಯಮ ಮೋದಿ ಅವರಿಗೆ ಅನ್ವಯಿಸುವುದಿಲ್ಲ ಎಂಬ ಸತ್ಯವನ್ನು ನೀವು ಒಪ್ಪುವಿರಾ?

‘ಅಧಿಕಾರದ ದುರಾಸೆಯಿಲ್ಲ’

‘ನಾನು ರಾಜಕೀಯಕ್ಕೆ ಸೇರಿದ್ದು ದೇಶ ಸೇವೆಗಾಗಿಯೇ ಹೊರತು ಅಧಿಕಾರ ಅಥವಾ ಹುದ್ದೆಯ ದುರಾಸೆಯಿಂದಲ್ಲ’ ಎಂದು ಕೇಜ್ರಿವಾಲ್ ಹೇಳಿದರು.

‘ಭ್ರಷ್ಟಾಚಾರ ಆರೋಪದಿಂದ ನೋವಾಗಿದೆ. ಹೀಗಾಗಿಯೇ ರಾಜೀನಾಮೆ ನೀಡಿದ್ದೇನೆ. 10 ವರ್ಷಗಳಲ್ಲಿ ನಾನು ಗೌರವ ಗಳಿಸಿದ್ದೇನೆಯೇ ಹೊರತು ಹಣವನ್ನಲ್ಲ’ ಎಂದರು.

‘ನಾನು ಕಳ್ಳನಾ ಅಥವಾ ನನ್ನನ್ನು ಜೈಲಿಗೆ ಕಳುಹಿಸಿದವರು ಕಳ್ಳರಾ’ ಎಂದು ಸೇರಿದ್ದ ಜನರನ್ನು ಕೇಳಿದರು. ಮುಂದೆ ನಡೆಯಲಿರುವ ದೆಹಲಿ ವಿಧಾನಸಭೆ ಚುನಾವಣೆಯು ನನ್ನ ಪಾಲಿಗೆ ‘ಅಗ್ನಿ ಪರೀಕ್ಷೆ’ ಎಂದರು. ‘ನನ್ನನ್ನು ಅಪ್ರಾಮಾಣಿಕ ಎಂದು ನೀವು ಭಾವಿಸುವುದಾದರೆ ನನಗೆ ಮತ ಚಲಾಯಿಸಬೇಡಿ’ ಎಂದು ಅವರು ಇದೇ ವೇಳೆ ಹೇಳಿದರು.

ನವರಾತ್ರಿ ಸಮಯದ ‘ಶ್ರಾದ್ಧ’ ಬಳಿಕ ನಾನು ಮುಖ್ಯಮಂತ್ರಿಯ ಅಧಿಕೃತ ನಿವಾಸದಿಂದ ಹೊರಬರುತ್ತೇನೆ. ಆ ನಂತರ ಜನರ ನಡುವೆ ವಾಸಿಸುತ್ತೇನೆ ಎಂದರು.

ರಾಮಮಂದಿರ ಭೇಟಿಗೆ ನಿರಾಕರಣೆ

ಪ್ರಜಾವಾಣಿ ವಾರ್ತೆ



ಲಖನೌ: ಉತ್ತರಾಖಂಡದ ಜ್ಯೋತಿರ್ಮಠದ ಸ್ವಾಮಿ ಅವಿಮುಕ್ತೇಶ್ವರಾನಂದ ಅವರು ಅಯೋಧ್ಯೆ ಭಾನುವಾರ ಗೆ ಭೇಟಿ ನೀಡಿದ್ದರೂ ರಾಮ ಮಂದಿರವು ಅಪೂರ್ಣವಾಗಿದೆ ಎಂಬ ಕಾರಣಕ್ಕೆ ಅಲ್ಲಿಗೆ ಭೇಟಿ ನೀಡಲು ನಿರಾಕರಿಸಿದರು.

ಯಾವುದೇ ದೇವಸ್ಥಾನದ ಪಾಲಿಗೆ ‘ಧ್ವಜ’ವು (ದೇವಸ್ಥಾನದ ಅತ್ಯಂತ ಎತ್ತರದ ಭಾಗ) ಅತ್ಯಂತ ಮುಖ್ಯವಾಗುತ್ತದೆ. ‘ಧ್ವಜ’ವಿಲ್ಲದೆ ದೇವಸ್ಥಾನವು ಪೂರ್ಣವಾಗಿದೆ ಎಂದು ಭಾವಿಸಲಾಗದು ಎಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು ಹೇಳಿದರು.

‘ಧ್ವಜದ ದರ್ಶನ ಕಡ್ಡಾಯ. ಧ್ವಜದ ದರ್ಶನ ಆಗುವುದಿಲ್ಲ ಎಂದಾದರೆ ನಾನು ಅಲ್ಲಿ (ರಾಮ ಮಂದಿರದಲ್ಲಿ) ಏನು ಮಾಡಲಿ’ ಎಂದು ಅವರು ಪ್ರಶ್ನಿಸಿದರು. ರಾಮ ಮಂದಿರವು ಪೂರ್ಣಗೊಂಡ ನಂತರ ತಾವು ಅಲ್ಲಿ ಪೂಜೆ ಸಲ್ಲಿಸುವುದಾಗಿ ತಿಳಿಸಿದರು.

ಸ್ವಾಮಿ ಅವಿಮುಕ್ತೇಶ್ವರಾನಂದ ಅವರು ರಾಮ ಮಂದಿರದ ಸನಿಹದಲ್ಲೇ ಇರುವ ಖೇರೇಶ್ವರ ಮಹಾದೇವ ದೇವಸ್ಥಾನದಲ್ಲಿ ಅಭಿಷೇಕ ಪೂಜೆ ಮಾಡಿದರು. ಅಪೂರ್ಣ ಮಂದಿರದಲ್ಲಿ ಬಾಲರಾಮನ ವಿಗ್ರಹಕ್ಕೆ ಪ್ರಾಣಪ್ರತಿಷ್ಠಾಪನೆ ಮಾಡುವುದು ಹಿಂದೂ ಧರ್ಮಕ್ಕೆ ವಿರುದ್ಧ ಎಂಬ ಕಾರಣ ನೀಡಿದ್ದ ಸ್ವಾಮಿ ಅವಿಮುಕ್ತೇಶ್ವರಾನಂದ ಅವರು, ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗಿಯಾಗಿರಲಿಲ್ಲ. ಅವರ ಈ ನಿಲುವನ್ನು ಹಲವಾರು ಮಠಾಧೀಶರು, ಟೀಕಿಸಿದ್ದರು.

ವಕ್ಫ್ ಮಸೂದೆಗೆ 1.2 ಕೋಟಿ ಪ್ರತಿಕ್ರಿಯೆ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆಯ ಪರಿಶೀಲನೆ ನಡೆಸುತ್ತಿರುವ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಇ–ಮೇಲ್ ಮೂಲಕ 1.2 ಕೋಟಿ ಪ್ರತಿಕ್ರಿಯೆಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿಯ ಜಗದಾಂಬಿಕಾ ಪಾಲ್ ನೇತೃತ್ವದ ಸಮಿತಿಗೆ ದಾಖಲೆಗಳು ಇರುವ 75 ಸಾವಿರ ಪ್ರತಿಕ್ರಿಯೆಗಳು ಕೂಡ ಬಂದಿವೆ. ಈ ಕಾರಣಕ್ಕಾಗಿ ಸಮಿತಿಯು ತನ್ನ ಕೆಲಸಕ್ಕಾಗಿ ಲೋಕಸಭಾ ಸಚಿವಾಲಯದಿಂದ ಹೆಚ್ಚಿನ ಸಿಬ್ಬಂದಿಯನ್ನು ಕೋರಿದೆ.

‘ಇ–ಮೇಲ್‌ಗಳ ಪರಿಶೀಲನೆಗೆ, ಅವುಗಳನ್ನು ವರ್ಗೀಕರಿಸಿ, ದಾಖಲಿಸುವುದಕ್ಕೆ ಹೆಚ್ಚುವರಿಯಾಗಿ 15 ಸಿಬ್ಬಂದಿಯನ್ನು ಒದಗಿಸಲಾಗಿದೆ’ ಎಂದು ಮೂಲಗಳು ವಿವರಿಸಿವೆ.

‘ಜಮೀನು ಸ್ವಾಧೀನ: ತ್ವರಿತವಾಗಿ ಪರಿಹಾರ ನೀಡುವುದು ಸರ್ಕಾರದ ಹೊಣೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಲೀಕರ ಇಚ್ಛೆಗೆ ವಿರುದ್ಧವಾಗಿ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಾಗ, ಪರಿಹಾರ ಮೊತ್ತವನ್ನು ಸಾಧ್ಯವಾದಷ್ಟು ಬೇಗ ನೀಡಬೇಕಾದ ಹೊಣೆಯು ಸರ್ಕಾರದ ಮೇಲೆ ಇರುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ವಿಭಾಗೀಯ ಪೀಠವು, ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಮೊದಲೇ ಪರಿಹಾರ ನೀಡದೆ ಇರುವುದು ‘ನ್ಯಾಯಸಮ್ಮತ ಪರಿಹಾರ ಮತ್ತು ಜಮೀನು ಸ್ವಾಧೀನ, ಪುನರ್ವಸತಿಯಲ್ಲಿ ಪಾರದರ್ಶಕತೆ ಕಾಯ್ದೆ’ಯ ಸೆಕ್ಷನ್ 38(1)ರ ಉಲ್ಲಂಘನೆ ಆಗುತ್ತದೆ ಎಂದು ಹೇಳಿದೆ.

ಜಮೀನು ಮಾಲೀಕರಿಂದ ಜಮೀನನ್ನು ಸ್ವಾಧೀನಕ್ಕೆ ಪಡೆಯುವ ಮೊದಲು ಪರಿಹಾರ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ನೀಡಬೇಕು ಎಂಬುದನ್ನು ಕಾಯ್ದೆಯ ಸೆಕ್ಷನ್ 38 ಹೇಳುತ್ತದೆ ಎಂದು ಪೀಠವು ನೆನಪಿಸಿದೆ.

ಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸುವುದು ಮಾತ್ರ ತನ್ನ ಕೆಲಸ ಎಂಬ ಕಾರಣ ನೀಡಿ ಸರ್ಕಾರಗಳು ತಮ್ಮ ಸಾಂವಿಧಾನಿಕ ಹಾಗೂ ಶಾಸನಾತ್ಮಕ ಹೊಣೆಯಿಂದ ತಪ್ಪಿಸಿಕೊಳ್ಳುವಂತಿಲ್ಲ ಎಂದು ಹೇಳಿದೆ.

ಶ್ರೀಲಂಕಾ: ಮಾರ್ಕ್ಸ್‌ವಾದಿ ದಿಸ್ಸನಾಯಕೆ ಹೊಸ ಅಧ್ಯಕ್ಷ

ಎರಡನೇ ಮುಖಪುಟದಿಂದ...

ಆರ್ಥಿಕ ಬಿಕಟ್ಟಿನಿಂದ ಸುಧಾರಿಸಿಕೊಳ್ಳುತ್ತಿರುವ ದೇಶದಲ್ಲಿ ಹೊಸ ಅಧ್ಯಕ್ಷರ ಆಯ್ಕೆ ಸಂಬಂಧ ಶನಿವಾರ ಮತದಾನ ನಡೆದಿತ್ತು. 1.7 ಕೋಟಿ ಮತದಾರರ ಪೈಕಿ ಶೇ 75ರಷ್ಟು ಜನರು ಮತ ಚಲಾಯಿಸಿದ್ದರು.

ಮಾರ್ಕ್ಸಿಸ್ಟ್– ಲೆನಿನಿಸ್ಟ್ ಸಿದ್ಧಾಂತದ ಅಡಿಯಲ್ಲಿ ಸ್ಥಾಪನೆಗೊಂಡಿರುವ ಜನತಾ ವಿಮುಕ್ತಿ ಪೆರಮುನದ (ಜೆವಿಪಿ) ನಾಯಕ ಅನುರಾ ಕುಮಾರ ದಿಸ್ಸನಾಯಕೆ ಅವರನ್ನು ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಪಕ್ಷ ಚುನಾವಣಾ ಅಖಾಡಕ್ಕೆ ಇಳಿಸಿತ್ತು.

‘ಅಧ್ಯಕ್ಷ ವಿಕ್ರಮಸಿಂಘೆ ಅವರ ಪರವಾಗಿ ನಾನು ಚುನಾವಣಾ ಪ್ರಚಾರ ಮಾಡಿದ್ದೆ. ಆದರೆ, ಶ್ರೀಲಂಕಾದ ಜನರು ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ. ದಿಸ್ಸನಾಯಕೆ ಅವರನ್ನು ಆಯ್ಕೆ ಮಾಡಿದ ಮತದಾರ ತೀರ್ಪನ್ನು ಗೌರವಿಸುತ್ತೇನೆ’ ಎಂದು ವಿದೇಶಾಂಗ ಸಚಿವ ಅಲಿ ಸಬ್ರಿ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ್ದಾರೆ.

2ನೇ ಪ್ರಾಶಸ್ತ್ಯದ ಮತ ಎಣಿಕೆ

ಚುನಾವಣೆಗೆ ಸ್ಪರ್ಧಿಸಿದ್ದ ಯಾವುದೇ ಅಭ್ಯರ್ಥಿಯು ಶೇ 50ಕ್ಕಿಂತ ಹೆಚ್ಚು ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆಯುವಲ್ಲಿ ವಿಫಲರಾದ ಕಾರಣ, ಎರಡನೇ ಪ್ರಾಶಸ್ತ್ಯದ ಮತಗಳನ್ನು ಎಣಿಕೆ ಮಾಡಬೇಕಾಯಿತು. ಎರಡನೇ ಪ್ರಾಶಸ್ತ್ಯದ ಮತಗಳ ಎಣಿಕೆ ನಡೆದದ್ದು, ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆಯ ಇತಿಹಾಸದಲ್ಲಿ ಇದೇ ಮೊದಲು.

ಈ ಹಿಂದಿನ ಎಲ್ಲ ಚುನಾವಣೆಗಳಲ್ಲೂ ಮೊದಲ ಪ್ರಾಶಸ್ತ್ಯದ ಮತದ ಸುತ್ತಿನಲ್ಲೇ ಅಭ್ಯರ್ಥಿಗಳು ಸರಳ ಬಹುಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಎರಡನೇ ಮತ್ತು ಮೂರನೇ ಪ್ರಾಶಸ್ತ್ಯದ ಮತಗಳನ್ನು ಎಣಿಸುವ ಪ್ರಮೇಯವೇ ಇಲ್ಲಿಯವರೆಗೆ ಬಂದಿರಲಿಲ್ಲ. ಆದರೆ ಈ ಬಾರಿ ಪರಿಸ್ಥಿತಿ ಭಿನ್ನವಾಗಿತ್ತು.

ಉದಯ್ ಭಾನು ಯುವ ಕಾಂಗ್ರೆಸ್ ಅಧ್ಯಕ್ಷ



ನವದೆಹಲಿ (ಪಿಟಿಐ): ಭಾರತೀಯ ಯುವ ಕಾಂಗ್ರೆಸ್‌ನ(ಐವೈಸಿ) ನೂತನ ಅಧ್ಯಕ್ಷರಾಗಿ ಉದಯ್ ಭಾನು ಛಿಬ್ ಅವರನ್ನು ಭಾನುವಾರ ನೇಮಿಸಲಾಗಿದೆ.

ಇದಕ್ಕೂ ಮೊದಲು ಛಿಬ್ ಅವರು ಐವೈಸಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಜಮ್ಮುವಿನ ಪಲೌರಾದವರಾದ ಅವರು ಜಮ್ಮು ಮತ್ತು ಕಾಶ್ಮೀರ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷರಾಗಿದ್ದರು.

ಕಳೆದ ಐದು ವರ್ಷ ಶ್ರೀನಿವಾಸ್ ಬಿ.ವಿ. ಅವರು ಐವೈಸಿ ಅಧ್ಯಕ್ಷರಾಗಿದ್ದರು. ಅವರ ನೇತೃತ್ವವು ಐವೈಸಿಗೆ ಫಲಪ್ರದಾಯಕವಾಗಿತ್ತು. ಸಂಘಟನೆಗೆ ಅವರು ನೀಡಿದ ಕೊಡುಗೆಗಳನ್ನು ಕಾಂಗ್ರೆಸ್ ಶ್ಲಾಘಿಸಿದೆ.

ಎಂವಿಎಗೆ ಸತ್ಯಪಾಲ್ ಮಲಿಕ್ ಬೆಂಬಲ

ಮುಂಬೈ (ಪಿಟಿಐ): ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರನ್ನು ಭಾನುವಾರ ಭೇಟಿ ಮಾಡಿದ ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಮಹಾ ವಿಕಾಸ್ ಆಘಾಡಿ(ಎಂವಿಎ) ಮೈತ್ರಿಕೂಟದ ಪರವಾಗಿ ಪ್ರಚಾರ ಮಾಡುವುದಾಗಿ ಭರವಸೆ ನೀಡಿದರು. ಬಳಿಕ ಸುದ್ದಿಗಾರರೊಂದಿಗೆಮಾತನಾಡಿದ ಸತ್ಯಪಾಲ್ ಅವರು, ‘ರಾಜ್ಯದಲ್ಲಿರುವ ಆಡಳಿತ ವಿರೋಧಿ ಅಲೆಯನ್ನು ಗಮನಿಸಿದರೆ, ಎಂವಿಎಗೆ ಭರ್ಜರಿ ಗೆಲುವಾಗುವ ವಿಶ್ವಾಸವಿದೆ ಮತ್ತು ಆಡಳಿತರೂಢ ಬಿಜೆಪಿಯನ್ನು ಜನ ಮಹಾ ರಾಷ್ಟ್ರದಿಂದ ಓಡಿಸಲಿದ್ದಾರೆ’ ಎಂದು ಹೇಳಿದರು.

ಭಾರತದಿಂದ 31 ‘ಎಂಕ್ಯೂ-9ಬಿ’ ಡ್ರೋನ್‌ಗಳ ಖರೀದಿ

ಖರೀದಿ ಪ್ರಕ್ರಿಯೆಯಲ್ಲಿ ಪ್ರಗತಿ: ಜೋ ಬೈಡನ್ ಸ್ವಾಗತ

ವಾಷಿಂಗ್ಟನ್(ಪಿಟಿಐ): ರಕ್ಷಣಾ ಸಾಮಗ್ರಿ ತಯಾರಿಸುವ ಅಮೆರಿಕ ಕಂಪನಿ ಜನರಲ್ ಆಟೊಮಿಕ್ಸ್‌ನಿಂದ ಭಾರತವು 31 ‘ಎಂಕ್ಯೂ-9ಬಿ’ ಡ್ರೋನ್‌ಗಳ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿ ಆಗಿರುವ ಪ್ರಗತಿಯನ್ನು ಅಧ್ಯಕ್ಷ ಜೋ ಬೈಡನ್ ಸ್ವಾಗತಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರಿಗಾಗಿ ವಿಲ್ಮಿಂಗ್ಟನ್‌ನ ತಮ್ಮ ನಿವಾಸದಲ್ಲಿ ಶನಿವಾರ ಆಯೋಜಿಸಿದ್ದ ಔತಣಕೂಟದ ವೇಳೆ, ಬೈಡನ್ ಅವರು ಈ ಮಾತು ಹೇಳಿದ್ದಾರೆ.

ಅಲ್ಲದೇ, ಪರಸ್ಪರರ ನಡುವೆ ಮಿಲಿಟರಿ ಹಾರ್ಡ್‌ವೇರ್‌ಗಳ ಪೂರೈಕೆಗೆ ಉತ್ತೇಜನ ನೀಡುವುದಕ್ಕೆ ಉಭಯ ನಾಯಕರು ಸಮ್ಮತಿಸಿದರು ಎಂದು ಸಭೆ ಕುರಿತು ಬಿಡುಗಡೆಯಾಗಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ರಕ್ಷಣಾ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಂಬಂಧ ವೃದ್ಧಿಸುವುದು ಸೇರಿದಂತೆ ವಿವಿಧ ಮಹತ್ವದ ವಿಷಯಗಳು ಕುರಿತು ಬೈಡನ್ ಹಾಗೂ ಮೋದಿ ಚರ್ಚಿಸಿದರು ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

> ಮುಂದಿನ ವರ್ಷ ನಡೆಯುವ ‘ಕ್ವಾಡ್’ ಶೃಂಗಸಭೆ ಆತಿಥ್ಯವನ್ನು ಭಾರತ ವಹಿಸಲಿದೆ
>
> **ನರೇಂದ್ರ ಮೋದಿ,** ಪ್ರಧಾನಿ

‘ಎಂಕ್ಯೂ-9ಬಿ’ ಡ್ರೋನ್‌ಗಳು ಶಸ್ತ್ರಸಜ್ಜಿತವಾಗಿದ್ದು, ಬಹು ದೂರದ ಗುರಿಯನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿವೆ. ಕಣ್ಗಾವಲು ವ್ಯವಸ್ಥೆಯನ್ನು ಮತ್ತಷ್ಟು ದೃಢಪಡಿಸುವ ಜೊತೆಗೆ, ಭಾರತದ ಸಶಸ್ತ್ರಗಳ ಪಡೆಗಳ ದಾಳಿ ಸಾಮರ್ಥ್ಯವನ್ನು ಇವು ಹೆಚ್ಚಿಸಲಿವೆ’ ಎಂದು ಪ್ರಕಟಣೆ ತಿಳಿಸಿದೆ.

₹25 ಸಾವಿರ ಕೋಟಿ ವೆಚ್ಚದಲ್ಲಿ ಭಾರತ ಈ ಅತ್ಯಾಧುನಿಕ ಡ್ರೋನ್‌ಗಳನ್ನು ಖರೀದಿಸುತ್ತಿದೆ. ವಾಯುಪ್ರದೇಶದ ಮೇಲೆ ಕಣ್ಗಾವಲು ಇಡಲು 16 (ಸ್ಕೈ ಗಾರ್ಡಿಯನ್) ಹಾಗೂ ಕಡಲಗಡಿ ಮೇಲೆ ನಿಗಾ ಇಡಲು 15 (ಸೀ ಗಾರ್ಡಿಯನ್) ಡ್ರೋನ್‌ಗಳನ್ನು ಖರೀದಿಸಲಾಗುತ್ತಿದೆ.

ಚೀನಾಕ್ಕೆ ಹೊಂದಿಕೊಂಡಿರುವ ಗಡಿ ಹಾಗೂ ಹಿಂದೂ ಮಹಾಸಾಗರದಲ್ಲಿ ನಿಗಾ ಹೆಚ್ಚಿಸುವುದು ಇವುಗಳ ಖರೀದಿ ಉದ್ದೇಶವಾಗಿದೆ.

ಜೆಟ್ ಎಂಜಿನ್‌ಗಳು, ಶಸ್ತ್ರಾಸ್ತ್ರಗಳು ಸೇರಿದಂತೆ ಸೇನೆಯ ಪ್ರಮುಖ ವ್ಯವಸ್ಥೆಗಳನ್ನು ಜಂಟಿಯಾಗಿ ತಯಾರಿಸುವ ನಿಟ್ಟಿನಲ್ಲಿ ಆಗಿರುವ ಪ್ರಗತಿ ಕುರಿತು ಉಭಯ ನಾಯಕರು ಚರ್ಚಿಸಿದರು ಎಂದೂ ಪ್ರಕಟಣೆ ತಿಳಿಸಿದೆ.

ಭೇಟಿಯ ಪ್ರಮುಖ ಅಂಶಗಳು

- 297 ಪ್ರಾಚೀನ ವಸ್ತುಗಳು/ಕಲಾಕೃತಿಗಳನ್ನು ಭಾರತಕ್ಕೆ ಹಿಂದಿರುಗಿಸಲು ಅಮೆರಿಕ ಒಪ್ಪಿಗೆ. ಅಧ್ಯಕ್ಷ ಜೋ ಬೈಡನ್ ನಿವಾಸದಲ್ಲಿರುವ ಕಲಾಕೃತಿಗಳು ಇದರಲ್ಲಿ ಸೇರಿವೆ
- ಬೆಳ್ಳಿಯಿಂದ ತಯಾರಿಸಿದ, ರೈಲಿನ ಮಾದರಿಯನ್ನು ಬೈಡನ್‌ಗೆ ಮೋದಿ ಅವರು ಉಡುಗೊರೆಯಾಗಿ ನೀಡಿದರು
- ಮಹಾರಾಷ್ಟ್ರದ ಕರಕುಶಲ ಕರ್ಮಿಗಳಿಂದ ಮಾದರಿ ತಯಾರಿಕೆ
- ಒಂದು ಬದಿಯಲ್ಲಿ ‘ದೆಹಲಿ–ಡೆಲವೇರ್’ ಹಾಗೂ ಮತ್ತೊಂದು ಬದಿಯಲ್ಲಿ, ‘ಇಂಡಿಯನ್ ರೈಲ್ವೇಸ್’ ಎಂದು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಕೆತ್ತಲಾಗಿದೆ
- ಜಮ್ಮು–ಕಾಶ್ಮೀರದ ಕುಶಲಕಲೆಯ ಶ್ರೀಮಂತಿಕೆ ಸಾರುವ ಪಶ್ಮಿನಾ ಶಾಲನ್ನು ಜಿಲ್ ಬೈಡನ್ ಅವರಿಗೆ ಉಡುಗೊರೆಯಾಗಿ ಮೋದಿ ನೀಡಿದರು

ಎರಡನೇ ಮುಖಪುಟದಿಂದ...

ಬೈಡನ್ ಅವರು ಈ ಮಾತುಗಳನ್ನು ಹೇಳುವಾಗ ಮೈಕ್ರೊಫೋನ್ ಬಂದ್ ಆಗಿರಲಿಲ್ಲ ಎಂಬುದನ್ನು ಗಮನಿಸಿದ ಹಿರಿಯ ಅಧಿಕಾರಿಯೊಬ್ಬರು, ತಪ್ಪನ್ನು ತಿದ್ದುವ ಪ್ರಯತ್ನ ನಡೆಸಿದರು.

‘ಈ ವಿಚಾರವಾಗಿ ನಾವು ಹೆಚ್ಚು ವಿವರವಾಗಿ ಹೇಳುವುದೇನೂ ಇಲ್ಲ. ಆಂತರಿಕವಾಗಿ ನಾವು ಹೊಂದಿರುವ ಅಭಿಪ್ರಾಯಗಳು ಬಹಿರಂಗವಾಗಿ ವ್ಯಕ್ತವಾಗುವ ಅಭಿಪ್ರಾಯಗಳ ನಡುವೆ ಅಂತಹ ವ್ಯತ್ಯಾಸವೇನೂ ಇಲ್ಲ’ ಎಂದು ಹೇಳಿದ್ದಾರೆ.

‘ಇದು ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶ ಕುರಿತ ಸಮಾವೇಶ. ಈ ಪ್ರದೇಶದಲ್ಲಿ ಚೀನಾ ದೊಡ್ಡ ರಾಷ್ಟ್ರವೂ ಆಗಿದೆ. ಹೀಗಾಗಿ ಶೃಂಗಸಭೆಯ ಕಾರ್ಯಸೂಚಿಯಲ್ಲಿ ಚೀನಾ ವಿಚಾರವೂ ಇದ್ದದ್ದು ನ್ಯಾಯಯುತವಾಗಿಯೇ ಇದೆ’ ಎಂದು ಸಮರ್ಥನೆ ನೀಡಿದ್ದಾರೆ.



ಸುಭಾಷಿತ

ಒಬ್ಬ ವ್ಯಕ್ತಿ ಎಂತಹವನು ಎಂಬುದು ಅವನ ನಾಲಿಗೆಯಿಂದ ಗೊತ್ತಾಗುತ್ತದೆ.

–ಪಾಟೀಲ ಪುಟ್ಟಪ್ಪ

ದೆಹಲಿ ಮುಖ್ಯಮಂತ್ರಿ ಆತಿಶಿ ಮುಂದಿದೆ ಕಠಿಣ ಸವಾಲು

ದೆಹಲಿ ಮುಖ್ಯಮಂತ್ರಿಯಾಗಿ ಆತಿಶಿ ಮರ್ಲೇನಾ ಪ್ರಮಾಣವಚನ ಸ್ವೀಕರಿಸಿದ್ದಾರೆ. ಈ ಹುದ್ದೆಗೆ ಅವರು ಏರಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಆಮ್ ಆದ್ಮಿ ಪಕ್ಷ ಮತ್ತು ಸರ್ಕಾರದಲ್ಲಿ ಆತಿಶಿ ಅವರಿಗಿಂತ ಹಿರಿಯ ನಾಯಕರು ಇದ್ದಾರೆ. ಆದರೆ, ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಅರವಿಂದ ಕೇಜ್ರಿವಾಲ್ ಮತ್ತು ಇತರ ಮುಖಂಡರು ಜೈಲು ಸೇರಿದ್ದ ಸಂದರ್ಭದಲ್ಲಿ ಪಕ್ಷ ಮತ್ತು ಸರ್ಕಾರದ ಪರವಾಗಿ ದಿಟ್ಟ ಧ್ವನಿಯಾಗಿದ್ದವರು ಆತಿಶಿ. ಸಚಿವೆಯಾಗುವುದಕ್ಕೆ ಮುಂಚೆ ಸರ್ಕಾರದ ಸಲಹೆಗಾರ್ತಿಯಾಗಿಯೂ ಅವರು ಉತ್ತಮ ಕೆಲಸ ಮಾಡಿದ್ದರು. ರಾಷ್ಟ್ರ ರಾಜಧಾನಿಯ ಶಾಲೆಗಳ ಚಹರೆಯನ್ನೇ ಬದಲಾಯಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿತ್ತು. ಸಚಿವೆಯಾಗಿ ಅವರು ಹಲವು ಖಾತೆಗಳನ್ನು ನಿರ್ವಹಿಸಿ, ಆಡಳಿತದ ಅನುಭವವನ್ನೂ ಪಡೆದುಕೊಂಡಿದ್ದಾರೆ. ವಿಶೇಷ ಅಧಿಕಾರಗಳನ್ನು ಹೊಂದಿರುವ ಲೆಫ್ಟಿನೆಂಟ್ ಗವರ್ನರ್ ಇರುವ ದೆಹಲಿಯ ಆಡಳಿತ ಸುಲಭವೇನಲ್ಲ. ಅಧಿಕಾರಿಶಾಹಿಯ ಮೇಲೆ ದೆಹಲಿ ಸರ್ಕಾರಕ್ಕೆ ನಿಯಂತ್ರಣವೇನೂ ಇಲ್ಲ. ಅದಲ್ಲದೆ, ಪ್ರತಿಕೂಲವಾಗಿರುವ ಕೇಂದ್ರ ಸರ್ಕಾರದ ಜೊತೆಗೂ ಏಗಬೇಕು. ಬೇಸಿಗೆಯಲ್ಲಿ ದೆಹಲಿಗೆ ಹೆಚ್ಚು ನೀರು ಒದಗಿಸಬೇಕು ಎಂದು ಆತಿಶಿ ಅವರು ಉಪವಾಸ ಸತ್ಯಾಗ್ರಹವನ್ನೂ ನಡೆಸಿದ್ದರು.



ಅಬಕಾರಿ ನೀತಿ ಹಗರಣದಿಂದ ದೆಹಲಿ ಸರ್ಕಾರ ಮತ್ತು ಎಎಪಿ ಕಳೆದುಕೊಂಡ ಹೊಳಪನ್ನು ಮರಳಿ ಸಂಪಾದಿಸಬೇಕಾದ ಹೊಣೆ ಈಗ ಹೊಸ ಮುಖ್ಯಮಂತ್ರಿಯ ಮೇಲಿದೆ

ಮುಖ್ಯಮಂತ್ರಿಯಾಗಿದ್ದ ಕೇಜ್ರಿವಾಲ್ ಮತ್ತು ಉಪಮುಖ್ಯಮಂತ್ರಿಯಾಗಿದ್ದ ಮನೀಶ್ ಸಿಸೋಡಿಯಾ ಅವರು ಬಂಧನಕ್ಕೆ ಒಳಗಾಗಿದ್ದರು. ಹೀಗಾಗಿ, ದೆಹಲಿಯಲ್ಲಿ ಆಡಳಿತ ವ್ಯವಸ್ಥೆಯು ಕುಸಿದಿದೆ. ಅದನ್ನು ಮೇಲಕ್ಕೆ ಎತ್ತುವ ಹೊಣೆಗಾರಿಕೆ ಈಗ ಆತಿಶಿ ಅವರ ಮೇಲಿದೆ. ಸಿಸೋಡಿಯಾ ಬಂಧನದ ನಂತರ ಅವರ ಬಳಿಯಲ್ಲಿದ್ದ ಎಲ್ಲ ಖಾತೆಗಳನ್ನು ನಿಭಾಯಿಸಿ ತಮ್ಮ ಸಾಮರ್ಥ್ಯವನ್ನು ಆತಿಶಿ ಸಾಬೀತು ಮಾಡಿದ್ದಾರೆ. ಈಗ ಅವರ ಮೇಲೆ ಇನ್ನೂ ಹೆಚ್ಚಿನ ಹೊಣೆಗಾರಿಕೆ ಇದೆ. ಹಿರಿಯ ನಾಯಕರೂ ಸೇರಿದಂತೆ ಪಕ್ಷದಿಂದ ಅವರು ಹೆಚ್ಚಿನ ರಾಜಕೀಯ ಬೆಂಬಲವನ್ನು ನಿರೀಕ್ಷಿಸಬಹುದು ಮತ್ತು ಅವರಿಗೆ ಅದರ ಅಗತ್ಯವೂ ಇದೆ. ಆತಿಶಿ ಅವರನ್ನು ಈ ಹುದ್ದೆಗೆ ನೇಮಕ ಮಾಡಲಾಗಿದೆಯೇ ವಿನಾ ಅವರು ಆಯ್ಕೆಯಾಗಿ ಬಂದವರಲ್ಲ ಎಂಬುದನ್ನೂ ಗಮನಿಸಬೇಕು. ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಇದೇ ಪರಿಪಾಟವನ್ನು ಅನುಸರಿಸಲಾಗುತ್ತಿದೆ. ಪಕ್ಷ ಅಥವಾ ಸರ್ಕಾರದ ನಾಯಕತ್ವದ ಸ್ಥಾನಗಳಿಗೆ ಬಹಿರಂಗ ಸ್ಪರ್ಧೆ ಏರ್ಪಡುವುದನ್ನು ಯಾವ ಪಕ್ಷವೂ ಬಯಸುವುದಿಲ್ಲ.

‘ಜನತಾ ನ್ಯಾಯಾಲಯ’ವು ಚುನಾವಣೆಯಲ್ಲಿ ತಾವು ಪ್ರಾಮಾಣಿಕ ಎಂದು ತೀರ್ಪು ನೀಡುವವರೆಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರುವುದಿಲ್ಲ ಎಂದು ಕೇಜ್ರಿವಾಲ್ ಹೇಳಿದ್ದಾರೆ. ಚುನಾವಣೆಯನ್ನು ನವೆಂಬರ್‌ನಲ್ಲಿಯೇ ನಡೆಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ಈ ಚುನಾವಣೆಯಲ್ಲಿ ಎಎಪಿ ಗೆದ್ದರೆ ತಾವು ಮತ್ತೆ ಮುಖ್ಯಮಂತ್ರಿ ಆಗುವುದಾಗಿ ಕೇಜ್ರಿವಾಲ್ ಹೇಳಿದ್ದಾರೆ. ಹಾಗಾಗಿ, ಕೆಲವೇ ತಿಂಗಳ ಅವಧಿಗೆ ಮಾತ್ರ ಆತಿಶಿ ಮುಖ್ಯಮಂತ್ರಿ ಹುದ್ದೆಯಲ್ಲಿ ಇರಲಿದ್ದಾರೆ. ಈಗ ಅವರು ಪಕ್ಷದ ರಾಜಕೀಯ ಮತ್ತು ಚುನಾವಣಾ ಕಾರ್ಯತಂತ್ರಕ್ಕೆ ಸರ್ಕಾರದ ಕಡೆಯಿಂದ ಬಲವಾದ ಬೆಂಬಲ ಒದಗಿಸಬೇಕಾಗಿದೆ. ಅಬಕಾರಿ ನೀತಿ ಹಗರಣದಿಂದಾಗಿ ದೆಹಲಿ ಸರ್ಕಾರ ಮತ್ತು ಎಎಪಿ ಕಳೆದುಕೊಂಡ ಹೊಳಪನ್ನು ಮರಳಿ ಸಂಪಾದಿಸಬೇಕಾಗಿದೆ. ಆಗಿರುವ ಕಲೆಗಳನ್ನು ತೊಳೆಯಬೇಕಿದೆ. ಈ ವರ್ಷ ಮಳೆಯಿಂದಾಗಿ ಉಂಟಾದ ಪ್ರವಾಹ ಪರಿಸ್ಥಿತಿಯನ್ನು ಸರ್ಕಾರ ನಿರ್ವಹಿಸಿದ ರೀತಿಯ ಕುರಿತೂ ಟೀಕೆಗಳು ಕೇಳಿಬಂದಿವೆ. ಆಡಳಿತಕ್ಕೆ ಸಂಬಂಧಿಸಿ ಇತರ ಸಮಸ್ಯೆಗಳೂ ಇವೆ. ಲೋಕಸಭಾ ಚುನಾವಣೆಯಲ್ಲಿ ದೆಹಲಿಯಲ್ಲಿ ಎಎಪಿ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಿಲ್ಲ. ಹಾಗಾಗಿ, ಆತಿಶಿ ಅವರು ಮುಂದಿನ ಕೆಲವು ತಿಂಗಳಲ್ಲಿ ಕಠಿಣ ಸವಾಲನ್ನೇ ಎದುರಿಸಬೇಕಿದೆ. ಆಡಳಿತವನ್ನು ಬಿಗಿಗೊಳಿಸಬೇಕಿದೆ. ಭಾರಿ ಶ್ರಮವಹಿಸಿ ಕೆಲಸ ಮಾಡಬೇಕಿದೆ. ಹೊಸ ಗ್ರಹಿಕೆಗಳನ್ನು ರೂಪಿಸಬೇಕಿದೆ ಮತ್ತು ಸಂಕಥನಗಳನ್ನು ಕಟ್ಟಬೇಕಿದೆ. ಆದರೆ, ಈ ಎಲ್ಲವುಗಳಿಗೆ ಇರುವ ಸಮಯ ಮಾತ್ರ ಬಹಳ ಕಡಿಮೆ.

ದಿನದ ಟ್ವೀಟ್

ರಾಜಕಾರಣಿಗೂ ಇರಲಿ ನಿವೃತ್ತಿ




ಒಬ್ಬ ರಾಜಕಾರಣಿಗೆ ಒಂದು ಅವಧಿ ಮಾತ್ರ ಎಂಬ ವ್ಯವಸ್ಥೆಯನ್ನು ರೂಪಿಸಿದರೆ ಹೇಗೆ? ಎಷ್ಟೇ ಆದರೂ ಅವರದ್ದು ಸಾರ್ವಜನಿಕ ಸೇವೆಯಾದ್ದರಿಂದ, ಅದಕ್ಕೆ 5 ವರ್ಷಗಳ ಅವಧಿ ಬೇಕಾದಷ್ಟು ಆಗುತ್ತದೆ. ಬಡಜನರನ್ನು ಮೂರ್ಖರನ್ನಾಗಿಸುತ್ತಾ ಅವರನ್ನು ಲೂಟಿ ಮಾಡುವ, ರಕ್ತ ಹೀರುವ ರಾಜಕಾರಣಿಗಳಿಗೆ ನಿವೃತ್ತಿ ವಯಸ್ಸು ಎಂಬುದು ಯಾಕಿಲ್ಲ? ರಾಜಕಾರಣಿಯನ್ನು ಹೊರತುಪಡಿಸಿ ಉಳಿದವರೆಲ್ಲರೂ ನಿವೃತ್ತರಾಗುತ್ತಾರೆ.

ರಚನಾ ಮುಖರ್ಜಿ

ಕಿಡಿನುಡಿ

ರಾಜಕೀಯ ನಾಟಕ ಶುರುವಾಯಿತು. ರಾಜಕೀಯ ಲಾಭಕ್ಕಾಗಿ ಭಗವಾನ್ ವೆಂಕಟೇಶ್ವರನನ್ನು ಬಳಸಿಕೊಳ್ಳುವುದನ್ನು ನೋಡಲು ಬೇಸರವಾಗುತ್ತದೆ.

(ತಿರುಪತಿ ದೇವಸ್ಥಾನದ ಪ್ರಸಾದವಾದ ಲಾಡುಗಳಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿರುವುದಕ್ಕೆ ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು 11 ದಿನಗಳ ಪ್ರಾಯಶ್ಚಿತ್ತ ದೀಕ್ಷೆ ಕೈಗೊಂಡಿರುವುದಕ್ಕೆ ಪ್ರತಿಕ್ರಿಯೆ)



ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಗುರುವಾರ, 23-9-1999

• **ಬರ: ತುರ್ತು ಪರಿಹಾರಕ್ಕೆ ಆದೇಶ**

ಬೆಂಗಳೂರು, ಸೆ. 22– ಮುಂಗಾರು ಮಳೆಯ ತೀವ್ರ ಕೊರತೆಯಿಂದ ರಾಜ್ಯದ ಚಿತ್ರದುರ್ಗ, ಕೊಪ್ಪಳ, ಧಾರವಾಡ, ಹಾಸನ, ಕೋಲಾರ, ಮಂಡ್ಯ, ಹಾವೇರಿ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಕೊರತೆ ತೀವ್ರಗೊಂಡಿದೆ. ಬೆಳೆಗಳು ಒಣಗುತ್ತಿದ್ದು ಬರ ಪರಿಸ್ಥಿತಿ ತಲೆದೋರಿದೆ.

ಕುಡಿಯುವ ನೀರು ಒದಗಿಸಲು ಹಾಗೂ ಬರ ಪರಿಹಾರ ಕಾಮಗಾರಿಗಳಿಗಾಗಿ ಹೆಚ್ಚುವರಿ ಹಣ ಬಿಡುಗಡೆ ಮಾಡಬೇಕೆಂದು ಈ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸರ್ಕಾರವನ್ನು ಕೋರಿದ್ದಾರೆ ಎಂದು ಕಂದಾಯ ಸಚಿವ ಬಿ. ಸೋಮಶೇಖರ್ ಅವರು ಇಂದು ‘ಪ್ರಜಾವಾಣಿ’ಗೆ ತಿಳಿಸಿದರು.

• **ಬನ್ನೇರುಘಟ್ಟ: ಎಂಟು ಹುಲಿಗಳಿಗೆ ಪ್ರತ್ಯೇಕ ಬೋನು**

ಬೆಂಗಳೂರು, ಸೆ. 22– ಇಲ್ಲಿಗೆ ಸಮೀಪದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಇತ್ತೀಚೆಗೆ ಹೆಣ್ಣು ಹುಲಿ ‘ನೀತು’ವಿನ ಮೇಲೆ ಹಲ್ಲೆ ನಡೆಸಿ ಆಕೆಯ ಸಾವಿಗೆ ಕಾರಣವಾದ ಹುಲಿಗಳಿಗೆ ಈಗ ಪ್ರತ್ಯೇಕ ಬೋನಿನ ವ್ಯವಸ್ಥೆ ಮಾಡಲಾಗಿದೆ.

ಈ ಎಂಟು ಹುಲಿಗಳನ್ನು ಇತರ ಹುಲಿಗಳ ಬೋನಿನಿಂದ ದೂರದಲ್ಲಿರುವ ಸಫಾರಿ ಪ್ರದೇಶದಲ್ಲಿ ನೂತನವಾಗಿ ನಿರ್ಮಿಸಿರುವ ಪ್ರತ್ಯೇಕ ಬೋನುಗಳಲ್ಲಿ ಇರಿಸಲಾಗಿದೆ. ಇದರಿಂದ ಸಫಾರಿ ಪ್ರದೇಶದಲ್ಲಿರುವ ಬೋನಿನ ಸಂಖ್ಯೆ ಹತ್ತಕ್ಕೆ ಏರಿದಂತಾಗಿದೆ.

ಇಲ್ಲಿಯವರೆಗೆ ಸಫಾರಿ ಪ್ರದೇಶದಲ್ಲಿರುವ ಎಂಟು ಬೋನುಗಳಲ್ಲಿ ಒಟ್ಟು ಇಪ್ಪತ್ತಾರು ಹುಲಿಗಳನ್ನು ಇರಿಸಲಾಗಿತ್ತು. ಚಿಕ್ಕ ಸಫಾರಿ ಪ್ರದೇಶದಲ್ಲಿ ಹೆಚ್ಚು ಹುಲಿಗಳು ಇರುವ ಕಾರಣ ಹುಲಿಗಳನ್ನು ಸರದಿಯಂತೆ ಹೊರಕ್ಕೆ ಬಿಡಲಾಗುತ್ತಿತ್ತು. ಇತರ ಹುಲಿಗಳ ಮೇಲೆ ಹಲ್ಲೆ ಮಾಡುವ ಸ್ವಭಾವವನ್ನು ಬೆಳೆಸಿಕೊಂಡಿದ್ದ ಎಂಟು ವರ್ಷದ ನೀತುವಿನ ಮೇಲೆ ಭಾನುವಾರ ಕೆಲವು ಹುಲಿಗಳು ದಾಳಿ ಮಾಡಿದ್ದವು.

50 ವರ್ಷಗಳ ಹಿಂದೆ

ಸೋಮವಾರ, 23-9-1974

• **ಹಣ ಹಾಕದೆ ಪಬ್ಲಿಕ್ ಕಾಲ್ ಬೂತ್‌ಗಳಿಂದ ಫೋನ್ ಮಾಡುವ ತಂತ್ರ**

ಬೆಂಗಳೂರು, ಸೆ. 22– ಸಾರ್ವಜನಿಕ ಉಪಯೋಗಕ್ಕಾಗಿ ಇಟ್ಟಿರುವ ಪಬ್ಲಿಕ್ ಕಾಲ್ ಬೂತ್‌ಗಳಿಂದ ಟೆಲಿಫೋನ್ ಮಾಡಲು ಹತ್ತು ಪೈಸೆಗಳ ಮೂರು ನಾಣ್ಯಗಳನ್ನು ಹಾಕಬೇಕು. ಆದರೆ ಹಣ ಹಾಕದೆ ಟೆಲಿಫೋನ್ ಮಾಡುವ ತಂತ್ರಗಳನ್ನು ಅನೇಕರು ಪತ್ತೆ ಹಚ್ಚಿದ್ದಾರೆ. ಹೇರ್‌ಪಿನ್, ಸವಕಲು ನಾಣ್ಯ, ನಿಕ್ಕಲ್ ಚೂರು, ಕಾಗದದ ಚೂರುಗಳು ಮೊದಲಾದ ಅನೇಕ ವಸ್ತುಗಳು ಬೂತ್‌ಗಳಲ್ಲಿ ಕಂಡುಬರುವುದು ಸರ್ವೇಸಾಮಾನ್ಯ.

ಸಾರ್ವಜನಿಕರಿಗಾಗಿ ಇಟ್ಟಿರುವ ಟೆಲಿಫೋನ್‌ಗಳ ದುರುಪಯೋಗ ಮಿತಿಮೀರಿದೆ ಎಂದು ಕೇಂದ್ರ ಸಂಪರ್ಕ ಸಚಿವ ಶಾಖೆಯ ಕಾರ್ಯದರ್ಶಿ ಎನ್. ವಿ. ಶೆಣೈ ವರದಿಗಾರರಿಗೆ ವಿವರಿಸಿದರು.

ಕೆಲವರು ಯಾವುದೇ ವಸ್ತುಗಳನ್ನು ಹಾಕದೆ ಹಾಗೆಯೇ ಟೆಲಿಫೋನ್ ಬಳಸುವ ತಂತ್ರ ಅನುಸರಿಸುತ್ತಿರುವುದೂ ಗಮನಕ್ಕೆ ಬಂದಿದೆ ಎಂದು ಅವರು ಹೇಳಿದರು.

• **ಸರಳ ರೀತಿಯಲ್ಲಿ ಸಂಜಯ್ ವಿವಾಹ**

ನವದೆಹಲಿ, ಸೆ. 22– ಇಂದಿರಾ ಗಾಂಧಿಯವರು ತಮ್ಮ ಕಿರಿಯ ಮಗ ಸಂಜಯ್ ಗಾಂಧಿ ಅವರ ವಿವಾಹವನ್ನು ಸರಳ ರೀತಿಯಲ್ಲಿ ನಡೆಸಲು ಸೂಚಿಸಿರುವುದಾಗಿ ತಿಳಿದುಬಂದಿದೆ.

ಈ ತಿಂಗಳ 29ರಂದು ಈ ವಿವಾಹ ನಡೆಯುವ ನಿರೀಕ್ಷೆಯಿದೆ.

ತಮ್ಮ ಮಗನ ಮದುವೆಗೆ ಸಹಾಯ ಮಾಡಲು ಮುಂದೆ ಬಂದ ಹಿತೈಷಿ ಮಿತ್ರರ ಸಹಾಯವನ್ನು ಮರ್ಯಾದೆಯಿಂದ ಅವರು ತಳ್ಳಿಹಾಕಿದ್ದಾರೆ.

ಆಡಂಬರ, ಅಬ್ಬರದ ಅವಶ್ಯಕತೆ ಇಲ್ಲವೆಂದು ಅವರು ಹೇಳಿದ್ದಾರೆ.

ಸಂಜಯ್ ಗಾಂಧಿಯವರು ದೆಹಲಿಯ ಹುಡುಗಿ ಮೇನಕಾ ಆನಂದ್ ಅವರನ್ನು ವಿವಾಹವಾಗಲಿದ್ದಾರೆ.

ತಾರತಮ್ಯ, ಅಸ್ಪೃಶ್ಯತೆಯು ಸರ್ವೇಶ್ವರವಾದದ ಮೇಲೆ ಕಪ್ಪುಚುಕ್ಕೆಯಂತೆ ಕಾಣುತ್ತವೆ

ದ್ವೇಷದ ಹೊರೆ ಬಲು ಭಾರ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಮಹಾತ್ಮ ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹಾದೇವ ದೇಸಾಯಿ ಅವರು ಕವಿ ರವೀಂದ್ರನಾಥ ಟ್ಯಾಗೋರ್ ಅವರಿಗೆ 1936ರಲ್ಲಿ ಹೀಗೆ ಬರೆದಿದ್ದರು: ‘ಪೂಜನೀಯ ಗುರುದೇವ, ಹಿಂದೂ ಧರ್ಮವನ್ನು ತೊರೆದೂ ಹಿಂದೂ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಇರುವ ಒಂದೇ ಮಾರ್ಗವೆಂದರೆ ಸಿಖ್ ಧರ್ಮವನ್ನು ಅಪ್ಪಿಕೊಳ್ಳುವುದು ಎಂಬುದನ್ನು ಹೇಳಲು, ಹರಿಜನರು ಸಿಖ್ ಧರ್ಮಕ್ಕೆ ಮತಾಂತರ ಹೊಂದುವುದನ್ನು ಸಮರ್ಥಿಸಲು ಹಲವರು ನಿಮ್ಮ ಅಭಿಪ್ರಾಯವನ್ನು ಉಲ್ಲೇಖಿಸುತ್ತಿದ್ದಾರೆ. ಇಂಥದ್ದಕ್ಕೆ ನೀವು ಒಪ್ಪಿಗೆ ನೀಡಿದ್ದೀರಿ ಎಂಬುದನ್ನು ನಂಬಲು ಬಾಪು ಅವರಿಗೆ ಆಗುತ್ತಿಲ್ಲ... ನಿಮ್ಮ ಅಭಿಪ್ರಾಯವನ್ನು ತಿಳಿಸಬಹುದೇ?’

ಇದಕ್ಕೆ ಕವಿಯು ತರ್ಕಬದ್ಧವಾದ, ದೀರ್ಘವಾದ ಉತ್ತರ ನೀಡಿದರು. ಅದನ್ನು ಚುಟುಕಾಗಿ ಹೀಗೆ ಉಲ್ಲೇಖಿಸಬಹುದು: ‘ಪ್ರಿಯ ಮಹಾದೇವ... ನಾನು ಅವರಿಗೆ ಧಾರ್ಮಿಕ ನಂಬಿಕೆಯನ್ನು ಬದಲಾಯಿಸಲು ಸಲಹೆ ನೀಡಿಲ್ಲ. ಆದರೆ, ನಮಗೆಲ್ಲ ತಿಳಿದಿರುವ ಕಾರಣಕ್ಕೆ ಅವರು ಇಂತಹ ತೀವ್ರವಾದ ಹೆಜ್ಜೆ ಇರಿಸಲು ಆಲೋಚಿಸಿದ್ದಲ್ಲಿ, ಸಿಖ್ ಧರ್ಮದ ಬಗ್ಗೆ ಸದಭಿಪ್ರಾಯ ನೀಡಿದ್ದೇನೆ. ಇದೇ ಅಭಿಪ್ರಾಯವನ್ನು ನಾನು ಬೌದ್ಧ ಧರ್ಮದ ಬಗ್ಗೆಯೂ ಹೊಂದಿದ್ದೇನೆ. ನಿತ್ಯದ ಬಳಕೆಯಲ್ಲಿ, ಹಿಂದೂ ಧರ್ಮವು ಒಂದು ಜೀವನ ಪದ್ಧತಿ ಮಾತ್ರ. ಅದರ ತಾತ್ವಿಕ ಹಾಗೂ ಸಾಂಸ್ಕೃತಿಕ ನೆಲೆಯು ಅದೆಷ್ಟೇ ಮಹಾನ್ ಆಗಿರಲಿ, ಆ ಧರ್ಮದ ಹೆಸರಿನಲ್ಲಿ ಬಹುಕಾಲದಿಂದ ಮಾಡಿಕೊಂಡು ಬಂದಿರುವ ಸಾಮಾಜಿಕ ಅನ್ಯಾಯಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅದಷ್ಟೇ ಸಾಕಾಗುವುದಿಲ್ಲ. ನಮ್ಮ ಧರ್ಮವು ಸಮಾಜವನ್ನು ಹಲವು ಶ್ರೇಣೀಕೃತ ಗುಂಪುಗಳನ್ನಾಗಿ ವಿಭಜಿಸುತ್ತದೆ. ತಳದಲ್ಲಿ ಇರುವವರಿಗೆ ಸಾಮಾಜಿಕ ನ್ಯಾಯವನ್ನು ನಿರಾಕರಿಸಿರುವುದಷ್ಟೇ ಅಲ್ಲದೆ, ತಾವು ಮನುಷ್ಯನಿಗಿಂತ ಕಡೆ ಎಂಬ ಭಾವನೆ ಅವರಲ್ಲಿ ಮೂಡುವಂತೆ ನಿರಂತರವಾಗಿ ಮಾಡಲಾಗುತ್ತಿದೆ...’

ಅಮೆರಿಕದಲ್ಲಿ 1861ರಲ್ಲಿ ದಕ್ಷಿಣದ ಕೆಲವು ರಾಜ್ಯಗಳು ಗುಲಾಮಗಿರಿಯನ್ನು ಉಳಿಸಿಕೊಳ್ಳಲು ನಿರ್ಧರಿಸಿದಾಗ, ಅಲ್ಲಿ ರಕ್ತಸಿಕ್ತವಾದ ಜನಾಂಗೀಯ ಯುದ್ಧ ಆರಂಭವಾಯಿತು. ಅದು ಅಮೆರಿಕವನ್ನು ವಿಭಜನೆಯ ಹಂತಕ್ಕೆ ತಂದಿತು. ಈ ಯುದ್ಧವು ನಾಲ್ಕು ವರ್ಷ ನಡೆಯಿತು, ಲಕ್ಷಾಂತರ ಮಂದಿ ಪ್ರಾಣ ಕಳೆದುಕೊಂಡರು. ಆದರೆ, ದಕ್ಷಿಣದ ಸೇನೆಗೆ ಸೋಲಾಯಿತು, ಗುಲಾಮಗಿರಿಯನ್ನು ಕೊನೆಗೊಳಿಸಲಾಯಿತು. ಲಿಂಕನ್ ಅವರ ದೃಢನಿಶ್ಚಯ ಹಾಗೂ ಧೈರ್ಯವು ಅಮೆರಿಕ ಹೋಳಾಗುವುದನ್ನು ತಪ್ಪಿಸಿತು. ಅವರು ಆಗ ಆಡಿದ್ದ ಮಾತುಗಳು ಇಂದಿಗೂ ಅನುರಣಿಸುತ್ತವೆ. ‘ಎಲ್ಲ ಮನುಷ್ಯರೂ ಸಮಾನರು ಎಂದು ನಾನು ನಂಬಿದ್ದೇನೆ. ದೇಶವು ಅರ್ಧ ಗುಲಾಮಗಿರಿಯಲ್ಲಿ, ಇನ್ನರ್ಧ ಸ್ವತಂತ್ರವಾಗಿ ಇರಲಾರದು. ನಾನು ಗುಲಾಮನಾಗಲಾರೆ, ಹಾಗಾಗಿ ನಾನು ಒಡೆಯನೂ ಆಗಲಾರೆ. ಇದು ಪ್ರಜಾತಂತ್ರದ ಬಗ್ಗೆ ನನ್ನ ಆಲೋಚನೆಯನ್ನು ಹೇಳುತ್ತದೆ...’ ಎಂಬುವು ಅವರ ಮಾತುಗಳಾಗಿದ್ದವು.

ನಮ್ಮ ದೇಶವು ಇಂದು ದ್ವೇಷದ ಕಾರಣಕ್ಕೆ ಒಡೆದು ಹೋಗಿದೆ. ಧರ್ಮ, ಜಾತಿ ಮತ್ತು ವರ್ಗದ ಕಾರಣಕ್ಕೆ ಒಡೆದಿರುವ ದೇಶವು ಇಂದಲ್ಲ ನಾಳೆ ತೀವ್ರತರವಾದ ಅದರ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ನಮ್ಮಲ್ಲಿ ಬಹುಕಾಲದಿಂದ ಆಚರಣೆಯಲ್ಲಿರುವ ತಾರತಮ್ಯ ಹಾಗೂ ಅಸ್ಪೃಶ್ಯತೆಯು ನಾವು ಪ್ರತಿಪಾದಿಸುವ ಸರ್ವೇಶ್ವರವಾದದ ಮೇಲೆಯೇ ಒಂದು ಕಪ್ಪುಚುಕ್ಕೆಯಂತೆ ಕಾಣುತ್ತದೆ. ಅಷ್ಟೇ ಅಲ್ಲ, ಅವು ನಮ್ಮ ಪವಿತ್ರ ಉಪನಿಷತ್ತುಗಳಿಗೂ ವಿರುದ್ಧವಾಗಿವೆ. ಗಂಗೆಯ ಅಷ್ಟೂ ಪವಿತ್ರ ನೀರನ್ನು ಬಳಸಿಯೂ ನಾವು ನಮ್ಮ ಪಾಪವನ್ನು ತೊಳೆದುಕೊಳ್ಳಲು ಆಗುವುದಿಲ್ಲ. ದಲಿತರ ಮೇಲಿನ ದೌರ್ಜನ್ಯದ ಸುದ್ದಿ ಇಲ್ಲದ ಒಂದು ದಿನವೂ ಇಲ್ಲ.

ಎರಡು ಪ್ರಸಂಗಗಳನ್ನು ನಾನು ಇಲ್ಲಿ ಉಲ್ಲೇಖಿಸುವೆ. ನಾನು ಸೇನೆಯಿಂದ ನಿವೃತ್ತಿ ಪಡೆದ ನಂತರ ಕೃಷಿಯಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿದೆ. ನನ್ನ ಕುಟುಂಬದ ಜಮೀನು ಹೇಮಾವತಿ ಅಣೆಕಟ್ಟೆಯ ನೀರಿನಲ್ಲಿ ಮುಳುಗಡೆ ಆಗಿದ್ದಕ್ಕೆ ಪರಿಹಾರದ ರೂಪದಲ್ಲಿ ಹಾಸನದ ಮೂಲೆಯೊಂದರಲ್ಲಿ ಕೆಲವು ಎಕರೆ ಜಮೀನು ನೀಡಲಾಗಿತ್ತು. ನಾನು ಸೇನೆಯ ಸೆಕೆಂಡ್ ಹ್ಯಾಂಡ್ ಟೆಂಟ್, ಅಡುಗೆ ಪಾತ್ರೆಗಳು, ಕೆಲವು ಕೃಷಿ ಉಪಕರಣಗಳನ್ನು ತೆಗೆದುಕೊಂಡು, ಪರಿಶಿಷ್ಟ ಸಮುದಾಯದ ಒಬ್ಬ ಯುವಕ, ಬಡಗಿಗಳು ಹಾಗೂ ಕಾರ್ಮಿಕರ ಜೊತೆ 1979ರ ಒಂದು ದಿನ ಆ ಜಮೀನಿಗೆ ತೆರಳಿದೆ. ಅಲ್ಲಿ ಕ್ಯಾಂಪ್ ಹಾಕುವ ಉದ್ದೇಶ ನನ್ನದಾಗಿತ್ತು.

ಟೆಂಟ್ ಹಾಕಲು ನಾವು ಎಲ್ಲ ವಸ್ತುಗಳನ್ನು ತಲೆಯ ಮೇಲೆ ಹೊತ್ತುಕೊಂಡು ಒಂದು ಕಿ.ಮೀ. ನಡೆದೆವು. ಸೂರ್ಯ ಕಂತುವ ಹೊತ್ತಿಗೆ ಅಲ್ಲಿ ತಲುಪಿದೆವು. ನಾವು ಯಾರೂ ಮಧ್ಯಾಹ್ನದ ಊಟ ಮಾಡಿರಲಿಲ್ಲ. ಪಕ್ಕದ ತೊರೆಯಲ್ಲಿ ಸ್ನಾನ ಮುಗಿಸಿದೆವು. ಒಂದಿಷ್ಟು ಕಟ್ಟಿಗೆ ಒಗ್ಗೂಡಿಸುವಂತೆ, ಅಡುಗೆ ಸಿದ್ಧಪಡಿಸುವಂತೆ ನಾನು ಪರಿಶಿಷ್ಟ ಸಮುದಾಯದ ಯುವಕನಿಗೆ ಹೇಳಿದೆ. ನಾನು ಬಾಳೆಎಲೆ ಹಾಕಿಕೊಂಡು, ಊಟಕ್ಕೆ ಕಾಯುತ್ತ ಕುಳಿತೆ. ಸೇನೆಯಲ್ಲಿನ ದಿನಗಳ ಮಾದರಿಯಲ್ಲೇ, ಎಲ್ಲರಿಗೂ ಊಟಕ್ಕೆ ಬರುವಂತೆ ಹೇಳಿದೆ. ಅಡುಗೆ ಸಿದ್ಧಪಡಿಸಿದ್ದು ದಲಿತನಾದ ಕಾರಣ ತಾವು ಊಟ ಮಾಡುವುದಿಲ್ಲ, ನಾನು ಮನೆಯಿಂದ ತಂದ ಊಟವನ್ನು ತಮಗೆ ಬಡಿಸಬೇಕು ಎಂದು ಆಗ ಒಬ್ಬರು ನನ್ನ ಕಿವಿಯಲ್ಲಿ ಉಸುರಿದರು. ನನಗೆ ಅರೆಕ್ಷಣ ನಂಬಲಾಗಲಿಲ್ಲ. ಊಟ ಶುರುಮಾಡಿದ ನಾನು, ಮರುದಿನ ಬೇಗನೆ ಏಳಬೇಕಿರುವ ಕಾರಣ ಎಲ್ಲರೂ ಊಟ ಮಾಡಬೇಕು ಎಂದು ಹೇಳಿದೆ.



ಅವರು ಒಬ್ಬರನ್ನೊಬ್ಬರು ನೋಡಿಕೊಂಡರು. ಅವರಲ್ಲಿನ ಹಸಿವು ಪೂರ್ವಗ್ರಹವನ್ನು ನುಂಗಿಹಾಕಿತು. ಆ ಜಾಗದಲ್ಲಿ ಬೇರೆ ಆಹಾರ ಸಿಗುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಂಡು ಅವರು ಊಟ ಮಾಡಿದರು. ಸರ್ವಜ್ಞ ಹೇಳಿದ ‘ಅನ್ನ ದೇವರ ಮುಂದೆ, ಇನ್ನು ದೇವರು ಉಂಟೆ ಅನ್ನವಿರುವನಕ ಪ್ರಾಣವು – ಜಗದೊಳಗನ್ನವೇ ದೈವ’ ಎಂಬ ಮಾತನ್ನು ನಾನು ಆಗ ನೆನಪು ಮಾಡಿಕೊಂಡೆ. ನಮ್ಮ ಗುಂಪಿನಲ್ಲಿ ಲಿಂಗಾಯತ, ಗೌಡ, ಕುರುಬ, ವಿಶ್ವಕರ್ಮ ಮತ್ತು ಬ್ರಾಹ್ಮಣ ಜಾತಿಯವರಿದ್ದರು. ಸಂಪ್ರದಾಯವಾದಿ ಬ್ರಾಹ್ಮಣರು ಮಾತ್ರವೇ ಅಲ್ಲದೆ, ದಲಿತರು ಮುಟ್ಟಿದ್ದನ್ನು ಇತರ ಜಾತಿಗಳವರೂ ಸೇವಿಸುವುದಿಲ್ಲ ಎಂಬುದನ್ನು ನಾನು ಅರ್ಥ ಮಾಡಿಕೊಂಡೆ. ಮುಸ್ಲಿಮರು, ಕ್ರೈಸ್ತರು, ಸಿಖ್ಖರು ಅಥವಾ ಬೌದ್ಧರಲ್ಲಿ ದಲಿತರು ಭ್ರಾತೃತ್ವ ಕಾಣುವುದು ಏಕೆ ಎಂಬುದು ನನಗೆ ಅರ್ಥವಾಗಿತ್ತು. ಈ ಯಾವ ಧರ್ಮಗಳಲ್ಲಿಯೂ ಅಮಾನವೀಯವಾದ ಅಸ್ಪೃಶ್ಯತೆ ಇಲ್ಲ. ನಾವು ನಮ್ಮ ದೇವಸ್ಥಾನಗಳ ಬಾಗಿಲನ್ನು ದಲಿತರಿಗೆ ಮುಚ್ಚಿರುವಾಗ, ಅವರು ಬೇರೆ ಧರ್ಮಗಳನ್ನು ಅಪ್ಪಿಕೊಂಡಾಗ ಅದನ್ನು ಆಶ್ಚರ್ಯದಿಂದ ಕಾಣಬೇಕೇ?

ಕೆಲವು ವರ್ಷಗಳ ನಂತರ ನಾನು ರೇಷ್ಮೆ ಬೆಳೆಗಾರನಾಗಿ ಒಂದು ದಿನ ರಾಮನಗರ ರೇಷ್ಮೆ ಮಾರುಕಟ್ಟೆಗೆ ಹೋಗಿದ್ದೆ. ಬೆಳಿಗ್ಗೆ 6 ಗಂಟೆಗೆ ಅಲ್ಲಿಗೆ ಹೋದಾಗ, ಮಾರುಕಟ್ಟೆ ಎಂದಿನಂತೆ ಗಿಜಿಗುಡುತ್ತಿರಲಿಲ್ಲ. ಅದು ಪ್ರೇತಕಳೆ ಹೊದ್ದಿತ್ತು. ಹಿಂದೂ–ಮುಸ್ಲಿಮರ ನಡುವೆ ಘರ್ಷಣೆ ಉಂಟಾಗಿ, ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ, ರೀಲರ್‌ಗಳು ಮಾರುಕಟ್ಟೆಗೆ ಬರುತ್ತಿಲ್ಲ ಎಂದು ನನಗೆ ಯಾರೋ ತಿಳಿಸಿದರು. ನನ್ನಂತೆಯೇ ರಾಜ್ಯದ ಹಲವೆಡೆಗಳಿಂದ ಬಂದಿದ್ದ ರೈತರು, ರೇಷ್ಮೆಗೂಡು ಮಾರಲಾಗದೆ ನಷ್ಟ ಅನುಭವಿಸುವ ಆತಂಕಕ್ಕೆ ಒಳಗಾಗಿದ್ದರು.

ರೇಷ್ಮೆ ಬೆಳೆಯುವ ಹಿಂದೂ ರೈತರಿಗೆ, ರೇಷ್ಮೆಗೂಡು ಖರೀದಿಸುವ ರೀಲರ್‌ಗಳು ದೇವರಿದ್ದಂತೆ. ರೀಲರ್‌ಗಳು ಮುಸ್ಲಿಮರು. ಈ ರೀಲರ್‌ಗಳಿಗೆ, ನೂಲು ಖರೀದಿಸುವವರು ದೇವರಿದ್ದಂತೆ. ನೇಕಾರರಿಗೆ, ಅವರ ಬಟ್ಟೆಯನ್ನು ಖರೀದಿಸುವ ಸಗಟು ವರ್ತಕರು ದೇವರು. ಸಗಟು ವರ್ತಕರಲ್ಲಿ ಮಾರ್ವಾಡಿಗಳು, ಗುಜರಾತಿಗಳು ಹೆಚ್ಚಿದ್ದಾರೆ. ಎಲ್ಲರಿಗೂ, ಕೊನೆಯಲ್ಲಿ, ಗ್ರಾಹಕರು ಪರಮದೈವ. ಅವರು ಎಲ್ಲ ಜಾತಿಗಳ ಜನರು. ನಮ್ಮ ಸಮಾಜವೆಂಬುದು ಕಾಂಚೀಪುರಂ ಅಥವಾ ಬನಾರಸಿ ಸೀರೆಯಲ್ಲಿನ ನೇಯ್ಗೆಯಂತೆಯೇ ತೀರಾ ಸಂಕೀರ್ಣ. ಇಲ್ಲಿ ಎಲ್ಲರೂ ಪರಸ್ಪರ ಅವಲಂಬಿತರು.

ನಮ್ಮನ್ನು ನಾವು ಜಾತಿ, ವರ್ಗ, ವರ್ಣದ ಮಸೂರದ ಮೂಲಕ ಕಾಣುವುದು ಅದೆಂತಹ ಮೂರ್ಖತನ... ಮತ ಬ್ಯಾಂಕ್ ಮೇಲೆ ಕಣ್ಣಿಟ್ಟು, ಕಾಂಗ್ರೆಸ್ ಹಾಗೂ ಪ್ರಾದೇಶಿಕ ಪಕ್ಷಗಳು ಮುಸ್ಲಿಮರನ್ನು ಓಲೈಸಿದ್ದು ಬಹುಸಂಖ್ಯಾತರ ಪ್ರತಿರೋಧಕ್ಕೆ ಕಾರಣವಾಯಿತು. ಈ ಅವಕಾಶವನ್ನು ಆರ್‌ಎಸ್‌ಎಸ್ ಮಾರ್ಗದರ್ಶನದಲ್ಲಿ ಬಿಜೆಪಿ ಬಳಸಿಕೊಂಡಿತು. ಮಾರ್ಟಿನ್ ಲೂಥರ್ ಕಿಂಗ್ ಒಮ್ಮೆ ‘ದ್ವೇಷದ ಹೊರೆಯನ್ನು ತಾಳಿಕೊಳ್ಳಲು ಆಗುವುದಿಲ್ಲ’ ಎಂದು ಹೇಳಿದ್ದ. ‘ಒಂದು ದೇಶ, ಒಗ್ಗಟ್ಟಿನ ಜನ’ ಎಂದು ನಮ್ಮನ್ನು ನಾವು ಕಾಣಲು ಆಗದಿದ್ದರೆ, ನಮಗೆ ಭವಿಷ್ಯ ಇದೆಯೇ?

ಚುರುಮುರಿ



ಶ್ರೀಸಾಮಾನ್ಯರೇ ವಾಸಿ!

• ಸುಮಂಗಲಾ

‘ಎಲ್ಲಾ ದೇವರಲ್ಲಿ ಅತಿ ಹೆಚ್ಚು ಶ್ರೀಮಂತ ಯಾರು ಹೇಳು?’ ಬೆಕ್ಕಣ್ಣ ರಸಪ್ರಶ್ನೆಯೊಂದನ್ನು ನನ್ನತ್ತ ಎಸೆಯಿತು.

‘ಸ್ವರ್ಗದ ಕುಬೇರನನ್ನೂ ನಿವಾಳಿಸೋ ಹಂಗೆ ತಿರುಪತಿ ತಿಮ್ಮಪ್ಪನೇ ಹೆಚ್ಚು ಶ್ರೀಮಂತ ಅಂತ ಚಿಕ್ಕಮಕ್ಕಳಿಗೂ ಗೊತ್ತೈತಿ ಬಿಡಲೇ’ ಎಂದೆ.

‘2023-24ರ ಸಾಲಿನಲ್ಲಿ ತಿಮ್ಮಪ್ಪನ ಬ್ಯಾಂಕ್ ಠೇವಣಿ ರೆಕಾರ್ಡ್ ಬ್ರೇಕ್ ಅಂತೆ! ಬ್ಯಾಂಕಿನಾಗೆ ಹೋದ ವರ್ಷ 1,161 ಕೋಟಿ ರೂಪಾಯಿ ಎಫ್.ಡಿ. ಮಡಗಿದಾನಂತೆ’.

‘ಅಷ್ಟೇ ಅಲ್ಲ, ಇಷ್ಟು ವರ್ಷ ಬ್ಯಾಂಕಿನಾಗೆ ಎಫ್.ಡಿ. ಇಟ್ಟದ್ದು ಎಲ್ಲಾ ಸೇರಿದರೆ 13,287 ಕೋಟಿ ರೂಪಾಯಿ ಅಂತೆ’ ಎಂದೆ ನಾನು.

‘ನಿಮ್ಮಂಥ ಶ್ರೀಸಾಮಾನ್ಯ ಹೆಣ್ಣುಮಕ್ಕಳ ಹತ್ರ ಹತ್ತು ಗ್ರಾಂ ಚಿನ್ನ ಇರತೈತೋ ಇಲ್ಲೋ... ತಿಮ್ಮಪ್ಪನ ಹತ್ರ ಒಟ್ಟು 11,329.67 ಕೆ.ಜಿ. ಚಿನ್ನ ಐತಂತೆ! ಪ್ರತಿ ತಿಂಗಳೂ ಹುಂಡಿಗೆ ಬಂದು ಬೀಳೋ ರೊಕ್ಕನೇ ನೂರು ಕೋಟಿಗೂ ಹೆಚ್ಚಂತೆ’ ಬೆಕ್ಕಣ್ಣ ತಿಮ್ಮಪ್ಪನ ಸಂಪತ್ತನ್ನು ವರ್ಣಿಸಿತು.

‘ಎಷ್ಟು ರೊಕ್ಕ, ಎಷ್ಟ್ ಬಂಗಾರ ಇದ್ದರೇನು ಬಂತು... ಶುದ್ಧ ತುಪ್ಪದ ಲಡ್ಡು ಪ್ರಸಾದಕ್ಕೂ ತತ್ವಾರವಾಯಿತಲ್ಲ, ಛೆ’ ನಾನು ಲೊಚಗುಟ್ಟಿದೆ.

‘ಪಾಪದ ತಿಮ್ಮಪ್ಪ! ಇಷ್ಟಕೊಂದು ರೊಕ್ಕ, ಬಂಗಾರ ಎಲ್ಲ ಐತಿ. ಕಲಬೆರಕಿ ಇಲ್ಲದ ಛಲೋ ತುಪ್ಪ ಖರೀದಿ ಮಾಡ್ರಪ್ಪ ಅಂತ ತಿರುಪತಿ ದೇವಸ್ವ ಮಂಡಳಿಯವರಿಗೆ ಕರಾರು ಮಾಡೂದು ಬಿಟ್ಟು ಸುಮ್ನೆ ಕುಂತಾನ. ದೇವರಿಗೇ ಹಿಂಗೆ ಕಲಬೆರಕೆ ತುಪ್ಪ ಕೊಟ್ಟರೋ ಪೂರೈಕೆದಾರರು ಹೊರಗೆ ಇನ್ನೆಷ್ಟು ಕಲಬೆರಕೆ ವ್ಯಾಪಾರ ಮಾಡ್ತಿರಬೌದು... ಮಹಾಪಾಪಿಗಳು’ ಎಂದು ಬೆಕ್ಕಣ್ಣ ಶಪಿಸಿತು.

‘ತಿಮ್ಮಪ್ಪನ ಹುಂಡಿಗೆ ತಪ್ಪುಕಾಣಿಕೆ ಹಾಕಿ, ಕಲಬೆರಕೆ ತುಪ್ಪದ ಪಾಪ ಪರಿಹಾರ ಮಾಡಿಕೊಳ್ತಾರೆ ಬಿಡು’ ಎಂದೆ.

‘ತಿಮ್ಮಪ್ಪನಿಗಿಂತ ನೀವು ಶ್ರೀಸಾಮಾನ್ಯರೇ ವಾಸಿ. ರೊಕ್ಕ ಇದ್ದರೆ ನಂದಿನಿ ತುಪ್ಪ ತರತೀರಿ ಅಥವಾ ಸಂತಿವಳಗೆ ಬೆಣ್ಣೆ ತಂದು ನೀವೇ ಕಾಯಿಸಿ, ಘಮಘಮ ತುಪ್ಪ ತಿಂತೀರಿ’ ಎಂದು ಬೆಕ್ಕಣ್ಣ ಮೊದಲ ಬಾರಿಗೆ ಶ್ರೀಸಾಮಾನ್ಯರನ್ನು ಮೆಚ್ಚಿಕೊಂಡಿತು!

ಸಂಗತ

ಚೀಟಿಯೇ ಇಲ್ಲದ ಘಾತುಕ ‘ಔಷಧ’

ಕೃಷಿಕರಿಗೆಂದು ‘ಔಷಧ’ಗಳ ಹೆಸರಿನಲ್ಲಿ ಸಿಗುವ ನಾನಾ ಬಗೆಯ ವಿಷಗಳು ರೈತ ಮತ್ತು ಕೃಷಿ ಕಾರ್ಮಿಕರ ಸಮುದಾಯಕ್ಕೆ ಅಪಾಯಕಾರಿಯಾಗಿವೆ

• ನಾಗೇಶ ಹೆಗಡೆ

ಡಾಕ್ಟರ್‌ಗಳು ಬರೆದುಕೊಡುವ ಔಷಧ ಚೀಟಿಗಳು ಕನ್ನಡದಲ್ಲಿ ಇರಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಹೇಳಿದ್ದಕ್ಕೆ ಒಮ್ಮತ ಮೂಡುತ್ತಿಲ್ಲ. ಆ ವಿಷಯವನ್ನು ಪಕ್ಕಕ್ಕಿಡೋಣ. ಚೀಟಿಗಳೇ ಇಲ್ಲದ ಇನ್ನೊಂದು ಬಗೆಯ ಅಪಾಯಕಾರಿ ‘ಔಷಧ’ಗಳು ಗೊತ್ತೆ? ಕೃಷಿಕರಿಗೆಂದು ಬೀಜ, ರಸಗೊಬ್ಬರ, ಸಾಧನ ಸಲಕರಣೆಗಳ ಜೊತೆ ‘ಔಷಧ’ಗಳ ಹೆಸರಿನಲ್ಲಿ ಅಂಗಡಿಗಳಲ್ಲಿ ಸಿಗುವ ನಾನಾ ಬಗೆಯ ವಿಷಗಳು ರೈತ ಮತ್ತು ಕೃಷಿ ಕಾರ್ಮಿಕರ ಸಮುದಾಯಕ್ಕೆ ವ್ಯಾಪಕ ಅಪಾಯಗಳನ್ನು ತಂದೊಡ್ಡುತ್ತಿವೆ. ಅಲ್ಲಿ ಕನ್ನಡದ ಹೇಳ ಹೆಸರೂ ಇರುವುದಿಲ್ಲ. ಅವುಗಳನ್ನು ಖರೀದಿಸಲು ಯಾವ ತಜ್ಞರ ಚೀಟಿಯೂ ಬೇಕಾಗಿಲ್ಲ.

ಕೀಟನಾಶಕ, ಕಳೆನಾಶಕ, ಶಿಲೀಂಧ್ರನಾಶಕ ಪಾಷಾಣಗಳ ಕತೆ ನಮಗೆಲ್ಲ ಗೊತ್ತೇ ಇದೆ. ಭೋಪಾಲ್ ಅನಿಲ ದುರಂತ, ಕಾಸರಗೋಡು- ಪಟ್ರಮೆಗಳ ಎಂಡೊಸಲ್ಫಾನ್‌ಕರಾಳಮುಖಗಳುಜಗಜ್ಜಾಹೀರಾಗಿವೆ. ಅವೇನೋ ಸೀಮಿತ ಕ್ಷೇತ್ರದಲ್ಲಿ ಘಟಿಸಿದ್ದರಿಂದ ಭಾರಿ ಸುದ್ದಿಯಾಗಿ ಸ್ಫೋಟಗೊಂಡವು. ಆದರೆ ಅಂಗಡಿಗಳಿಂದ ದಿನವೂ ಒಂದರ್ಧ ಕಿಲೊಗ್ರಾಮ್, ಲೀಟರ್‌ಗಳ ಲೆಕ್ಕದಲ್ಲಿ ಅವು ರೈತರ ಮನೆ ಸೇರಿ, ಅಲ್ಲಿಂದ ಹೊಲಕ್ಕೆ ಹೋಗಿ ಸಣ್ಣಸಣ್ಣ ಪ್ರಮಾಣದಲ್ಲಿ ಬಳಕೆಗೆ ಬಂದು ಶ್ರಮಿಕರನ್ನು ದಾರುಣ ಸಂಕಷ್ಟಗಳಿಗೆ ನೂಕುತ್ತಿವೆ. ಈ ವಿಷಗಳ ಮಾರಾಟವೇನೋ ಎಲ್ಲ ಕಡೆ, ಎಲ್ಲ ಋತುಗಳಲ್ಲಿ ಭರ್ಜರಿ ನಡೆಯುತ್ತಲೇ ಇದೆ. ಆದರೆ ಆ ಅಪಾಯದ ಬಗ್ಗೆ ರೈತರನ್ನು ಎಚ್ಚರಿಸುವ ಕರಪತ್ರಗಳಾಗಲೀ ಕಿರುಫಲಕಗಳಾಗಲೀ ಇಂಗ್ಲಿಷ್‌ನಲ್ಲಂತೂ ಇರುವುದಿಲ್ಲ. ಕನ್ನಡದಲ್ಲಿ ಅವುಗಳ ಹೇಳ ಹೆಸರಿಲ್ಲ.

ಹಿಂದಿನ ವಾರವಷ್ಟೇ ತೆಲಂಗಾಣದ ರೈತರ ಆರೋಗ್ಯ ಕುರಿತ ಒಂದು ಆಘಾತಕಾರಿ ಅಂಶ ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ, ರಾಷ್ಟ್ರೀಯ ಪೋಷಕಾಂಶ ಸಂಸ್ಥೆ ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯ ಜಂಟಿಯಾಗಿ ಅಲ್ಲಿನ ರೈತರ ಆರೋಗ್ಯ ಸಮೀಕ್ಷೆ ನಡೆಸಿದವು. ಹೊಲ-ಗದ್ದೆ-ತೋಟಗಳಲ್ಲಿ ಕೆಲಸ ಮಾಡುತ್ತಿರುವ 341 ಶ್ರಮಿಕರ ರಕ್ತದ ತಪಾಸಣೆ ನಡೆಸಲಾಯಿತು. ಅವರ ರಕ್ತದಲ್ಲಿ ಒಟ್ಟು 28 ಬಗೆಯ ಕೃಷಿ ವಿಷಗಳು ಪತ್ತೆಯಾದವು. ಅವುಗಳಲ್ಲಿ 11 ಬಗೆಯ ವಿಷಗಳು ವಿಶ್ವ ಸ್ವಾಸ್ಥ್ಯ ಸಂಸ್ಥೆಯೇ (ಡಬ್ಲ್ಯುಎಚ್‌ಒ) ‘ಘೋರ ಅಪಾಯಕಾರಿ’ ಎಂದು ವರ್ಗೀಕರಿಸಿ ಇಟ್ಟವಾಗಿದ್ದವು. ಇವುಗಳನ್ನೆಲ್ಲ ಹೊಲಗಳಿಗೆ ಸಿಂಪಡಿಸುತ್ತಿದ್ದವರು ಆಸ್ತಮಾ, ಗೂರಲು ಕೆಮ್ಮು, ಚರ್ಮರೋಗ, ಕೆಲವರು ಕ್ಯಾನ್ಸರ್, ಮರೆಗುಳಿತನ ಮತ್ತು ಅನೇಕ ಬಗೆಯ ನರಸಂಬಂಧಿ ಕಾಯಿಲೆಗಳಿಂದ ನರಳುತ್ತಿದ್ದಾರೆ.

ಕರ್ನಾಟಕದಲ್ಲಿ ಇಂಥ ವೈದ್ಯಕೀಯ ಸಮೀಕ್ಷೆ ನಡೆದಂತಿಲ್ಲ. ನಡೆದರೂ ಕನ್ನಡ ಕೃಷಿಕರನ್ನಂತೂ ಅದು ತಲುಪಿಲ್ಲ. ಆದರೆ ನಮಗೆ ಕೃಷಿವಿಷಗಳ ಕರಾಳ ಕತೆಗಳು ಗೊತ್ತಿವೆ. ಪಂಜಾಬಿನ ಭಟಿಂಡಾದಿಂದ ರಾಜಸ್ಥಾನದ ಬಿಕಾನೇರ್ ಆಸ್ಪತ್ರೆಗೆ ಓಡಾಡುವ ರೈಲಿಗೆ ‘ಕ್ಯಾನ್ಸರ್ ಟ್ರೇನ್’ ಎಂತಲೇ ಹೆಸರು ಬಂದಿದೆ. ಚಾಮರಾಜನಗರ ಜಿಲ್ಲೆಯ ಒಂದು ದೇವಸ್ಥಾನದ ಪ್ರಸಾದದಲ್ಲಿ ಯಾರೋ ‘ಮೊನೊಕ್ರೊಟೊಫಾಸ್’ ಎಂಬ ಕೃಷಿವಿಷವನ್ನು ಬೆರೆಸಿದ್ದರಿಂದ 16 ಭಕ್ತರು ಪ್ರಾಣ ಬಿಟ್ಟಿದ್ದರು. ಹತ್ತಿ ಮತ್ತು ಸೆಣಬಿನಂಥ ಖಾದ್ಯೇತರ ಬೆಳೆಗಳಿಗೆ ಮಾತ್ರವೇ ಸಿಂಪಡಿಸಬೇಕಿದ್ದ ಈ ವಿಷವಸ್ತು ಆ ಜಿಲ್ಲೆಯಲ್ಲಿ ಹೇಗೆ ಹಾಸುಹೊಕ್ಕಾಗಿ ಬಳಕೆಯಾಗುತ್ತಿದೆ ಎಂಬುದನ್ನು ಯಾರೂ ತನಿಖೆ ಮಾಡಿದಂತಿಲ್ಲ.

ಅಂಥ ಘೋರ ವಿಷಗಳ ವ್ಯಾಪಕ ಬಳಕೆಯ ಬಗ್ಗೆ ಕೃಷಿ ಅಥವಾ ಆರೋಗ್ಯ ಇಲಾಖೆ ಕ್ಯಾರೇ ಅನ್ನದಿದ್ದರೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತುರ್ತು ಗಮನ ಹರಿಸಬೇಕಿದೆ. ಏಕೆಂದರೆ ಯಾವ ವಿಷದ ಡಬ್ಬಿಯ ಮೇಲೂ ಕನ್ನಡದ ಹೇಳ ಹೆಸರಿಲ್ಲ. ಚಿಕ್ಕ ಡಬ್ಬಿಗಳ ಮೇಲೆ ಯಾವ ಭಾಷೆಯಲ್ಲಿ ಬರೆದರೂ ಭೂತಗನ್ನಡಿ ಇಲ್ಲದೆ ಓದಲೂ ಸಾಧ್ಯವಿಲ್ಲ ಬಿಡಿ. ಕಡೇ ಪಕ್ಷ ಒಂದು ಲೀಟರ್ ಅಥವಾ ಕಿಲೊಗ್ರಾಮ್ ಡಬ್ಬಿ ಅಥವಾ ಪ್ಯಾಕೆಟ್ ಮೇಲೆ ಕಡ್ಡಾಯವಾಗಿ ಕನ್ನಡದಲ್ಲಿ ಎಚ್ಚರಿಕೆಯ ಸೂಚನೆ ಇರಬೇಕು ಎಂದು ಪ್ರಾಧಿಕಾರ ಸೂಚಿಸಬಹುದು. ಆದರೆ



ವಿಷ ತಯಾರಕರೆಲ್ಲ ಬಹುರಾಷ್ಟ್ರೀಯ ಕಂಪನಿಗಳ ಮುಷ್ಟಿಯಲ್ಲಿದ್ದಾರೆ. ಇಂಥ ಎಚ್ಚರಿಕೆ ಜಾರಿಗೆ ಬರದಂತೆ ತಡೆಹಿಡಿಯುವ ತಂತ್ರಸಿದ್ಧಿ ಅವರಿಗಿದೆ. ಮೇಲಾಗಿ ಬಹಳಷ್ಟು ವಿಷಗಳನ್ನು ಬೇನಾಮಿ ತಯಾರಕರು ಶೆಡ್‌ಗಳಲ್ಲಿ ಮಿಶ್ರಣ ಮಾಡಿ ಅಂಗಡಿಗಳಿಗೆ ರಿಯಾಯಿತಿ ದರದಲ್ಲಿ ತಲುಪಿಸುತ್ತಾರೆ. ಅವರು ಕನ್ನಡದಲ್ಲಿ ಲೇಬಲ್ ಹಚ್ಚುತ್ತಾರೊ ಇಲ್ಲವೊ ಎಂಬುದನ್ನು ಆಗಾಗ ಪರೀಕ್ಷಿಸುವಷ್ಟು ಸಿಬ್ಬಂದಿಯೂ ಪ್ರಾಧಿಕಾರದ ಬಳಿ ಇರಲಿಕ್ಕಿಲ್ಲ.

ಪ್ರಾಧಿಕಾರ ಒಂದು ಎಚ್ಚರಿಕೆಯ ಫಲಕವನ್ನು ಪ್ರತಿ ಕೃಷಿವಿಷ ಮಾರಾಟದ ಮಳಿಗೆಯಲ್ಲಿ ಕಡ್ಡಾಯವಾಗಿ ಹಾಕಿಸಬಹುದು. ‘ಎಚ್ಚರಿಕೆ! ಇಲ್ಲಿ ಮಾರಾಟವಾಗುವ ಅತ್ಯಲ್ಪ ವಿಷವೂ ನಾನಾ ಕಾಯಿಲೆಗಳಿಗೆ ಕಾರಣವಾಗುತ್ತದೆ. ಜೀವಕ್ಕೂ ಅಪಾಯ ತರಬಹುದು. ಆ ಕುರಿತ ಹೆಚ್ಚಿನ ಮಾಹಿತಿ ಅಥವಾ ಕಿರುಪುಸ್ತಕ ಈ ಅಂಗಡಿಯಲ್ಲಿ ಉಚಿತವಾಗಿ ಸಿಗುತ್ತದೆ- ಕೇಳಿ ಪಡೆಯಿರಿ’.

ಸರಳ ಭಾಷೆಯ ಅಂಥ ಕನ್ನಡ ಫಲಕ ಮತ್ತು ಕರಪತ್ರಗಳನ್ನು ಎಲ್ಲ ಕೃಷಿ ಅಂಗಡಿಗಳಿಗೆ ಪ್ರಾಧಿಕಾರವೇ ಪೂರೈಕೆ ಮಾಡಬಹುದು.

ವಾಚಕರ ವಾಣಿ

ಖದೀಮರಿಗೆ ‘ವರ’ಪ್ರಸಾದ

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳಲ್ಲಿ ನಂದಿನಿ ತುಪ್ಪವನ್ನು ಮಾತ್ರ ಬಳಸಿ ಪ್ರಸಾದಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಮುಜರಾಯಿ ಇಲಾಖೆ ಸುತ್ತೋಲೆ ಹೊರಡಿಸಿರುವುದು ಸ್ವಾಗತಾರ್ಹ. ರಾಜ್ಯದ ಪ್ರಮುಖ ದೇವಸ್ಥಾನವೊಂದಕ್ಕೆ ಇತ್ತೀಚೆಗೆ ಹೋಗಿದ್ದಾಗ, ಪ್ರಸಾದವೆಂದು ಅಲ್ಲಿನ ಕೌಂಟರ್‌ನಲ್ಲಿ ಲಾಡು ಖರೀದಿಸಿ ತಂದಿದ್ದೆ. ಆದರೆ ಮನೆಗೆ ಬಂದು ಅದನ್ನು ನೋಡಿದಾಗ, ಲಾಡು ಬದಲಿಗೆ ಅದು ಬರೀ ಕಡ್ಲೆಹಿಟ್ಟಿನ ಉಂಡೆಯಂತೆ ಇತ್ತು. ತಯಾರಿಸಿ ಎಷ್ಟು ದಿನಗಳಾಗಿದ್ದವೋ? ಗುಂಡುಕಲ್ಲಿನಂತೆ ಇದ್ದ ಅದನ್ನು ಚಾಕು ಬಳಸಿ ಕತ್ತರಿಸಬೇಕಾದದ್ದು ಲಾಡುವಿನ ಗುಣಮಟ್ಟಕ್ಕೆ ಸಾಕ್ಷಿಯಂತಿತ್ತು. ₹25ರ ಲಾಡು ಪೊಟ್ಟಣದ ಮೇಲೆ ಲಾಡುವಿನ ದರವಾಗಲಿ, ತಯಾರಿಸಿದ ದಿನಾಂಕವಾಗಲಿ ಇರಲಿಲ್ಲ. ಇನ್ನು ಅದು ಎಷ್ಟು ದಿನಗಳವರೆಗೆ ಸೇವಿಸಲು ಯೋಗ್ಯ ಎನ್ನುವ ಮಾಹಿತಿ ಕೂಡ ಇರಲಿಲ್ಲ. ಆಹಾರ ಮಾನದಂಡಗಳಿಗೆ ಅನುಗುಣವಾಗಿ ಇಂತಹ ಮಾಹಿತಿಗಳನ್ನೆಲ್ಲ ನೀಡಬೇಕಾದುದು ಕಡ್ಡಾಯ. ಆದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಇವೆಲ್ಲ ಗೊತ್ತೇ ಇಲ್ಲ ಎನಿಸುತ್ತದೆ! ಇನ್ನು ಲಾಡು ಸರಬರಾಜು ಮಾಡಿ ಮಾರಾಟ ಮಾಡಲು ಕರೆಯುವ ಟೆಂಡರ್ ಪ್ರಕ್ರಿಯೆಯಲ್ಲಿನ ಅವ್ಯವಹಾರವು ಕಳಪೆ ಗುಣಮಟ್ಟಕ್ಕೆ ಕಾರಣ. ನಮ್ಮ ದೈವಭಕ್ತರು ಅದು ಹೇಗಿದ್ದರೂ ‘ದೇವರ ಪ್ರಸಾದ’ ಎಂದು ಭಾವಿಸಿ ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಪಡೆದಿರುವುದರಿಂದ, ಯಾರೂ ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಅದು ಇಂತಹ ಖದೀಮರಿಗೆ ‘ವರಪ್ರಸಾದ’ ಆಗಿದೆ.

ಬಿ.ಎಂ.ಭ್ರಮರಾಂಭ, ಮೈಸೂರು

ಅದೇ ಚಾಳಿ?!

ಮೊನ್ನೆ, ಇದ್ದಕ್ಕಿದ್ದಂತೆ
ಪರಸ್ಪರ ಕಾದಾಡಿದವಂತೆ
ಅರಮನೆಯ ಅಂಗಳದಲ್ಲಿ
ದಸರಾ ಆನೆಗಳಾದ
ಧನಂಜಯ, ಕಂಜನ್,
ಪ್ರಾಣಿಪ್ರಿಯರಲ್ಲಿ ಸುಳಿದಿದೆ ಪ್ರಶ್ನೆ,
ಅರೆ, ಸೌಮ್ಯವಾಗಿ ತಾಲೀಮು
ನಡೆಸುತ್ತಿದ್ದ ಇವಕ್ಕೂ ಬಂತೇ
ಬಿಳಿಯಾನೆಗಳ ಚಾಳಿ?!

ಮ.ಗು.ಬಸವಣ್ಣ, ಮೈಸೂರು

ಕೈದಿಗಳ ‘ನಿಯಂತ್ರಣ’ದಲ್ಲಿ ಜೈಲು ಆಡಳಿತ

ಕೊಲೆ ಆರೋಪಿಯಾಗಿರುವ ನಟ ದರ್ಶನ್ ಅವರಿಗೆ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಶೇಷ ಆತಿಥ್ಯ ಕಲ್ಪಿಸಿದ್ದ ಆರೋಪಕ್ಕೆ ಸಂಬಂಧಿಸಿದ ತನಿಖೆ ಚುರುಕುಗೊಂಡಿರುವಾಗಲೇ, ಜೈಲಿನೊಳಗೆ ಮೊಬೈಲ್ ಫೋನ್‌ಗಳ ಅಂಗಡಿಯನ್ನೇ ತೆರೆದಿದ್ದ ವಿಚಾರಣಾಧೀನ ಕೈದಿಯೊಬ್ಬನನ್ನು ಈ ಪ್ರಕರಣದಲ್ಲಿ ಪೊಲೀಸರು ವಶಕ್ಕೆ ಪಡೆದರೆಂದು ವರದಿಯಾಗಿದೆ. ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಶಶಿಕಲಾ ನಟರಾಜನ್ ಅವರಿಗೆ, ಹಣ ಪಡೆದು ಜೈಲಿನಲ್ಲಿ ವಿಶೇಷ ಸೌಲಭ್ಯಗಳನ್ನು ಒದಗಿಸಿದ್ದ ಬಗ್ಗೆ ಕೆಲವು ವರ್ಷಗಳ ಹಿಂದೆ ಕಾರಾಗೃಹ ಇಲಾಖೆಯ ಅಂದಿನ ಡಿಐಜಿಯೇ ದನಿ ಎತ್ತಿದ್ದರು. ಈ ಹಳೆಯ ಹಗರಣಗಳ ವಿರುದ್ಧ ಆಗಲೇ ಕಟ್ಟುನಿಟ್ಟಿನ ಕ್ರಮ ಜರುಗಿಸಿದ್ದಿದ್ದರೆ ಇಂತಹವು ಮರುಕಳಿಸುತ್ತಿರಲಿಲ್ಲ. ಇತರೆಡೆಯ ಜೈಲುಗಳಲ್ಲಿಯೂ ಇಂತಹುದೇ ‘ವ್ಯವಸ್ಥೆ’ ಇರಬಹುದು. ಇದನ್ನೆಲ್ಲಾ ಗಮನಿಸಿದರೆ, ಕೆಲ ಜೈಲು ಸಿಬ್ಬಂದಿಯ ನೆರವಿನಿಂದ ಕಾರಾಗೃಹ ಇಲಾಖೆಯ ಆಡಳಿತವನ್ನು ಜೈಲುವಾಸಿಗಳೇ ‘ಸುವ್ಯವಸ್ಥಿತವಾಗಿ’ ನಡೆಸುತ್ತಿರುವಂತಿದೆ!

ಸ್ವಾತಿ ಪಿ. ಗೌಡ, ಬೆಂಗಳೂರು

ಒಂದು ರಾಷ್ಟ್ರ... ನಡೆಯಲಿ ಚರ್ಚೆ

‘ಒಂದು ರಾಷ್ಟ್ರ, ಒಂದು ಚುನಾವಣೆ’ ಎಂಬ ಚಿಂತನೆಯಲ್ಲಿ ಒಂದು ಎಂಬುದನ್ನು ಏಕಶಿಲೆ ಆಗಿ ಪರಿಗಣಿಸಲಾಗಿದೆಯೇ ವಿನಾ ಏಕತೆ ಎಂದಲ್ಲ. ಇದರ ಜತೆಗೆ ರಾಜಕಾರಣ ಎಂದರೆ ಮುಖ್ಯವಾಗಿ ಚುನಾವಣೆ ಗೆಲ್ಲುವುದು ಎಂಬ ನಂಬಿಕೆಯೂ ಸೇರಿಕೊಂಡಿದೆ. ಮತದಾನ ಪ್ರಕ್ರಿಯೆ ಈ ಯಂತ್ರಕ್ಕೆ ಸೂಕ್ತವಾಗಿರಬೇಕು ಎಂಬ ಆಶಯವೂ ಇಲ್ಲಿದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯು ಯು.ಕೆ. (ಪ್ರಧಾನಿ + ರಾಜ, ರಾಣಿ) ಹಾಗೂ ಅಮೆರಿಕದಲ್ಲಿ (ಅಧ್ಯಕ್ಷೀಯ) ಇರುವುದಕ್ಕಿಂತ ಭಿನ್ನ. ಸ್ಥಳೀಯ ಅಂದರೆ ಪಂಚಾಯಿತಿ, ಮುನಿಸಿಪಾಲಿಟಿ, ನಗರಸಭೆ, ಮಹಾನಗರಪಾಲಿಕೆ ಚುನಾವಣೆಗಳನ್ನು ರಾಜ್ಯ, ರಾಷ್ಟ್ರ ಮಟ್ಟದ ಚುನಾವಣೆಗಳ ಜತೆ ಹೊಂದಿಸುವ ವಿಚಾರವೇ ಅತಾರ್ಕಿಕ.

ಈಗ ಕೇಂದ್ರ ಸಚಿವ ಸಂಪುಟ ತನ್ನ ಒಪ್ಪಿಗೆಯನ್ನು ಸಂಸತ್ತಿನಲ್ಲಿ ಮಂಡಿಸಿದರೂ ಅನುಷ್ಠಾನಕ್ಕೆ ಬೇಕಾಗುವ ಸಾಂವಿಧಾನಿಕ ತಿದ್ದುಪಡಿಗಳನ್ನು ರೂಪಿಸಿ ಅನುಮೋದನೆ ಪಡೆಯುವುದು ಸುಲಭವಲ್ಲ. ಅದು ಸಾಧ್ಯವಾದರೂ ವಿಧಾನಸಭೆಗಳು ಇದನ್ನು ಅನುಮೋದಿಸುವ ಕೆಲಸಕ್ಕೆ ಸಮಯ ಹಿಡಿಯುತ್ತದೆ. ಈ ನಡುವೆ ಹಲವು ರಾಜ್ಯಗಳಲ್ಲಿ ಚುನಾವಣೆ ನಡೆದಿರುತ್ತದೆ. ಆಗ ಆ ವಿಧಾನಸಭೆಗಳ ಐದು ವರ್ಷಗಳ ಅವಧಿ ಏನಾಗಬೇಕು? ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆ ದೀರ್ಘಕಾಲದಿಂದ ನಡೆದೇ ಇಲ್ಲ. ನ್ಯಾಯಾಲಯ ಅಂತಿಮ ಗಡುವು ಕೊಟ್ಟಲ್ಲಿ ನಡೆಸಬೇಕಾಗುತ್ತದೆ. ಇದಕ್ಕಾಗಿ ಬೇರೆ ಚುನಾವಣೆಗಳ ವೇಳಾಪಟ್ಟಿಗಾಗಿ ಕಾಯಬೇಕೆ? ಒಟ್ಟಿನಲ್ಲಿ ಇದು ಗೋಜಲುಗಳ ಸರಮಾಲೆಯನ್ನೇ ಸೃಷ್ಟಿಸಬಹುದು. ಚುನಾವಣಾ ಆಯೋಗ ಈ ವಿಷಯದಲ್ಲಿ ತನ್ನ ನಿಲುವನ್ನು ವ್ಯಕ್ತಪಡಿಸಬೇಕು. ಮಾತುಕತೆಗಾಗಿ ಎಲ್ಲ ರಾಜಕೀಯ ಪಕ್ಷಗಳನ್ನು ಆಹ್ವಾನಿಸಬೇಕು. ಇದು ಒಂದು ರಾಜಕೀಯ ಪಕ್ಷ, ಒಂದು ಸರ್ಕಾರ ತೆಗೆದುಕೊಳ್ಳಬಹುದಾದ ನಿರ್ಧಾರ ಅಲ್ಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಲೋಕಾಯುಕ್ತದ ಮಾಹಿತಿ ಸರ್ಕಾರಕ್ಕೆ ತಿಳಿಯದೇ?

‘ಎಚ್.ಡಿ.ಕುಮಾರಸ್ವಾಮಿ, ಮುರುಗೇಶ ನಿರಾಣಿ, ಶಶಿಕಲಾ ಜೊಲ್ಲೆ ಮತ್ತು ಜಿ.ಜನಾರ್ದನ ರೆಡ್ಡಿ ಅವರ ವಿರುದ್ಧ ತನಿಖೆ ಮತ್ತು ವಿಚಾರಣೆಗೆ ಅನುಮತಿ ಕೋರಿ ಲೋಕಾಯುಕ್ತವು ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ ಎಂಬ ಗೋಪ್ಯ ಮಾಹಿತಿ ರಾಜ್ಯ ಸರ್ಕಾರಕ್ಕೆ ಗೊತ್ತಾಗಿದ್ದಾದರೂ ಹೇಗೆ?’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರವನ್ನು ಪ್ರಶ್ನಿಸಿರುವುದಾಗಿ ವರದಿಯಾಗಿದೆ. ಅಯ್ಯೋ ಪಾಪ, ನಮ್ಮ ರಾಜ್ಯಪಾಲರು ಅದೆಷ್ಟು ಅಮಾಯಕರು! ಯಾರೋ ಕಿಡಿಗೇಡಿಗಳು, ದೇಶದ್ರೋಹಿಗಳು, ಭಯೋತ್ಪಾದಕರು, ನಾಡದ್ರೋಹಿಗಳು, ಸಮಾಜಘಾತುಕರು ಅಷ್ಟೇ ಅಲ್ಲದೆ ರಾಜಕೀಯ ವಿರೋಧಿಗಳು ಇಡುವ ಪ್ರತಿ ಹೆಜ್ಜೆಯೂ ಸರ್ಕಾರದ ಗಮನಕ್ಕೆ ಬರುತ್ತದೆ. ಅಂತಹದ್ದರಲ್ಲಿ ಲೋಕಾಯುಕ್ತದ ಮಾಹಿತಿಗಳು ಸರ್ಕಾರಕ್ಕೆ ಗೊತ್ತಾಗುವುದಿಲ್ಲವೇ? ಅಷ್ಟಕ್ಕೂ ಈ ವಿಚಾರ ಸರ್ಕಾರಕ್ಕೆ ಅಥವಾ ಸಾರ್ವಜನಿಕರಿಗೆ ಗೊತ್ತಾದರೆ ಏನೂ ವ್ಯತ್ಯಾಸ ಆಗುವುದಿಲ್ಲ. ಪ್ರಕರಣದಲ್ಲಿ ಹುರುಳಿದೆ ಎಂದು ಕಂಡುಬಂದರೆ ತಮ್ಮ ವಿವೇಚನೆಯ ಅನುಸಾರ ಅನುಮತಿ ನೀಡಬೇಕು ಅಥವಾ ಹುರುಳಿಲ್ಲ ಎನಿಸಿದರೆ ಅನುಮತಿ ನಿರಾಕರಿಸಬೇಕು. ಅದನ್ನು ಬಿಟ್ಟು ಈ ಪ್ರಶ್ನೆ ಏಕೋ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಪ್ರಸಾದಕ್ಕೂ ಬೇಕಿದೆ ಗುಣಮಟ್ಟದ ಖಾತರಿ

ಲಾಡು ಪ್ರಸಾದ ಎಂದರೆ ತಕ್ಷಣ ನೆನಪಾಗುವುದು ತಿರುಪತಿ. ಈ ಲಾಡು ಪ್ರಸಾದ ಈಗ ಸುದ್ದಿಯಲ್ಲಿದೆ. ಆಂಧ್ರ ಪ್ರದೇಶದ ಹಿಂದಿನ ಸರ್ಕಾರದ ಅವಧಿಯಲ್ಲಿ ತಯಾರಿಸಲಾಗುತ್ತಿದ್ದ ಲಾಡುಗಳಲ್ಲಿ ಹಂದಿ ಕೊಬ್ಬು, ಮೀನಿನ ಎಣ್ಣೆ ಅಂಶಗಳು ಇದ್ದವು ಎಂಬ ಪ್ರಯೋಗಾಲಯದ ವರದಿ ದೇಶದಾದ್ಯಂತ ಚರ್ಚೆ ಹುಟ್ಟುಹಾಕಿದೆ. ದೇವಾಲಯದ ಬೀಡಾಗಿರುವ ಕರ್ನಾಟಕ ಹಾಗೂ ರಾಜ್ಯದ ಗಡಿ ಭಾಗದಲ್ಲಿರುವ ಪ್ರಮುಖ ದೇವಾಲಯಗಳು ಕೂಡ ತಮ್ಮ ವಿಶಿಷ್ಟ ಪ್ರಸಾದದಿಂದಲೇ ಗುರುತಿಸಿಕೊಂಡಿವೆ. ಎಲ್ಲ ದೇವಾಲಯಗಳಲ್ಲಿ ಪ್ರಸಾದ ತಯಾರಿಸುವಾಗ ಸ್ವಚ್ಛತೆಗೆ ಹೆಚ್ಚು ಗಮನ ನೀಡಲಾಗುತ್ತಿದ್ದರೂ, ಬಹುತೇಕ ಕಡೆಗಳಲ್ಲಿ ಪ್ರಸಾದ ಹಾಗೂ ಅದನ್ನು ತಯಾರಿಸಲು ಬಳಸುವ ವಸ್ತುಗಳ ಗುಣಮಟ್ಟವನ್ನು ವೈಜ್ಞಾನಿಕವಾಗಿ ಪರೀಕ್ಷೆಗೆ ಒಳಪಡಿಸುವ ವ್ಯವಸ್ಥೆ ಇಲ್ಲ. ರಾಜ್ಯದ ಹಾಗೂ ಗಡಿಭಾಗಗಳಲ್ಲಿರುವ ಪ್ರಮುಖ ದೇವಾಲಯಗಳಲ್ಲಿ ಭಕ್ತರಿಗೆ ನೀಡಲಾಗುವ ವಿಶೇಷ ಪ್ರಸಾದ ಮತ್ತು ಅವುಗಳನ್ನು ತಯಾರಿಸಲು ಬಳಸುವ ವಸ್ತುಗಳ ಬಗ್ಗೆ ಇಲ್ಲಿ ಮಾಹಿತಿ ನೀಡಲಾಗಿದೆ

ಮಂತ್ರಾಲಯದ ‘ಪರಿಮಳ ಪ್ರಸಾದ’

ರಾಯಚೂರು: ರಾಜ್ಯದ ಗಡಿಭಾಗ, ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಆದೋನಿ ತಾಲ್ಲೂಕಿನ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಪ್ರಸಾದವು ‘ಪರಿಮಳ ಪ್ರಸಾದ’ ಎಂದೇ ಖ್ಯಾತಿ ಪಡೆದಿದೆ. ಮಂತ್ರಾಲಯದಲ್ಲಿ ನಿತ್ಯ ಸರಾಸರಿ 8ರಿಂದ 10 ಕ್ವಿಂಟಲ್‌ಗಳಷ್ಟು ಪರಿಮಳ ಪ್ರಸಾದ ಮಾರಾಟವಾಗುತ್ತದೆ.



ಆಂಧ್ರ ಪ್ರದೇಶದ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟವಾದ ವಿಜಯ ಡೇರಿಯಿಂದ ಖರೀದಿಸಿದ ತುಪ್ಪ, ಗೋಧಿ ರವೆ, ಸಕ್ಕರೆ, ಒಣದ್ರಾಕ್ಷಿ, ಏಲಕ್ಕಿ, ಖಾದ್ಯ ಕರ್ಪೂರ, ಇತರೆ ಮಸಾಲೆ ಬಳಸಿ ಕೇಸರಿ ಅಥವಾ ಬಿಳಿ ಬಣ್ಣದ ಪರಿಮಳ ಪ್ರಸಾದ ಸಿದ್ಧಪಡಿಸಲಾಗುತ್ತಿದೆ. ಪ್ರಸಾದ ತಯಾರಿಸಲು ಶ್ರೀಮಠದ ಆವರಣದಲ್ಲಿ ಪ್ರತ್ಯೇಕ ಪಾಕಶಾಲೆ ಹಾಗೂ ಸಿಬ್ಬಂದಿ ಇದ್ದಾರೆ. ಒಂದು ಕೆ.ಜಿ. ಪರಿಮಳ ಪ್ರಸಾದ ಸಿದ್ಧಪಡಿಸಿಲು 250 ಗ್ರಾಂ ತುಪ್ಪವನ್ನು ಬಳಸಲಾಗುತ್ತಿದೆ. ₹30ಕ್ಕೆ ನಾಲ್ಕು ಗಟ್ಟಿ ಪರಿಮಳ ಪ್ರಸಾದವನ್ನು ಮಠದ ಕೌಂಟರ್‌ಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಭಕ್ತರು ದೇವಸ್ಥಾನದ ಮಳಿಗೆಯಿಂದ ಪ್ರಸಾದ ಖರೀದಿಸಬಹುದು ಅಥವಾ ಆನ್‌ಲೈನ್‌ನಲ್ಲಿ ಕೂಡ ಆರ್ಡರ್ ಮಾಡಬಹುದಾಗಿದೆ. ರಾಯರ ಆರಾಧನೆ ಸಂದರ್ಭದಲ್ಲಿ ವಿದೇಶದಲ್ಲಿರುವ ಭಕ್ತರಿಗೂ ಈ ಪ್ರಸಾದವನ್ನು ಕಳುಹಿಸಲಾಗುತ್ತದೆ.

ಮಾದಪ್ಪನ ಜನಪ್ರಿಯ ‘ಲಾಡು ಪ್ರಸಾದ’

ಚಾಮರಾಜನಗರ: ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳವಾದ ಜಿಲ್ಲೆಯ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಭಕ್ತರಿಗೆ ಲಾಡನ್ನು ಪ್ರಸಾದದ ರೂಪದಲ್ಲಿ ವಿತರಿಸಲಾಗುತ್ತದೆ. ತಿರುಪತಿ ಲಾಡಿನ ರೀತಿಯಲ್ಲಿ ಇಲ್ಲಿನ ಲಾಡು ಪ್ರಸಾದ ಕೂಡ ಭಕ್ತರ ನಡುವೆ ಜನಪ್ರಿಯ.

ಕಡಲೆಹಿಟ್ಟು, ಸಕ್ಕರೆ, ಸೂರ್ಯಕಾಂತಿ ಎಣ್ಣೆ, ದ್ರಾಕ್ಷಿ, ಗೋಡಂಬಿ, ಏಲಕ್ಕಿ, ಪಚ್ಚಕರ್ಪೂರ, ಲವಂಗ ಹಾಗೂ ‘ನಂದಿನಿ’ ತುಪ್ಪವನ್ನು ಬಳಸಿ ಲಾಡು ತಯಾರಿಸಲಾಗುತ್ತಿದೆ.

ದೇವಾಲಯವು ಹಿಂದೆ ನೇರವಾಗಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿದ್ದಾಗ ಲಾಡು ತಯಾರಿಕೆಗೆ ತುಪ್ಪ ಬಳಸುತ್ತಿರಲಿಲ್ಲ. ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಾದ ಬಳಿಕ, ಅಂದರೆ 2014ರಿಂದ, ‘ನಂದಿನಿ’ ತುಪ್ಪವನ್ನು ಬಳಕೆ ಮಾಡಲಾಗುತ್ತಿದೆ.

ಪಂಚಕಜ್ಜಾಯವೇ ಪ್ರಮುಖ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ದೇವಸ್ಥಾನಗಳಲ್ಲಿ ಪ್ರಸಾದದ ರೂಪದಲ್ಲಿ ಲಾಡು ಮತ್ತು ಪಂಚಕಜ್ಜಾಯ ನೀಡಲಾಗುತ್ತದೆ. ಬೆಲ್ಲ, ಕಾಯಿ, ಅವಲಕ್ಕಿ, ಶ್ರೀಪ್ರಸಾದವೂ ಈ ಭಾಗದ ದೇವಸ್ಥಾನಗಳಲ್ಲಿ ಹೆಸರುವಾಸಿ. ಬಹುತೇಕ ಎಲ್ಲ ದೇವಸ್ಥಾನಗಳಲ್ಲೂ ತುಪ್ಪ, ಹಾಲು ಇತರ ಉತ್ಪನ್ನಗಳನ್ನು ‘ನಂದಿನಿ’ಯಿಂದಲೇ ಖರೀದಿಸಲಾಗುತ್ತದೆ.

ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸ್ವಾಮಿ ದೇವಾಲಯದಲ್ಲಿ ಲಾಡಿನ ಜೊತೆಯಲ್ಲಿ ಬೆಲ್ಲ, ಕಾಯಿ, ಶ್ರೀಪ್ರಸಾದ ಮತ್ತು ಅವಲಕ್ಕಿ ಪ್ರಸಾದ ವಿತರಿಸಲಾಗುತ್ತದೆ. ಸಿಹಿಪದಾರ್ಥಗಳು ಹೆಚ್ಚು ಇರುವ ಶ್ರೀಪ್ರಸಾದವನ್ನು ಎಲ್ಲ ಸೇವೆಗಳಿಗೂ ನೀಡಲಾಗುತ್ತದೆ. ವಿಶೇಷ ಸೇವೆ ಮಾಡಿದವರಿಗೆ ಅವಲಕ್ಕಿ ಪ್ರಸಾದ ಸಿಗುತ್ತದೆ.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪಂಚಕಜ್ಜಾಯ ಮತ್ತು ಲಾಡು ಪ್ರಮುಖ ಪ್ರಸಾದ. ₹100ಕ್ಕೆ ಎರಡು ಲಾಡು ಮತ್ತು ತೀರ್ಥ ಸಿಗುತ್ತದೆ. ಹೆಚ್ಚುವರಿ ಲಾಡು ಬೇಕಾದರೆ ಒಂದಕ್ಕೆ ₹20ರಂತೆ ಪಾವತಿ ಮಾಡಬೇಕು.



ಆನೆಗುಡ್ಡೆ ವಿನಾಯಕನಿಗೆ ಕಡುಬು ಅಚ್ಚುಮೆಚ್ಚು

ಉಡುಪಿ: ಜಿಲ್ಲೆಯ ಕುಂಭಾಶಿಯ ಆನೆಗುಡ್ಡೆ ವಿನಾಯಕ ದೇವಾಲಯದಲ್ಲಿ ಕಡುಬು (ಮೂಡೆ) ಪ್ರಸಾದ ತುಂಬಾ ವಿಶೇಷ. ಕಡುಬು ಸೇವೆ ಮಾಡಿಸುವವರಿಗೆ ಈ ಪ್ರಸಾದವನ್ನು ನೀಡಲಾಗುತ್ತದೆ. ಭಕ್ತರು ಹರಕೆಯ ರೂಪದಲ್ಲಿ ಮುಡಿ ಅಕ್ಕಿ ಕಡುಬು ಸೇವೆಯನ್ನೂ ಮಾಡಿಸುತ್ತಾರೆ. ಏಕಾದಶಿಯಂದು ಬಿಟ್ಟು ಪ್ರತಿದಿನ ಈ ಪ್ರಸಾದ ಸಿಗುತ್ತದೆ. ಕೇದಗೆ ಗಿಡದ ಎಲೆಯಲ್ಲಿ (ಮುಂಡೇವು ಎಲೆ) ಕೊಟ್ಟೆಯನ್ನು ತಯಾರಿಸಲಾಗುತ್ತದೆ. ಆ ಕೊಟ್ಟೆಯಲ್ಲಿ ಅಕ್ಕಿ ಮತ್ತು ಉದ್ದನ್ನು ಮಿಶ್ರಣ ಮಾಡಿ ತಯಾರಿಸಿದ ಹಿಟ್ಟನ್ನು ತುಂಬಿ ಬೇಯಿಸಿ ಕಡುಬು ಪ್ರಸಾದ ತಯಾರಿಸಲಾಗುತ್ತದೆ. ಕಡುಬನ್ನು ಗಣಪತಿ ದೇವರಿಗೆ ಸಮರ್ಪಣೆ ಮಾಡಿದ ನಂತರ ಭಕ್ತರಿಗೆ ಪ್ರಸಾದದ ರೂಪದಲ್ಲಿ ಹಂಚಲಾಗುತ್ತದೆ.

ಶೃಂಗೇರಿಯಲ್ಲಿ ಕಾಯಿಪಾಕ

ಚಿಕ್ಕಮಗಳೂರು: ಶೃಂಗೇರಿ ಶಾರದಾ ಪೀಠದಲ್ಲಿ ಭಕ್ತರಿಗೆ ಕಾಯಿಪಾಕ, ಪಂಚಕಜ್ಜಾಯ, ಕಲ್ಲು ಸಕ್ಕರೆಯನ್ನು ಪ್ರಸಾದವಾಗಿ ನೀಡಲಾಗುತ್ತಿದೆ. ಪ್ರಸಾದ ದೇವಸ್ಥಾನದಲ್ಲೇ ತಯಾರಾಗುತ್ತದೆ. ಕಾಯಿಪಾಕ (ಕೊಬ್ಬರಿ ಮಿಠಾಯಿ) ಇಲ್ಲಿನ ಪ್ರಸಾದದ ವಿಶೇಷ. ಗಣಪತಿ ಪೂಜೆಯನ್ನು ವಿಶೇಷವಾಗಿ ಮಾಡಿಸಿದವರಿಗೆ ಮೊಸರನ್ನ ಮತ್ತು ವಡೆಯನ್ನು ಪ್ರಸಾದವಾಗಿ ನೀಡಲಾಗುತ್ತದೆ.

ನಡೆಯುತ್ತಿಲ್ಲ ವೈಜ್ಞಾನಿಕ ಪರೀಕ್ಷೆ

ಎಲ್ಲ ದೇವಾಲಯಗಳಲ್ಲಿ ಪ್ರಸಾದ ತಯಾರಿಕೆಯಲ್ಲಿ ಸ್ವಚ್ಛತೆ ಕಾಪಾಡಲು ಒತ್ತು ನೀಡಲಾಗುತ್ತಿದ್ದರೂ ಪ್ರಸಾದ ಸಿದ್ಧಪಡಿಸಲು ಬಳಸುವ ವಸ್ತುಗಳು ಮತ್ತು ತಯಾರಿಕೆ ನಂತರ ಪ್ರಸಾದದ ಗುಣಮಟ್ಟವನ್ನು ವೈಜ್ಞಾನಿಕವಾಗಿ ಪರೀಕ್ಷಿಸುವ ವ್ಯವಸ್ಥೆ ಇಲ್ಲ.

ದೇವಾಲಯದ ಆಡಳಿತ ಮಂಡಳಿ ಹಾಗೂ ಪ್ರಸಾದ ತಯಾರಿ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ, ವಸ್ತುಗಳ ಗುಣಮಟ್ಟವನ್ನು ಮೇಲ್ನೋಟಕ್ಕೆ ನೋಡಿ ಖಾತರಿಪಡಿಸಿಕೊಂಡು ಮುಂದುವರಿಯುತ್ತಾರೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ಕೂಡ ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸುತ್ತಾರೆ.

ಕೆಲವು ದೇವಾಲಯಗಳಲ್ಲಿ, ಅದರಲ್ಲೂ ಪ್ರಮುಖವಾಗಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇಗುಲಗಳಲ್ಲಿ, ಪ್ರಸಾದ ತಯಾರಿಕೆಯ/ ಮಾರಾಟದ ಜವಾಬ್ದಾರಿಯನ್ನು ಟೆಂಡರ್ ಮೂಲಕ ನೀಡುವ ವ್ಯವಸ್ಥೆ ಇದೆ. ಪ್ರಾಧಿಕಾರದ ವ್ಯಾಪ್ತಿಗೆ ಬರುವ ದೇವಾಲಯಗಳು ಮತ್ತು ಖಾಸಗಿ ಒಡೆತನದ ದೇವಾಲಯಗಳು ಪ್ರಸಾದ ತಯಾರಿಸಲು ಪ್ರತ್ಯೇಕ ವಿಭಾಗವನ್ನೇ ಹೊಂದಿವೆ.

‘ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ನಿರ್ದಿಷ್ಟ ಅವಧಿಯಲ್ಲಿ ಗುಣಮಟ್ಟ ಪರಿಶೀಲನೆ ಮಾಡುತ್ತಾರೆ. ಅದರ ನಡುವೆ ನಮ್ಮ ತಂಡವೂ ಜಾಗೃತವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿ ಸಂದೇಹ ಬಂದರೆ ನಿರ್ದಾಕ್ಷಿಣ್ಯವಾಗಿ ವಸ್ತುಗಳನ್ನು ವಾಪಸ್ ಕಳುಹಿಸುತ್ತೇವೆ’ ಎಂದು ಹೇಳುತ್ತಾರೆ ಧರ್ಮಸ್ಥಳ ಮಂಜುನಾಥೇಶ್ವರ ದೇವಾಲಯದ ಕಚೇರಿ ಸಿಬ್ಬಂದಿ.

ಇತರ ದೇವಾಲಯಗಳಲ್ಲಿ...

- ಹೊರನಾಡು ದೇವಸ್ಥಾನದಲ್ಲಿ ಪ್ರಸಾದವಾಗಿ ಏನನ್ನೂ ನೀಡುವುದಿಲ್ಲ. ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಇದ್ದು, ಅನ್ನಪೂರ್ಣೇಶ್ವರಿ ದೇಗುಲದಲ್ಲಿ ಅನ್ನವೇ ಮಹಾಪ್ರಸಾದ ಎಂಬುದು ಭಕ್ತರ ನಂಬಿಕೆ
- ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ನಿರ್ದಿಷ್ಟ ಪ್ರಸಾದ ನೀಡುವ ಕ್ರಮ ಇಲ್ಲ. ಭಕ್ತರು ನೀಡುವ ಸೇವೆಯ ಆಧಾರದ ಮೇಲೆ ತಿನ್ನುವ ತ್ರಿಮಧುರ ಹಾಗೂ ಮಹಾಪ್ರಸಾದಗಳನ್ನು ನೀಡಲಾಗುತ್ತದೆ. ಪ್ರಸಾದ ರೂಪದ ಲಾಡು ಲಭ್ಯವಿದ್ದು, ಭಕ್ತರು ಕೌಂಟರ್‌ನಲ್ಲಿ ಹಣ ನೀಡಿ ಖರೀದಿಸಬಹುದು
- ಉಡುಪಿ ಕೃಷ್ಣ ಮಠದಲ್ಲಿ ಪ್ರತ್ಯೇಕವಾದ ಪ್ರಸಾದವಿಲ್ಲ. ಕರಾವಳಿಯ ಎಲ್ಲ ದೇವಾಲಯಗಳಲ್ಲಿ ನೀಡುವಂತೆ ಪಂಚಕಜ್ಜಾಯ ಮತ್ತು ಲಾಡು ಪ್ರಸಾದವನ್ನು ನೀಡಲಾಗುತ್ತದೆ. ಹೆಸರುಕಾಳು, ಬೆಲ್ಲ, ಕೊಬ್ಬರಿ ಬಳಸಿ ಪಂಚಕಜ್ಜಾಯ ತಯಾರಿಸಲಾಗುತ್ತದೆ
- ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ದೇವಸ್ಥಾನದಲ್ಲಿ ಪ್ರಸಾದ ರೂಪದಲ್ಲಿ ಲಾಡು ನೀಡಲಾಗುತ್ತದೆ. ಪ್ರತಿ ವರ್ಷ ಟೆಂಡರ್ ಕರೆದು ಮಾರಾಟಗಾರರನ್ನು ಗುರುತಿಸಲಾಗುತ್ತದೆ. ಕಡ್ಲೆಹಿಟ್ಟು, ಸಕ್ಕರೆ, ನಂದಿನಿ ತುಪ್ಪ, ದ್ರಾಕ್ಷಿ, ಗೋಡಂಬಿ, ಬಾದಾಮಿ, ಸಕ್ಕರೆ, ಏಲಕ್ಕಿ, ಡಬಲ್ ರಿಫೈನ್ಡ್ ಆಯಿಲ್, ಕಡಲೆಕಾಯಿ ಎಣ್ಣೆ ಬಳಸಿ ಲಾಡು ತಯಾರಿಸಲಾಗುತ್ತದೆ
- ದಕ್ಷಿಣ ಕನ್ನಡದ ಗಡಿ ಭಾಗ ಕೇರಳದ ಕಾಸರಗೋಡು ಜಿಲ್ಲೆಯ ಮಧೂರಿನ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನ ‘ಅಪ್ಪ’ ಪ್ರಸಾದಕ್ಕೆ ಹೆಸರುವಾಸಿ. ಅಕ್ಕಿ, ತುಪ್ಪ, ಬೆಲ್ಲ, ತೆಂಗಿನಕಾಯಿ ಇದಕ್ಕೆ ಬಳಸುವ ಪ್ರಮುಖ ವಸ್ತುಗಳು
- ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಾರಿಕಾಂಬಾ ದೇವಾಲಯದಲ್ಲಿ ನೈವೇದ್ಯ ಪ್ರಸಾದ ನೀಡಲಾಗುತ್ತಿದ್ದು, ರವೆ, ಕೊಬ್ಬರಿ ತುರಿ, ಜಾಯಿಕಾಯಿ, ಸಕ್ಕರೆ ಬಳಸಿ ಇದನ್ನು ಸಿದ್ಧಪಡಿಸಲಾಗುತ್ತದೆ
- ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದಲ್ಲಿ ಹತ್ತು ವರ್ಷಗಳಿಂದ ಈಚೆಗೆ ಲಾಡು ಪ್ರಸಾದ ನೀಡುವ ಸಂಪ್ರದಾಯ ಆರಂಭಗೊಂಡಿದೆ. ಕಡಲೆ ಹಿಟ್ಟು, ಸಕ್ಕರೆ, ಕೊಬ್ಬರಿ ಎಣ್ಣೆ ಬಳಸಿ ಈ ಪ್ರಸಾದ ತಯಾರು ಮಾಡಲಾಗುತ್ತದೆ
- ಧರ್ಮಸ್ಥಳ ಬಳಿಯ ಬಯಲು ದೇವಾಲಯ ಸೌತಡ್ಕ ಮಹಾಗಣಪತಿ ಕ್ಷೇತ್ರದಲ್ಲಿ ಅವಲಕ್ಕಿ ಪಂಚಕಜ್ಜಾಯ ಪ್ರಮುಖ ಪ್ರಸಾದ. ಅವಲಕ್ಕಿ, ಬೆಲ್ಲ, ತುಪ್ಪ, ಏಲಕ್ಕಿ ಬಳಸಿ ಇದನ್ನು ತಯಾರಿಸಲಾಗುತ್ತದೆ. ‘ಅಪ್ಪ’ ಪ್ರಸಾದವೂ ಇಲ್ಲಿ ಹೆಚ್ಚುವರಿಯಾಗಿ ಸಿಗುತ್ತದೆ

ಸುರಕ್ಷತಾ ನಿಯಮ ಪಾಲನೆ

ಮೈಸೂರಿನ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಭಕ್ತರಿಗೆ ಲಾಡು ಪ್ರಸಾದ ಕೊಡಲಾಗುತ್ತಿದೆ. ಎರಡು ಲಾಡುಗಳ ಪ್ಯಾಕೆಟ್‌ಗೆ ₹30 ಇದೆ. ಆಹಾರ ಸುರಕ್ಷತಾ ನಿಯಮಗಳನ್ನು ಪಾಲಿಸಲಾಗುತ್ತಿದ್ದು, ಇಲ್ಲಿನ ದಾಸೋಹ ಭವನದಲ್ಲಿ ಬಹಳ ವರ್ಷದಿಂದಲೂ ಲಾಡು ತಯಾರಿಸಲಾಗುತ್ತಿದೆ. ಬಾಣಸಿಗರು ‘ನಂದಿನಿ’ ತುಪ್ಪ, ಬಿಟಿಎಸ್ ಭಾಗ್ಯಲಕ್ಷಿ ಕಡ್ಲೆಹಿಟ್ಟು, ಸಕ್ಕರೆ ಬಳಸುತ್ತಾರೆ. ಆಹಾರ ಸಾಮಗ್ರಿಗಳನ್ನು ಗುಣಮಟ್ಟ ಪರಿಶೀಲಿಸಿ ಟೆಂಡರ್ ಮೂಲಕ ಖರೀದಿಸಲಾಗುತ್ತಿದೆ

ರೂಪಾ, ಮೈಸೂರು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ



ಪೆರ್ಣಂಕಿಲದ ‘ಅಪ್ಪ ಪ್ರಸಾದ’

ಉಡುಪಿಯ ಪೆರ್ಣಂಕಿಲ ದೇವಾಲಯದಲ್ಲಿ ಅಪ್ಪ ಪ್ರಸಾದ ವಿಶೇಷವಾಗಿದೆ. ಅಕ್ಕಿ, ತುಪ್ಪ, ತೆಂಗಿನಕಾಯಿ, ಎಳ್ಳು, ಅರಳು, ಬಾಳೆಹಣ್ಣು ಮತ್ತು ಬೆಲ್ಲದಿಂದ ಅಪ್ಪವನ್ನು ತಯಾರಿಸಲಾಗುತ್ತದೆ. ಇದನ್ನು ಕೊಪ್ಪರಿಗೆ ಅಪ್ಪ ಎಂದು ಕರೆಯಲಾಗುತ್ತದೆ. ಭಕ್ತರು ತಮ್ಮ ಇಷ್ಟಾರ್ಥ ಈಡೇರಿದ ಬಳಿಕ ಅಪ್ಪ ಸೇವೆ ಅರ್ಪಿಸುತ್ತಾರೆ. ಈ ಸೇವೆಯು ಪ್ರತಿದಿನ ಇರುವುದಿಲ್ಲ ಸಂಕಷ್ಟಿಯ ದಿನ ಇರುತ್ತದೆ. ಯಾರಾದರೂ ಭಕ್ತರು ಕೊಪ್ಪರಿಗೆ ಅಪ್ಪ ಸೇವೆ ಅರ್ಪಿಸಿದರೆ ಅವರಿಗೆ ಈ ಪ್ರಸಾದವನ್ನು ನೀಡಲಾಗುತ್ತದೆ.

ಸಿನಿ ಬಿಟ್ಸ್



ಸಮೀಕ್ಷಾ

ಇದು ಆದಿತ್ಯ ಶಶಿಕುಮಾರ್ ರಾಶಿ!

ನಟ ಶಶಿಕುಮಾರ್ ಪುತ್ರ ಆದಿತ್ಯ ಶಶಿಕುಮಾರ್ ನಾಯಕನಾಗಿ ನಟಿಸುತ್ತಿರುವ ಮೂರನೇ ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಅನಾವರಣ ಗೊಂಡಿದೆ. ಚಿತ್ರಕ್ಕೆ ‘ರಾಶಿ’ ಎಂದು ಹೆಸರಿಡಲಾಗಿದ್ದು, ಕಿರುತೆರೆ ನಟ ಸಮೀಕ್ಷಾ ಆದಿತ್ಯಗೆ ಜೋಡಿಯಾಗಿದ್ದಾರೆ. ಧ್ರುವನ್ ಫಿಲಂಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರಕ್ಕೆ ವಿಜಯ್ ಪಾಳೇಗಾರ್ ನಿರ್ದೇಶನವಿದೆ.

‘ಇಷ್ಟು ದಿನ ಅಕ್ಷಿತ್ ಶಶಿಕುಮಾರ್ ಆಗಿದ್ದ ನಾನು, ಈಗ ಆದಿತ್ಯ ಶಶಿಕುಮಾರ್ ಎಂದು ಹೆಸರು ಬದಲಿಸಿಕೊಂಡಿದ್ದೇನೆ. ಒಂದು ಪ್ರೇಮಕಥೆಯನ್ನು ಹೊಂದಿರುವ ಚಿತ್ರ. ಜನ್ಮರಾಶಿಗೆ ಸಂಬಂಧಿಸಿದ ಕಥೆಯಲ್ಲ’ ಎಂದರು ಆದಿತ್ಯ

‘ನಿರ್ಮಾಪಕ ಅಖಿಲೇಶ್ ಅವರೇ ಈ ಚಿತ್ರದ ಕಥೆ ಬರೆದಿದ್ದಾರೆ. ನಾನು ಚಿತ್ರಕಥೆ ಬರೆದು, ಸಂಗೀತ ನಿರ್ದೇಶನದೊಂದಿಗೆ ನಿರ್ದೇಶನವನ್ನು ಮಾಡುತ್ತಿದ್ದೇನೆ. ‘ಟ್ರಿಗರ್’ ಚಿತ್ರದ ನಂತರ ನಾನು ನಿರ್ದೇಶಿಸುತ್ತಿರುವ ಎರಡನೇ ಚಿತ್ರವಿದು. ಈ ಚಿತ್ರಕ್ಕೆ ನವೀನ್ ಸೂರ್ಯ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ಮಂಜು ಮಹದೇವ್ ಹಿನ್ನೆಲೆ ಸಂಗೀತವಿದೆ. ಸದ್ಯದಲ್ಲೇ ಚಿತ್ರೀಕರಣ ಆರಂಭವಾಗಲಿದೆ’ ಎಂದು ನಿರ್ದೇಶಕ ವಿಜಯ್ ಪಾಳೇಗಾರ್ ತಿಳಿಸಿದರು. ಕರಿಸುಬ್ಬು, ಉಗ್ರಂ ರವಿ, ಹುಲಿ ಕಾರ್ತಿಕ್ ಮುಂತಾದವರು ಚಿತ್ರದಲ್ಲಿದ್ದಾರೆ.

ಕೊಲೆ ‘ಪ್ರಕರಣ ತನಿಖಾ ಹಂತದಲ್ಲಿದೆ!’



ಚಿತ್ರತಂಡ

ಒಂದು ಕೊಲೆಯ ಸುತ್ತ ನಡೆಯುವ ಕಥೆಯನ್ನು ಹೊಂದಿರುವ ‘ಪ್ರಕರಣ ತನಿಖಾ ಹಂತದಲ್ಲಿದೆ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಬಹುತೇಕ ರಂಗಭೂಮಿ ಕಲಾವಿದರೇ ಸೇರಿ ಸಿದ್ಧಗೊಳಿಸಿರುವ ಈ ಚಿತ್ರಕ್ಕೆ ಸುಂದರ್ ಎಸ್. ನಿರ್ದೇಶನವಿದೆ.

‘ಈ ತಂಡದಲ್ಲಿರುವವರೆಲ್ಲರೂ ರಂಗಭೂಮಿ ಹಿನ್ನೆಲೆಯಿಂದ ಬಂದವರೇ. ನಾಟಕಗಳ ಜೊತೆಗೇ ಸಿನಿಮಾ ಕನಸನ್ನು ಕಂಡು ನಾವೆಲ್ಲ ಕಥೆ ಮಾಡಿಕೊಂಡಿದ್ದೆವು. ಎಲ್ಲ ಒಟ್ಟಾಗಿ ಕುಳಿತು ಚರ್ಚಿಸುವಾಗ ನನ್ನ ಕಥೆ ಆಯ್ಕೆಯಾಯಿತು. ಕೊಲೆಯ, ಅಪರಾಧ ಜಗತ್ತಿನ ಕುತೂಹಲಕಾರಿ ಕಥೆ. ಚಿತ್ರೀಕರಣ ಮುಗಿದಿದ್ದು, ಅಕ್ಟೋಬರ್ 18ರಂದು ಈ ಚಿತ್ರ ಬಿಡುಗಡೆಗೊಳ್ಳಲಿದೆ’ ಎಂದು ನಿರ್ದೇಶಕರು ಮಾಹಿತಿ ನೀಡಿದರು.

ಚಿಂತನ್ ಕಂಬಣ್ಣ ಬಂಡವಾಳ ಹೂಡಿದ್ದಾರೆ. ಕರದಾಯಾಮ ಸ್ಟುಡಿಯೋಸ್ ಬ್ಯಾನರಿನಡಿಯಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿರುವ ಚಿಂತನ್ ಒಂದು ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ. ಮಹಿನ್ ಕುಬೇರ್, ಮುತ್ತುರಾಜ್ ಟಿ, ಗಗನ್ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಚಿತ್ರಕ್ಕೆ ಶಿವೋಂ ಸಂಗೀತ, ಮೋಹನ ಎಂ.ಎಸ್ ಮತ್ತು ಜಗದೀಶ್ ಛಾಯಾಚಿತ್ರಗ್ರಹಣ, ನಾನಿ ಕೃಷ್ಣ ಸಂಕಲನವಿದೆ. ಬೆಂಗಳೂರು ಮತ್ತು ಕನಕಪುರದ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಯಾರಿವನು? ಯಾರಿವನು?



ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 28

ಮನುಷ್ಯನ ಜೀವನ ಅಂದರೆ ಒಂದು ಅನ್ವೇಷಣೆ. ಒಂದು ಹುಡುಕಾಟ. ಅದು ಉತ್ತರವಿಲ್ಲದ ಪ್ರಶ್ನೆ. ಮನುಷ್ಯನ ಮುಖ್ಯ ಪ್ರಶ್ನೆ ಏನು ಅಂದರ ಸೂರ್ಯ, ಚಂದ್ರ, ಸಾವಿರ ಸಾವಿರ ಗ್ರಹಗಳು, ನಕ್ಷತ್ರಗಳು ಅವ್ಯಾಹತವಾಗಿ ತಿರುಗ್ತಾ ಇದಾವೆ. ಇವುಗಳ ನಡುವೆ ಒಂದು ದಿನವೂ ಅಪಘಾತವಾಗದಂತೆ ನೋಡಿಕೊಂಡ ಶಕ್ತಿ ಯಾವುದು? ನಾವು ಅಷ್ಟು ದೂರ ಅಂಗಡಿಗೆ ಹೋಗಿ ಬರೋದರೊಳಗೇ ನಾಲ್ಕು ಸಲ ಬಿದ್ದಿರ್ತೀವಿ. ಆದರೆ, ಸೂರ್ಯ ಚಂದ್ರರನ್ನು ಬೀಳದಂತೆ ಹಿಡಿದಿಟ್ಟ ಶಕ್ತಿ ಯಾವುದು? ಉತ್ತರ ವಿಜ್ಞಾನದ್ದೇ ಇರಬಹುದು, ಧರ್ಮದ್ದೇ ಇರಬಹುದು, ತತ್ವಜ್ಞಾನದ್ದೇ ಇರಬಹುದು. ಆದರೆ ಪ್ರಶ್ನೆ ಒಂದೇ; ಆಕಾಶದಲ್ಲಿ ಸೂರ್ಯ, ಚಂದ್ರ ನಕ್ಷತ್ರಗಳನ್ನು ತಾಳ್ಮೆಯಿಂದ ಕೆತ್ತಿದ ಶಿಲ್ಪಿ ಯಾರಿರಬಹುದು? ಆತನಿಗೆ ಎಷ್ಟು ಸಮಾಧಾನ ಇರಬಹುದು?

ಗಂಡ ಹೆಂಡತಿ ಕೋಣೆಯಲ್ಲಿ ಮಲಗಿರ್ತಾರ. ಫ್ಯಾನ್ ಹಚ್ತಾರ. ಗಂಡನ ಕಡೆ ಫ್ಯಾನ್ ಮುಖ ಮಾಡಿದರೆ ಹೆಂಡತಿಗೆ ಗಾಳಿ ಬರೋದಿಲ್ಲ. ಹೆಂಡತಿ ಕಡೆ ಮುಖ ಮಾಡಿದರೆ ಗಂಡನಿಗೆ ಗಾಳಿ ಬರೋದಿಲ್ಲ. ಜಗಳ ಆಡ್ತಾರ. ಆದರೆ ಸಮುದ್ರದ ಆಳದಲ್ಲಿ ಇರುವ ಮೀನಿನ ಮೂಗಿಗೆ ಗಾಳಿ ತಲುಪಿಸಿ ಬದುಕಿಸಿದವ ಯಾರಿರಬಹುದು? ಬಂಗಾರ ತಯಾರು ಮಾಡುವ ಫ್ಯಾಕ್ಟರಿ ಹಾಕ್ಯಾರ, ಆದರೆ, ರಕ್ತ ತಯಾರು ಮಾಡುವ ಫ್ಯಾಕ್ಟರಿ ಒಬ್ಬರಾರೂ ಹಾಕ್ಯಾರೇನು? ಅನ್ನವನ್ನು ರಕ್ತವನ್ನಾಗಿ ಮಾಡಿದವರು ಯಾರು? ಮಣ್ಣಿನಿಂದ ಸಸಿ ಬರ್ತೈತಿ. ಮಣ್ಣಿಲ್ಲದೆ ಸಸಿ ಬೆಳೆಯಲಿಕ್ಕೇ ಸಾಧ್ಯವಿಲ್ಲ. ಸಸಿ ಗಿಡ ಆಗತೈತಿ. ಹಾಗೆ ನೋಡಿದರೆ, ಗಿಡ ಕೂಡಾ ಮಣ್ಣು, ಗಿಡ ಹೂವು ಬಿಡತೈತಿ. ಹೂವು ಕೂಡಾ ಮಣ್ಣು. ಹಣ್ಣು ಬಿಡತೈತಿ. ಹಣ್ಣೂ ಮಣ್ಣು. ಆದರೆ ಮಜಾ ಏನಂದರ ಮಣ್ಣು ತಿಂದರೆ ಹಣ್ಣು ತಿಂದಂಗೆ ಆಗೋದಿಲ್ಲ. ಹಣ್ಣು ತಿಂದರೆ ಮಣ್ಣು ತಿಂದಂಗೆ ಆಗೋದಿಲ್ಲ. ಅದು ಸೃಷ್ಟಿಯ ವೈಚಿತ್ರ್ಯ. ಇದು ಯಾರ ಮಹಿಮೆ.

ನಾವು ಮೊಬೈಲ್‌ನಲ್ಲಿ ಮಾತಾಡ್ತೀವಿ. ಸ್ವಲ್ಪ ದೂರ ಹೋದರೆ ‘ಇಲ್ಲಿ ಟವರ್ ಬರೋದಿಲ್ಲ’ ಅಂತೀವಿ. ಟವರ್ ಇಲ್ಲದ ಜಾಗದಲ್ಲೂ ಹುಲ್ಲು ಬೆಳದಾವ, ಮರಗಿಡ ಅದಾವ, ಪಶುಪಕ್ಷಿಗಳಿದಾವ. ಟವರ್ ಇಲ್ಲದ ಜಾಗದಲ್ಲೂ ತನ್ನ ಪವರ್ ತೋರಿಸ್ತಾನಲ್ಲ ಅವ ಯಾರಿರಬಹುದು? ಈ ಸರ್ವಜ್ಞ, ಸರ್ವಶಕ್ತಿ, ಸರ್ವ ಕರ್ತೃ ಯಾರಿರಬಹುದು? ಆ ಸರ್ವಶಕ್ತಿಗೆ ನಾವು ಐ ಲವ್ ಯು ಅನಬೇಕು. ಸರ್ವಶಕ್ತವಾದ ಶಕ್ತಿಗೆ ಶರಣಾಗುತೀವಲ್ಲ, ಅದಕ್ಕೆ ಭಕ್ತಿ ಅಂತ ಹೆಸರು. ಅಕ್ಕಮಹಾದೇವಿ ‘ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ, ನನ್ನ ಗಂಡ ಚನ್ನಮಲ್ಲಿಕಾರ್ಜುನ’ ಅಂತಾಳೆ. ದೇವರ ಶಕ್ತಿಗೆ ಶರಣಾಗತನಾಗೋದು ಅಂದರೆ ಇದು.

ನಾನು ಅಣು, ನೀನು ಮಹತ್ ಎಂದು ಸೋಲುತ್ತೇವಲ್ಲ ಅದು ಭಕ್ತಿ. ಭಕ್ತಿ ಅಂದರೆ ಉತ್ತಮ ಭಾವನೆಗಳ ಅವ್ಯಾಹತ ಪ್ರವಾಹ. ಭಕ್ತಿ ಎಂದರೆ ಪ್ರೇಮದ ಸ್ವರೂಪ. ಪವಿತ್ರ ಪ್ರೇಮಕ್ಕೆ ಭಕ್ತಿ ಅಂತಾರೆ. ಆದರೆ, ನಮ್ಮ ಪ್ರೇಮ ಪವಿತ್ರವಾಗಿ ಉಳಿದಿಲ್ಲ. ಪ್ಲಾಸ್ಟಿಕ್ ಹೂವನ್ನು ದೇವರ ತಲೆ ಮೇಲೆ ಇಡೋದಿಲ್ಲ ಯಾಕೆ? ಯಾಕೆಂದರೆ ಅದರಲ್ಲಿ ಮಕರಂದ ಇಲ್ಲ. ಅದಕ್ಕೆ ಅದು ದೇವರ ತಲೆ ಏರಿಲ್ಲ. ಯಾರ ಹೃದಯದಲ್ಲಿ ಪ್ರೇಮ ಇಲ್ಲವೋ ಅವರು ಪ್ಲಾಸ್ಟಿಕ್ ಹೂವು ಇದ್ದಂಗೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಸೆಪ್ಟೆಂಬರ್ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣಷಷ್ಠಿ ಗಂ. 13-51 ನಕ್ಷತ್ರ: ರೋಹಿಣಿ ಗಂ. 22-08 ಯೋಗ: ಸಿದ್ಧಿ (ಆಸ್ರಿಕ್) ಗಂ. 27-10 ಕರಣ: ವಣಿಜ ಗಂ. 13-51, ಕನ್ಯಾ ಮಾಸದ 07 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 4.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-23 ಸೂರ್ಯಾಸ್ತ : 06-22
ಮುಸ್ಲಿಂ ದಿನಾಂಕ: 19 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ: 7, 3

ಮೇಷ: ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ. ಸ್ನೇಹಿತನ ಸಹಾಯದಿಂದ ಬೇರೆ ಉದ್ಯಮಕ್ಕೆ ಕೈ ಹಾಕುವ ಸಾಹಸವನ್ನು ಮಾಡಬಹುದು.

ವೃಷಭ: ಸ್ವರ್ಣ, ಲೋಹ ಹಾಗೂ ಗೃಹೋಪಕರಣಗಳ ವ್ಯವಹಾರಗಳಲ್ಲಿ ಉತ್ತಮ ಆದಾಯ ಹೊಂದಬಹುದು. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಪ್ರಶಂಸೆ ದೊರೆತು ಬಡ್ತಿ ಸಿಗುವುದು. ಕೆಲಸ ಕಾರ್ಯಗಳಲ್ಲಿ ಗಮನವಿರಲಿ.

ಮಿಥುನ: ಸಂಗೀತದ ಕಲಿಕೆಯಲ್ಲಿ ಅತೀವ ಆಸಕ್ತಿಗೆ ನಿಮ್ಮ ತಂದೆ-ತಾಯಿ-ಅವರಿಂದ ಪ್ರೋತ್ಸಾಹ ಸಿಗಲಿದೆ. ವೈದ್ಯರನ್ನು ಭೇಟಿ ಮಾಡಬೇಕಾದ ಸ್ಥಿತಿ ಎದುರಾಗಬಹುದು. ಸಂಶೋಧಕರು ಸಾಧನೆಯ ಕುರಿತು ಹೆಮ್ಮೆ ಪಡೆಯುವಿರಿ.

ಕರ್ಕಾಟಕ: ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು. ಆಫೀಸಿನ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪರಾಮರ್ಶಿಸಲೇಬೇಕಾದ ಸಮಯ ಬರಲಿದೆ.

ಸಿಂಹ: ಸಣ್ಣಪುಟ್ಟ ವಿಚಾರಗಳನ್ನೂ ಉಪೇಕ್ಷಿಸದೆ ಮನೆಯವರೊಂದಿಗೆ ಮಾತನಾಡುವಿರಿ. ಬೆಳ್ಳಿ ವಸ್ತುಗಳ ಮಾರಾಟ ಮಾಡುವವರು ಆದಾಯವನ್ನು ಗಳಿಸುವಿರಿ. ಆತಂಕವಿಲ್ಲದೆ ಕೆಲಸ ಕಾರ್ಯಗಳು ಸಾಗುವುದು.

ಕನ್ಯಾ: ಕುಟುಂಬದವರೊಡನೆ ಸಂತೋಷದಲ್ಲಿ ಇರಬೇಕೆಂಬ ನಿಮ್ಮ ಈ ದಿನದ ಆಲೋಚನೆಗೆ ಅಡ್ಡಿ ಎದುರಾಗಲಿದೆ. ದಾಖಲೆ ಪರಿಶೀಲನೆ ತೀರ್ಮಾನದಿಂದ ನಿಸ್ಸಂಶಯವಾಗಿ ಮನೋವ್ಯಾಧಿ ದೂರಾಗುತ್ತದೆ.

ತುಲಾ: ಮಗನ ಸಹಾಯದಿಂದ ಸಂಬಂಧಿಕರೊಬ್ಬರ ಕೆಲಸ ಸುಗಮವಾಗಿ ಕೈಗೂಡುವುದರಿಂದ ಮನಸ್ಸಿಗೆ ಹೆಚ್ಚಿನ ಸಂತಸವಿರುವುದು. ಚರ್ಚೆ ಹಾಗೂ ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಜಾಗರೂಕತೆ ವಹಿಸಿರಿ.

ವೃಶ್ಚಿಕ: ಯೋಗ್ಯ ವಯಸ್ಕರಿಗೆ ಆಲೋಚನೆಗೆ ಸರಿಸಮಾನಾದ ರೀತಿಯಲ್ಲಿ ವಿವಾಹ ಭಾಗ್ಯ ಒದಗಿ ಬರಲಿದೆ. ಮಗಳಿಗೆ ಅನಿರೀಕ್ಷಿತವಾಗಿ ಹೊಸ ಕೆಲಸ ಸಿಕ್ಕಿ ಸಂತೋಷವಾಗುವುದು. ಪ್ರಮುಖ ಸ್ಥಾನ ಪಡೆಯಲು ತಯಾರಿ ನಡೆಸುವಿರಿ.

ಧನು: ಉದ್ಯೋಗದ ಅನ್ವೇಷಣೆಯಲ್ಲಿರುವವರು ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಸಂಪಾದಿಸಿಕೊಳ್ಳಬಹುದು. ಸಮೀಪವರ್ತಿಗಳ ಸಹಾಯದಿಂದ ಕೆಲಸ ಪೂರ್ತಿಗೊಳಿಸುವಿರಿ. ಮೇಲಧಿಕಾರಿಗಳ ವರ್ತನೆಗೆ ಆಕ್ಷೇಪಣೆ ಸಲ್ಲದು.

ಮಕರ: ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ಅವಿಶ್ವಾಸವನ್ನು ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು. ಸಮಾರಂಭ ನಡೆಸಲು ದಿನ ಗೊತ್ತು ಮಾಡುವಿರಿ.

ಕುಂಭ: ವೈದ್ಯರು ಅದರಲ್ಲೂ ನರರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ಬೇಜವಾಬ್ದಾರಿತನದಿಂದ ಪಾಪ ಸಂಗ್ರಹಣೆಯಾಗುವುದು. ವಿಲಾಸೀ ಜೀವನದ ಶೈಲಿಯನ್ನು ಅನುಭವಿಸುವ ಆಸೆ ಈಡೇರುವುದು.


ಮೀನ: ಕೌಟುಂಬಿಕವಾಗಿ ಸಹೋದರನ ಏಳಿಗೆಯನ್ನು ಸಹಿಸುವ ಮನೋಧರ್ಮ ಬೆಳೆಸಿಕೊಳ್ಳಿರಿ. ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕು ನಿವಾರಿಸಿ-ಕೊಳ್ಳುವುದನ್ನು ಸ್ವಂತವಾಗಿ ಅಭ್ಯಾಸಿಸಿ. ವಸ್ತ್ರಾಭರಣ ಖರೀದಿ ಯೋಗವಿದೆ.

ಪದಬಂಧ 5811

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೋಸ ಅಥವಾ ವಂಚನೆ (3)
3.ಈತ ಹಿರಿಯವನು (3)
5 ಕರೆಯೋಲೆಯಲ್ಲಿನ ಆಹ್ವಾನ (2)
6.ಸೂರ್ಯನನ್ನು ಹೀಗೂ ಕರೆವರು (3)
7.ಕವನ ರಚಿಸುವವನು (2)
9.ವಲಸೆ ಹೊರಟವರು ನೆಲೆ ನಿಂತ ಪ್ರದೇಶ (4)
11.ಆಯುಧಗಳನ್ನಿಡುವ ಕಟ್ಟಡ (4)
12.ಉಲ್ಟಾ ಕಾಣುತ್ತಿರುವ ರಂಗೋಲಿ (2)
14.ಬೆಳಗಿನ ಜಾವವಿದು (3)
16.ವ್ಯಾಕರಣದಲ್ಲಿ ಆರನೆಯ ವಿಭಕ್ತಿ (2)
17.ಅನ್ನ ಮಾಡುವ ಪಾತ್ರೆ (3)
18.ಕೇಡನ್ನುಂಟುಮಾಡುವವನು (3)

ಮೇಲಿಂದ ಕೆಳಕ್ಕೆ
1.ಕುಣಿದರೆ ಹತ್ತಿರ ಬರುವ ಅಶ್ವ (3)
2. ತುಂಡು ಬಟ್ಟೆಗಳನ್ನು ಕೂಡಿಸಿ ಹೊಲಿದ ಹಚ್ಚಡ (3)
3.ದೇಶದಲ್ಲಿರುವವ ನೀಡಿದ ಒಳ್ಳೆ ಸಲಹೆ (5)
4.ಕಲಸಿ ನಾದಿದ ಹಿಟ್ಟು (3)
5.ಖಡ್ಗದಿಂದ ಮಾಡುವ ಸಾಧನೆ (5)
8.ವಿಚಾರ ವಿನಿಮಯ ಮಾಡಿಕೊಳ್ಳುವ ಸಭೆ (5)
10.ಹಿಮಾಲಯ ಪರ್ವತ ಇಲ್ಲಿದೆ (5)
13.ಹೊದಿಕೆಯನ್ನು ಹೀಗೂ ಹೇಳುವರು (3)
15.ಕುಣಿಯುತ್ತಾ ಹಾಕಿದ ಸರಗಂಟು (3)
16.ಹೆಂಡತಿ ಸೋದರಿಯ ಗಂಡ (3)



5810ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ವಸ್ತು 3.ಪರಾಜಿತ
5.ಶಯನ 6.ಕಡವರ
8.ರತ್ನಾಕರ 12.ಹಸುಗೂಸು
14.ಹರಿಕಾರ 15.ಬಾನಾಡಿ
16.ತಳಮಳ 17.ಗುಣ

ಮೇಲಿಂದ ಕೆಳಕ್ಕೆ:
1.ಪಾಶವೀವೃತ್ತಿ
2.ವನಚರ 3.ಪರಿಕರ
4.ತವರ 7.ವಪೆ
9.ಕಡಸು 10.ಬಾಲಬಡಿಕ
11.ಹುರಿ 12.ಹರತಾಳ
13.ಸುಮಬಾಣ 14.ಹರಿತ

ಸುಡೊಕು 6196

	7			2				5
3		6	5		8			
	4			7		2		6
	6				5			
9		1		8			6	2
4			2			1	3	
		2	3		7		5	
	1			5		6		3
5		3	4					1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6195 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಜಿಎಸ್‌ಟಿ ದರ ಸರಳೀಕರಣ 25ಕ್ಕೆ ಸಚಿವರ ಸಭೆ ನಿಗದಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ತೆರಿಗೆ ಪ್ರಮಾಣ ಸರಳೀಕರಣಗೊಳಿಸಲು ರಚಿಸಿರುವ ಆರು ಸಚಿವರನ್ನು ಒಳಗೊಂಡ ಸಮಿತಿ ಸಭೆಯು, ಸೆಪ್ಟೆಂಬರ್ 25ರಂದು ಗೋವಾದಲ್ಲಿ ನಡೆಯಲಿದೆ.

ಜಿಎಸ್‌ಟಿ ಅಡಿ ರಚಿಸಿರುವ ನಾಲ್ಕು ಸ್ಲ್ಯಾಬ್‌ಗಳ ಪರಿಷ್ಕರಣೆ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುತ್ತದೆ. ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಆಗಸ್ಟ್ 22ರಂದು ಸಭೆ ನಡೆಸಿದ್ದ ಸಮಿತಿಯು ಈ ಕುರಿತ ವರದಿಯನ್ನು ಸೆಪ್ಟೆಂಬರ್ 9ರಂದು ನಡೆದ ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಮಂಡಿಸಿತ್ತು.

ತೆರಿಗೆ ಪ್ರಮಾಣ ಸರಳೀಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಕೇಂದ್ರ ಮತ್ತು ರಾಜ್ಯಗಳ ತೆರಿಗೆ ಅಧಿಕಾರಿಗಳನ್ನು ಒಳಗೊಂಡಿರುವ ಸಮಿತಿಗೆ ಸಚಿವರು ಸೂಚಿಸಿದ್ದರು. ಪ್ರಸ್ತುತ ಜಿಎಸ್‌ಟಿ ಅಡಿ ಶೇ 5, ಶೇ 12, ಶೇ 18 ಹಾಗೂ ಶೇ 28ರಷ್ಟು ತೆರಿಗೆ ಸ್ಲ್ಯಾಬ್‌ಗಳಿವೆ.



ದಿನಬಳಕೆಯ ಅಗತ್ಯ ವಸ್ತುಗಳು ಕಡಿಮೆ ಸ್ಲ್ಯಾಬ್‌ನಲ್ಲಿವೆ. ಐಷಾರಾಮಿ, ತಂಬಾಕು, ಜಂಕ್ ಫುಡ್‌ಗಳನ್ನು ಅತಿಹೆಚ್ಚು ತೆರಿಗೆ ಸ್ಲ್ಯಾಬ್ ಸೇರಿಸಲಾಗಿದೆ.

ಆಗಸ್ಟ್‌ನಲ್ಲಿ ನಡೆದ ಸಭೆಯಲ್ಲಿ ಶೇ 12 ಮತ್ತು ಶೇ 18ರ ತೆರಿಗೆ ಸ್ಲ್ಯಾಬ್ ಅನ್ನು ವಿಲೀನಗೊಳಿಸುವ ಬಗ್ಗೆ ಚರ್ಚಿಸಲಾಗಿತ್ತು. ಆದರೆ, ಈ ಬಗ್ಗೆ ಯಾವುದೇ ಪ್ರಸ್ತಾವ ಸಲ್ಲಿಕೆಯಾಗಿಲ್ಲ.

ಶೇ 12ರ ಸ್ಲ್ಯಾಬ್‌ನಡಿ ಜಿಎಸ್‌ಟಿ ವರಮಾನವು ಶೇ 15.3ಕ್ಕಿಂತ ಕಡಿಮೆಯಿದೆ. ಹಾಗಾಗಿ, ಸಭೆಯಲ್ಲಿ ಇದರ ಪರಿಷ್ಕರಣೆ ಬಗ್ಗೆ ಚರ್ಚೆಯಾಗುವ ನಿರೀಕ್ಷೆಯಿದೆ. ಆದರೆ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳು ಸ್ಲ್ಯಾಬ್‌ಗಳ ಪರಿಷ್ಕರಣೆಗೆ ಒಲವು ಹೊಂದಿಲ್ಲ.

ಎಂ.ಎಫ್: ಡಿವಿಡೆಂಡ್ ಲೆಕ್ಕಾಚಾರ ಹೇಗೆ?

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.

ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ 20 ಮಾದರಿಯ ಪ್ರಮುಖ ಫಂಡ್‌ಗಳಿವೆ. ಈ ಪೈಕಿ ಈಗ ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳು ಹೆಚ್ಚು ಸುದ್ದಿಯಲ್ಲಿವೆ. ಡಿವಿಡೆಂಡ್ ಯೀಲ್ಡ್ ಫಂಡ್‌ಗಳು ಕಳೆದ ಐದು ವರ್ಷದ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇ 25ರಷ್ಟು ಗಳಿಕೆ ತಂದುಕೊಟ್ಟಿವೆ. ಮೂರು ವರ್ಷದ ಲೆಕ್ಕಾಚಾರದಲ್ಲಿ ಶೇ 21.97ರಷ್ಟು ಗಳಿಕೆ ನೀಡಿವೆ.

ಇನ್ನು ಒಂದು ವರ್ಷದ ಗಳಿಕೆ ನೋಡಿದಾಗ ಡಿವಿಡೆಂಡ್ ಯೀಲ್ಡ್ ಫಂಡ್‌ಗಳು ಶೇ 42.38ರಷ್ಟು ಲಾಭ ಕೊಟ್ಟಿವೆ. ಕಳೆದ ಐದು, ಮೂರು ಮತ್ತು ಒಂದು ವರ್ಷದ ಲೆಕ್ಕಾಚಾರದಲ್ಲಿ ನೋಡಿದಾಗ ಡಿವಿಡೆಂಡ್ ಯೀಲ್ಡ್ ಫಂಡ್‌ಗಳು ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಫಂಡ್‌ಗಳನ್ನು ಹೊರತುಪಡಿಸಿ ಇನ್ನುಳಿದ ಪ್ರಮುಖ ಮ್ಯೂಚುವಲ್ ಫಂಡ್ (ಎಂ.ಎಫ್) ಮಾದರಿಗಳನ್ನು ಹಿಂದಿಕ್ಕಿವೆ.

ವ್ಯಾಲ್ಯು ಓರಿಯಂಟೆಂಡ್, ಮಲ್ಟಿಕ್ಯಾಪ್, ಫ್ಲೆಕ್ಸಿ ಕ್ಯಾಪ್, ಲಾರ್ಜ್ ಆ್ಯಂಡ್ ಮಿಡ್ ಕ್ಯಾಪ್, ಲಾರ್ಜ್ ಕ್ಯಾಪ್, ಇಎಲ್‌ಎಸ್‌ಎಸ್ ಮಾದರಿಯ ಫಂಡ್‌ಗಳು ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳಿಗಿಂತ ಹೂಡಿಕೆದಾರರಿಗೆ ಕಡಿಮೆ ಲಾಭ ಒದಗಿಸಿವೆ. ಹಾಗಾದರೆ, ಈ ಡಿವಿಡೆಂಡ್ ಯೀಲ್ಡ್ ಫಂಡ್‌ಗಳೆಂದರೆ ಏನು? ಈ ಫಂಡ್‌ಗಳಲ್ಲಿ ಹೂಡಿಕೆದಾರರಿಗೆ ಡಿವಿಡೆಂಟ್ (ಲಾಭಾಂಶ) ಹಂಚಿಕೆಯಾಗುತ್ತಾ? ಹೂಡಿಕೆ ಮಾಡುವುದು ಹೇಗೆ? ಬನ್ನಿ ತಿಳಿಯೋಣ.

ಡಿವಿಡೆಂಡ್ ಯೀಲ್ಡ್ ಫಂಡ್ಸ್ ಅಂದರೆ ಏನು?: ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರ ಶೇ 65ರಷ್ಟು ಮೊತ್ತವನ್ನು ಕಡ್ಡಾಯವಾಗಿ ಅತಿಹೆಚ್ಚು ಡಿವಿಡೆಂಡ್ ಕೊಡುವ ಕಂಪನಿಗಳ ಮೇಲೆ ಹೂಡಿಕೆ ಮಾಡಬೇಕು. ಸದ್ಯ ಈ ಡಿವಿಡೆಂಡ್ ಯೀಲ್ಡ್ ಫಂಡ್ ವರ್ಗದಲ್ಲಿ ಎಚ್‌ಡಿಎಫ್‌ಸಿ, ಐಸಿಐಸಿಐ ಪ್ರೂಡೆನ್ಶಿಯಲ್, ಎಸ್‌ಐಬಿ, ಯುಟಿಐ, ಎಲ್‌ಐಸಿ, ಆದಿತ್ಯ ಬಿರ್ಲಾ ಸನ್ ಲೈಫ್, ಬರೋಡಾ ಬಿಎನ್‌ಬಿ ಪರಿಬಾಸ್, ಸುಂದರಂ ಮತ್ತು ಟೆಂಪಲ್ ಟನ್ ಇಂಡಿಯಾ ಈಕ್ವಿಟಿಗೆ ಸೇರಿದ ಒಟ್ಟು 10 ಫಂಡ್‌ಗಳಿವೆ.

ಈ 10 ಫಂಡ್‌ಗಳು ₹31 ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಮೊತ್ತವನ್ನು ನಿರ್ವಹಣೆ ಮಾಡುತ್ತಿವೆ. ಎಸ್‌ಐಬಿ ಡಿವಿಡೆಂಡ್ ಯೀಲ್ಡ್ ಫಂಡ್ ಅತಿದೊಡ್ಡ ಫಂಡ್ ಆಗಿದ್ದು ಹೂಡಿಕೆದಾರರ ಸುಮಾರು ₹9,500 ಕೋಟಿಯನ್ನು ನಿರ್ವಹಿಸುತ್ತಿದೆ. ಈಗ ಡಿವಿಡೆಂಡ್ ಅಂದರೆ ಏನು ಎನ್ನುವ ವಿಚಾರಕ್ಕೆ ಬರೋಣ.

ಷೇರು ಹೂಡಿಕೆ ಮಾಡಿದಾಗ ಹೂಡಿಕೆದಾರರಿಗೆ ಎರಡು ರೀತಿಯ ಗಳಿಕೆ ಸಿಗುತ್ತದೆ. ಒಂದನೆಯದ್ದು ಷೇರಿನ ಬೆಲೆ ಏರಿಕೆಯಾಗುತ್ತಾ ಸಾಗಿದಂತೆ ಅದರಿಂದ ಸಿಗುವ ಗಳಿಕೆ. ಮತ್ತೊಂದು ಡಿವಿಡೆಂಡ್. ಕಂಪನಿ ತಾನು ಗಳಿಸಿದ ಲಾಭದಲ್ಲಿ ಒಂದಷ್ಟು ಪಾಲನ್ನು ಹೂಡಿಕೆದಾರರಿಗೆ ಹಂಚಿಕೆ ಮಾಡುತ್ತದೆ. ಇದನ್ನು ಡಿವಿಡೆಂಡ್ ಎನ್ನಲಾಗುತ್ತದೆ.

ಕೆಲ ಕಂಪನಿಗಳು ನಿಯಮಿತವಾಗಿ ಡಿವಿಡೆಂಡ್ ಕೊಡುತ್ತಾ ಸಾಗುತ್ತವೆ. ಯಾವ ಕಂಪನಿ ಹೆಚ್ಚು ಡಿವಿಡೆಂಡ್ ಕೊಡುತ್ತದೆ ಎನ್ನುವುದನ್ನು ತಿಳಿಯಲು ನಿರ್ದಿಷ್ಟ ಷೇರಿನ ಡಿವಿಡೆಂಡ್ ಯೀಲ್ಡ್ ಅನುಪಾತ ನೋಡಬೇಕಾಗುತ್ತದೆ.

ಕಂಪನಿಯೊಂದು ಷೇರುದಾರರಿಗೆ ಪಾವತಿಸುವ ಡಿವಿಡೆಂಡ್ ಜೊತೆಗೆ ನಿರ್ದಿಷ್ಟ ಷೇರಿನ ಬೆಲೆಯನ್ನು ಭಾಗಿಸಿ ನೂರರೊಂದಿಗೆ ಗುಣಿಸಿದಾಗ ಡಿವಿಡೆಂಡ್ ಯೀಲ್ಡ್ ಎಷ್ಟು ಎನ್ನುವುದು ತಿಳಿಯುತ್ತದೆ.

ಈ ಸೂತ್ರ ಬಳಸಿಕೊಂಡು (ಕಂಪನಿ ಪಾವತಿಸಿದ ಡಿವಿಡೆಂಡ್ ಮೊತ್ತ/ಷೇರಿನ ಬೆಲೆ x 100 = ಡಿವಿಡೆಂಡ್ ಯೀಲ್ಡ್ ರೇಷಿಯೊ) ಡಿವಿಡೆಂಡ್ ಯೀಲ್ಡ್ ಲೆಕ್ಕಾಚಾರ ಮಾಡಬಹುದು. ನಿರ್ದಿಷ್ಟ ಕಂಪನಿಯ ಷೇರು ಹೆಚ್ಚು ಡಿವಿಡೆಂಡ್ ಕೊಡುತ್ತಿದೆಯೋ ಇಲ್ಲವೋ ಎನ್ನುವುದನ್ನು ತಿಳಿಯಲು ಅದೇ ವಲಯದ ಬೇರೆ ಕಂಪನಿಗಳ ಜೊತೆ ತಾಳೆ ಹಾಕಿ ನೋಡಬೇಕಾಗುತ್ತದೆ. ಇಷ್ಟೆಲ್ಲಾ ಮಾಡಲು ಕಷ್ಟವಾಗುತ್ತದೆ ಎನ್ನುವವರು ಹೆಚ್ಚು ಡಿವಿಡೆಂಡ್ ಕೊಡುವ ಷೇರುಗಳ ಮೇಲೆ ಹೂಡಿಕೆ ಮಾಡುವ ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳನ್ನು ಹೂಡಿಕೆಗೆ ಪರಿಗಣಿಸಬಹುದು.

ಏಕೆಂದರೆ ಕಡ್ಡಾಯವಾಗಿ ಹೂಡಿಕೆದಾರರ ಶೇ 65ರಷ್ಟು ಮೊತ್ತವನ್ನು ಡಿವಿಡೆಂಡ್ ಯೀಲ್ಡ್ ಫಂಡ್‌ಗಳು ಹೆಚ್ಚು ಡಿವಿಡೆಂಡ್ ಕೊಡುವ ಷೇರುಗಳ ಮೇಲೆ ಹಾಕಬೇಕಾಗುತ್ತದೆ. ಆದರೆ, ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳು ತಮ್ಮ ಹೂಡಿಕೆದಾರರಿಗೆ ಡಿವಿಡೆಂಡ್‌ನಿಂದ ಬಂದ ಲಾಭ ಹಂಚಿಕೆ ಮಾಡುತ್ತವೆಯೇ? ಬನ್ನಿ ಮುಂದೆ ತಿಳಿಯೋಣ.

ದಾಖಲೆ ಗಳಿಕೆ ಕಂಡ ಸೂಚ್ಯಂಕಗಳು

ಸತತ ಎರಡನೇ ವಾರವೂ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಓಟ ಮುಂದುವರಿಸಿವೆ. ಸೆಪ್ಟೆಂಬರ್ 20ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ದಾಖಲೆ ಮಟ್ಟದ ಏರಿಕೆ ಕಂಡಿವೆ.

84,544 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.99ರಷ್ಟು ಗಳಿಸಿಕೊಂಡಿದೆ. 25,790 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.71ರಷ್ಟು ಜಿಗಿದಿದೆ.

ಅಮೆರಿಕದಲ್ಲಿ ಬಡ್ಡಿದರ ಇಳಿಕೆ ಘೋಷಣೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ಭಾರತದಲ್ಲೂ ಮುಂಬರುವ ದಿನಗಳಲ್ಲಿ ಬಡ್ಡಿದರ ಇಳಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 5.22, ಬ್ಯಾಂಕ್ ಶೇ 3.84, ಫೈನಾನ್ಸ್ ಶೇ 3.63, ಆಟೊ ಶೇ 2.21, ಎನರ್ಜಿ ಶೇ 1.4, ಎಫ್ಎಂಸಿಜಿ ಶೇ 1.22, ಲೋಹ ಶೇ 0.33ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಮಾಧ್ಯಮ ಶೇ 2.67, ಮಾಹಿತಿ ತಂತ್ರಜ್ಞಾನ ಶೇ 2.59, ಫಾರ್ಮಾ ಶೇ 1.79, ಅನಿಲ ಮತ್ತು ತೈಲ ಶೇ 1.44 ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.03ರಷ್ಟು ಕುಸಿದಿವೆ.

ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 7.74, ಐಸಿಐಸಿಐ ಬ್ಯಾಂಕ್ ಶೇ 7.18, ಇಂಡಸ್‌ಇಂಡ್ ಬ್ಯಾಂಕ್ ಶೇ 6.59, ಎಸ್‌ಬಿಐ ಶೇ 5.71, ಶ್ರೀರಾಮ್ ಫೈನಾನ್ಸ್ ಶೇ 5.43, ಎಲ್ ಆ್ಯಂಡ್ ಟಿ ಶೇ 5.03, ಏರ್‌ಟೆಲ್ ಶೇ 4.76, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 4.71, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 4.61 ಮತ್ತು ಹೀರೊ ಮೋಟೊಕಾರ್ಪ್ ಶೇ 3.77ರಷ್ಟು ಗಳಿಸಿಕೊಂಡಿವೆ.

ಷೇರುಪೇಟೆ



ಟಿಸಿಎಸ್ ಶೇ 5.15, ಗ್ರಾಸಿಮ್ ಇಂಡಸ್ಟ್ರೀಸ್ ಶೇ 4.09, ಬಿಪಿಸಿಎಲ್ ಶೇ 3.1, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 2.81, ವಿಪ್ರೊ ಶೇ 2.15, ಟಾಟಾ ಮೋಟರ್ಸ್ ಶೇ 2.11, ಇನ್ಫೊಸಿಸ್ ಶೇ 1.84, ಒಎನ್‌ಜಿಸಿ ಶೇ 1.83, ಟೆಕ್ ಮಹೀಂದ್ರ ಶೇ 1.71 ಮತ್ತು ಡಾ.ರೆಡ್ಡೀಸ್ ಶೇ 1.59ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಅಕ್ಟೋಬರ್‌ನಿಂದ ಕಂಪನಿಗಳ ಮೂರನೇ ತ್ರೈಮಾಸಿಕ ಫಲಿತಾಂಶ ಹೊರಬೀಳಲಿದೆ. ಹೂಡಿಕೆದಾರರು ಅತ್ತ ದೃಷ್ಟಿ ಹರಿಸಿದ್ದಾರೆ. ಇನ್ನು ಅಕ್ಟೋಬರ್ 7ರಿಂದ 9ರ ವರೆಗೆ ಆರ್‌ಬಿಐ ಹಣಕಾಸು ಸಮಿತಿ ಸಭೆ ಇದೆ.

ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿದರ ಇಳಿಕೆ ತೀರ್ಮಾನ ಕೈಗೊಂಡಿರುವ ಬೆನ್ನಲ್ಲೇ ಆರ್‌ಬಿಐ ಮುಂದಿನ ನಡೆ ಏನು ಎನ್ನುವ ಕುತೂಹಲವಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಡಿವಿಡೆಂಡ್ ಅನ್ನು ಹೂಡಿಕೆದಾರರಿಗೆ ಹಂಚುತ್ತವೆಯೇ?: ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳು ತಾವು ಹೂಡಿಕೆ ಮಾಡಿರುವ ವಿವಿಧ ಷೇರುಗಳಿಂದ ಡಿವಿಡೆಂಡ್ (ಲಾಭಾಂಶ) ಪಡೆದುಕೊಂಡಾಗ ಆ ಹಣವನ್ನು ನೇರವಾಗಿ ಮ್ಯೂಚುವಲ್ ಫಂಡ್ ಹೂಡಿಕೆದಾರರಿಗೆ ವರ್ಗಾಯಿಸುವುದಿಲ್ಲ. ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳು ಅದನ್ನು ನಗದಿನ ರೂಪದಲ್ಲಿ ಅಥವಾ ಕಡಿಮೆ ರಿಸ್ಕ್ ಇರುವ ಡೆಟ್ ಹೂಡಿಕೆಗಳಲ್ಲಿ ಇರಿಸುತ್ತವೆ. ಆದರೆ, ಇದು ತಾತ್ಕಾಲಿಕ ವ್ಯವಸ್ಥೆ ಅಷ್ಟೇ.

ಡಿವಿಡೆಂಡ್ ಯೀಲ್ಡ್ ಫಂಡ್‌ನ ಮ್ಯಾನೇಜರ್ ಹೂಡಿಕೆಗೆ ಒಳ್ಳೆಯ ಅವಕಾಶಗಳನ್ನು ಕಂಡಾಗ ನಗದಿನ ರೂಪದಲ್ಲಿರುವ ಡಿವಿಡೆಂಡ್ ಹಣವನ್ನು ಮತ್ತೆ ಉತ್ತಮ ಗಳಿಕೆ ಕೊಡುವ ಷೇರುಗಳ ಮೇಲೆ ಹೂಡಿಕೆ ಮಾಡುತ್ತಾರೆ. ಹೀಗೆ ಮಾಡಿದಾಗ ಹೂಡಿಕೆದಾರರ ದುಡ್ಡು ಮತ್ತಷ್ಟು ಬೆಳೆಯಲು ಸಾಧ್ಯವಾಗುತ್ತದೆ.

ಅಂದರೆ, ಡಿವಿಡೆಂಡ್ ಮೊತ್ತವನ್ನು ಮತ್ತೆ ಹೂಡಿಕೆ ಮಾಡುವುದರಿಂದ ಇಲ್ಲಿ ಡಿವಿಡೆಂಡ್ ಯೀಲ್ಡ್ ಫಂಡ್‌ನಲ್ಲಿ ಹೂಡಿಕೆ ಮಾಡಿದವರಿಗೆ ಪರೋಕ್ಷವಾಗಿ ಲಾಭವಾಗುತ್ತದೆ. ಷೇರು ಹೂಡಿಕೆ ಮಾಡಿದಾಗ ಡಿವಿಡೆಂಡ್‌ನ ಗಳಿಕೆ ನೇರವಾಗಿ ನಿಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆಯಾಗುವ ರೀತಿ ಡಿವಿಡೆಂಡ್ ಯೀಲ್ಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಡಿವಿಡೆಂಡ್ ಗಳಿಕೆ ನೇರವಾಗಿ ಹೂಡಿಕೆದಾರನಿಗೆ ಲಭಿಸುವುದಿಲ್ಲ. ಆದರೆ, ಡಿವಿಡೆಂಡ್ ದುಡ್ಡಿನ ಮರು ಹೂಡಿಕೆಯಿಂದ ಇಲ್ಲಿ ಹೂಡಿಕೆದಾರನಿಗೆ ಲಾಭ ದಕ್ಕುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಇರಾನ್: ಕಲ್ಲಿದ್ದಲು ಗಣಿಯಲ್ಲಿ ಸ್ಫೋಟ 32 ಮಂದಿ ಸಾವು

ತೆಹ್ರಾನ್ (ಎಪಿ): ಪೂರ್ವ ಇರಾನ್‌ನ ಕಲ್ಲಿದ್ದಲು ಗಣಿಯೊಂದರಲ್ಲಿ ಸ್ಫೋಟ ಸಂಭವಿಸಿ ಕನಿಷ್ಠ 32 ಮಂದಿ ಮೃತಪಟ್ಟು, 17 ಮಂದಿ ಗಾಯಗೊಂಡಿದ್ದಾರೆ.

ಇರಾನ್‌ನ ತಬಾಸ್ ಕಲ್ಲಿದ್ದಲು ಗಣಿಯಲ್ಲಿ ಮಿಥೇನ್ ಅನಿಲ ಸೋರಿಕೆಯಿಂದಾಗಿ ಈ ಸ್ಫೋಟ ಸಂಭವಿಸಿದೆ. ಗಣಿಯಲ್ಲಿ ಇನ್ನೂ 18 ಕಾರ್ಮಿಕರು ಸಿಲುಕಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ಸ್ಫೋಟ ಸಂಭವಿಸಿದ ಬಳಿಕ ಅಧಿಕಾರಿಗಳು ತುರ್ತು ರಕ್ಷಣಾ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿದ್ದರು. ಸ್ಫೋಟದ ವೇಳೆ ಸುಮಾರು 70 ಮಂದಿ ಅಲ್ಲಿ ಕೆಲಸ ಮಾಡುತ್ತಿದ್ದರು.

‘ಗಣಿಯಲ್ಲಿ ಸಿಲುಕಿರುವವರನ್ನು ರಕ್ಷಿಸಿ ಹೊರತರಲು ಹಾಗೂ ಅವರ ಕುಟುಂಬಗಳಿಗೆ ನೆರವಾಗಲು ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದೇನೆ. ಸ್ಫೋಟದ ಕುರಿತು ತನಿಖೆ ಆರಂಭವಾಗಿದೆ’ ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹390-562
ದ್ವಿತಳಿ (ಬಿ.ವಿ)	₹400-706

‘ಜಿಡಿಪಿ ಶೇ 7ರಷ್ಟು ಪ್ರಗತಿ’

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕತೆಯು ಮಂದಗತಿಯಲ್ಲಿದ್ದರೂ ಭಾರತದ ಆರ್ಥಿಕ ಬೆಳವಣಿಗೆಗೆ ಯಾವುದೇ ಅಡ್ಡಿಯಾಗುವುದಿಲ್ಲ. 2024–25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಡೆಲಾಯ್ಟ್‌ನ ದಕ್ಷಿಣ ಏಷ್ಯಾ ಸಿಇಒ ರೋಮಲ್ ಶೆಟ್ಟಿ ತಿಳಿಸಿದ್ದಾರೆ.

ದೇಶದಲ್ಲಿ ಚಿಲ್ಲರೆ ಹಣದುಬ್ಬರವು ನಿಯಂತ್ರಣದಲ್ಲಿದೆ. ಗ್ರಾಮೀಣ ಪ್ರದೇಶದಲ್ಲಿ ಬೇಡಿಕೆ ಹೆಚ್ಚಿದೆ. ವಾಹನಗಳ ಮಾರಾಟದಲ್ಲೂ ಸುಧಾರಣೆ ಕಂಡುಬಂದಿದೆ ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ಜಾಗತಿಕ ಅಡೆತಡೆ ನಡುವೆಯೂ ಆರ್ಥಿಕತೆ ಬೆಳವಣಿಗೆಯಲ್ಲಿ ಭಾರತದ ಸ್ಥಾನ ಉತ್ತಮವಾಗಿದೆ. ಆದರೆ, ಮಧ್ಯಪ್ರಾಚ್ಯ ಮತ್ತು ಉಕ್ರೇನ್ ಬಿಕ್ಕಟ್ಟು ಸೇರಿ ಪಶ್ಚಿಮ ಯುರೋಪ್, ಉತ್ತರ ಅಮೆರಿಕ, ಆಸ್ಟ್ರೇಲಿಯಾದಲ್ಲಿನ ಮಂದಗತಿಯ ಆರ್ಥಿಕತೆ ಬೆಳವಣಿಗೆಯು ಜಿಡಿಪಿ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

2025–26ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.7ರಷ್ಟು ಪ್ರಗತಿ ಕಾಣಲಿದೆ ಎಂದು ಡೆಲಾಯ್ಟ್ ಅಂದಾಜಿಸಿದೆ. 2023–24ರಲ್ಲಿ ಜಿಡಿಪಿಯು ಶೇ 8.2ರಷ್ಟು ದಾಖಲಾಗಿದೆ.

ಸದ್ಯ ಭಾರತವು ಜಾಗತಿಕ ಮಟ್ಟದಲ್ಲಿ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ. 2030ರೊಳಗೆ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಹೇಳಿದ್ದಾರೆ.


ಪ್ರತಿಕೂಲ ಹವಾಮಾನ, ಕೀಟಬಾಧೆಗೆ ನಲುಗಿದ ಉದ್ಯಮ

ಉತ್ಪಾದನೆ ಕುಸಿತ: ಚಹಾ ದುಬಾರಿ?

ಕೋಲ್ಕತ್ತ (ಪಿಟಿಐ): ಕಳೆದ ವರ್ಷದಂತೆ ಈ ವರ್ಷವೂ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಚಹಾ ಉತ್ಪಾದನೆ ಕುಸಿತವಾಗಿದೆ. ಜುಲೈ ಅಂತ್ಯದವರೆಗೆ ಈ ಎರಡು ರಾಜ್ಯಗಳಲ್ಲಿ ಕ್ರಮವಾಗಿ ಶೇ 11ರಷ್ಟು ಹಾಗೂ ಶೇ 21ರಷ್ಟು ಉತ್ಪಾದನೆ ಇಳಿಕೆಯಾಗಿದೆ ಎಂದು ಭಾರತೀಯ ಚಹಾ ಮಂಡಳಿ (ಟಿಎಐ) ತಿಳಿಸಿದೆ.

ಮಂಡಳಿ ನೀಡಿರುವ ಮಾಹಿತಿ ಪ್ರಕಾರ, ಇಲ್ಲಿಯವರೆಗೆ 80 ದಶಲಕ್ಷ ಕೆ.ಜಿಯಷ್ಟು ಚಹ ಉತ್ಪಾದನೆ ಕಡಿಮೆಯಾಗಿದೆ. ರಫ್ತು ಪ್ರಮಾಣದಲ್ಲಿ ಶೇ 4ರಷ್ಟು ಇಳಿಕೆಯಾಗಿದೆ. ಹಾಗಾಗಿ, ದೇಶೀಯ ಮಾರುಕಟ್ಟೆಯಲ್ಲಿ ಚಹಾ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಪ್ರತಿಕೂಲ ಹವಾಮಾನ ಹಾಗೂ ಕೀಟಬಾಧೆಯೇ ಉತ್ಪಾದನೆ ಕುಸಿತಕ್ಕೆ ಮೂಲ ಕಾರಣ. 2023ರಲ್ಲಿ 1,394 ದಶಲಕ್ಷ ಕೆ.ಜಿ ಉತ್ಪಾದನೆ ಕಡಿಮೆಯಾಗಿತ್ತು. ಪ್ರಸಕ್ತ ವರ್ಷದಲ್ಲಿ 160ರಿಂದ 170 ದಶಲಕ್ಷ ಕೆ.ಜಿ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಅಂದಾಜಿಸಿದೆ.



ಇಡೀ ದೇಶದಲ್ಲಿಯೇ ಈ ಎರಡು ರಾಜ್ಯಗಳಲ್ಲಿ ಅತಿಹೆಚ್ಚು ಚಹಾ ಉತ್ಪಾದಿಸಲಾಗುತ್ತದೆ. ರಫ್ತು ಇಳಿಕೆ ಆಗಿರುವುದರಿಂದ ಚಹಾ ಕೈಗಾರಿಕೆಯು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ ಎಂದು ಎಸ್ಟೇಟ್ ಮಾಲೀಕರು ಮತ್ತು ವರ್ತಕರು ಹೇಳುತ್ತಾರೆ.

ಪ್ರತಿಕೂಲ ಹವಾಮಾನದಿಂದ ಚಹಾ ಗಿಡಗಳ ಬೆಳವಣಿಗೆ ಕುಂಠಿತವಾಗಿದೆ. ಕೀಟಬಾಧೆ ನಿಯಂತ್ರಣಕ್ಕೆ ಬಂದಿಲ್ಲ. ಇದರಿಂದ ಮುಂಬರುವ ತಿಂಗಳುಗಳಲ್ಲಿ ಮತ್ತಷ್ಟು ಉತ್ಪಾದನೆ ಕುಸಿತವಾಗುವ ಆತಂಕ ಎದುರಾಗಿದೆ ಎಂದು ವಿವರಿಸುತ್ತಾರೆ.

ಮಾರ್ಚ್ ಮತ್ತು ಮೇ ತಿಂಗಳಿನಲ್ಲಿ ಅತಿಹೆಚ್ಚು ಚಹಾ ಬೆಳೆಯುವ ಪಶ್ಚಿಮ ಬಂಗಾಳದ ಜಿಲ್ಲೆಗಳಲ್ಲಿ ಶೇ 50ರಿಂದ 80ರಷ್ಟು ಮಳೆ ಕೊರತೆಯಾಗಿದೆ. ಅಸ್ಸಾಂನಲ್ಲಿ ಶೇ 10ರಿಂದ 30ರಷ್ಟು ಕೊರತೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹೊಸ ತಳಿ ಬಿಡುಗಡೆ

ಬೆಳೆಗಾರರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಚಹಾ ಸಂಶೋಧನಾ ಸಂಘವು (ಟಿಆರ್‌ಎ) ಹವಾಮಾನ ಸಹಿಷ್ಣು ತಳಿಯಾದ ‘ಟಿಎಸ್‌ಎಸ್ 2’ ಅನ್ನು ಬಿಡುಗಡೆ ಮಾಡಿದೆ. ಈ ತಳಿಯು ಅತಿಹೆಚ್ಚು ಉಷ್ಣಾಂಶಕ್ಕೆ ಹೊಂದಿಕೊಳ್ಳುವ ಗುಣ ಹೊಂದಿದ್ದು, ಉತ್ತಮ ಇಳುವರಿ ಕೊಡಲಿದೆ ಎಂದು ಹೇಳಿದೆ.

ಕೇಂದ್ರ ವಾಣಿಜ್ಯ ಸಚಿವಾಲಯ ಮತ್ತು ಚಹಾ ಕೈಗಾರಿಕಾ ವಲಯವು ಈ ತಳಿಯ ಅಭಿವೃದ್ಧಿಗೆ ಹಣಕಾಸಿನ ನೆರವು ನೀಡಿವೆ.

‘ಚಹಾ ಗಿಡಗಳಿಗೆ ಉಷ್ಣತೆ ಮತ್ತು ತೇವಾಂಶ ಸಮತೋಲಿತವಾಗಿರಬೇಕು. ಆದರೆ, ಉಷ್ಣಾಂಶ ಏರಿಕೆಯಾದರೆ ಮಣ್ಣು ಶುಷ್ಕಗೊಳ್ಳಲಿದೆ. ಇದು ಗಿಡಗಳ ಬೆಳವಣಿಗೆ ಮೇಲೆ ಒತ್ತಡ ಹೇರಲಿದೆ. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಉಷ್ಣಾಂಶವು 35 ಡಿಗ್ರಿ ಸೆಲ್ಸಿಯಸ್ ದಾಟಿತ್ತು. ಇದು ಗಿಡಗಳಲ್ಲಿ ಹೊಸ ಎಲೆಗಳ ಚಿಗುರುವಿಕೆ ಮೇಲೆ ಪರಿಣಾಮ ಬೀರಿದೆ’ ಎಂದು ಟಿಆರ್‌ಎ ಕಾರ್ಯದರ್ಶಿ ಜಾಯ್‌ದೀಪ್ ಫುಕನ್ ಹೇಳುತ್ತಾರೆ.

ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧದ ತನಿಖೆ ಪ್ರಕರಣ

ಹೆಚ್ಚುವರಿ ದಾಖಲೆ ಸಲ್ಲಿಸಿ: ಲೋಕಪಾಲ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಹೆಚ್ಚುವರಿ ದಾಖಲೆಗಳನ್ನು ಒಳಗೊಂಡ ಪ್ರಮಾಣಪತ್ರ ಸಲ್ಲಿಸಬೇಕು ಎಂದು ದೂರುದಾರರಿಗೆ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಲೋಕಪಾಲ ಸೂಚಿಸಿದೆ.

ಎರಡು ದೂರಿನಲ್ಲಿ ಲಗತ್ತಿಸಿರುವ ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್ ವರದಿ ಆಧರಿಸಿ ತನಿಖೆಗೆ ಆದೇಶಿಸಲು ಆಗುವುದಿಲ್ಲ ಎಂದು ಹೇಳಿದೆ. ಎಲ್ಲಿಯೂ ದೂರುದಾರರ ಹೆಸರನ್ನು ಉಲ್ಲೇಖಿಸಿಲ್ಲ.

ಲೋಕಪಾಲ ಕಾಯ್ದೆ 2013ರ ಸೆಕ್ಷನ್ 20ರ ಅನ್ವಯ ಮೇಲ್ನೋಟಕ್ಕೆ ನಮಗೆ ಭ್ರಷ್ಟಾಚಾರ ನಡೆದಿರುವುದು ಮನದಟ್ಟಾಗಬೇಕು. ಆಗಷ್ಟೇ ಪ್ರಾಥಮಿಕ ವಿಚಾರಣೆಗೆ ಆದೇಶಿಸಲು ಸಾಧ್ಯವಾಗಲಿದೆ. ಹಾಗಾಗಿ, ಸೂಕ್ತ ದಾಖಲೆಗಳನ್ನು ಸಲ್ಲಿಸಬೇಕಿದೆ ಎಂದು ಸೂಚಿಸಿದೆ.

ಅಲ್ಲದೆ, ಸೆಬಿ ಮುಖ್ಯಸ್ಥೆ ವಿರುದ್ಧದ ಆರೋಪವು ಭ್ರಷ್ಟಾಚಾರ ತಡೆ ಕಾಯ್ದೆ ವ್ಯಾಪ್ತಿಗೆ ಹೇಗೆ ಬರುತ್ತದೆ ಎಂಬುದನ್ನೂ ಮನದಟ್ಟು ಮಾಡಬೇಕು ಎಂದು ನಿರ್ದೇಶನ ನೀಡಿದೆ.

ಒಂದು ದೂರು ಹಿಂಡನ್‌ಬರ್ಗ್ ರಿಸರ್ಚ್ ವರದಿಯನ್ನಷ್ಟೇ ಆಧರಿಸಿದೆ. ಹಿಂಡನ್‌ಬರ್ಗ್ ವರದಿ ಬಿಡುಗಡೆ ದಿನವೇ ಡೌನ್‌ಲೋಡ್ ಮಾಡಿಕೊಂಡು ಇ–ಮೇಲ್ ಮೂಲಕ ಮತ್ತೊಂದು ದೂರು ಸಲ್ಲಿಸಲಾಗಿದೆ ಎಂದು ಹೇಳಿದೆ.

ಮುಂದಿನ ವಿಚಾರಣೆಯನ್ನು ಅಕ್ಟೋಬರ್ 17ರಂದು ಕೈಗೆತ್ತಿಕೊಳ್ಳಲಿದೆ.

ಸಂಸದೆ ಮಹುವಾ ದೂರು: ಸೆಪ್ಟೆಂಬರ್ 13ರಂದು ಸಂಸದೆ ಮಹುವಾ ಮೊಯಿತ್ರಾ ಅವರು, ಸೆಬಿ ಅಧ್ಯಕ್ಷೆ ವಿರುದ್ಧ ಲೋಕಪಾಲಕ್ಕೆ ದೂರು ಸಲ್ಲಿಸಿದ್ದರು. ದೂರಿನ ಬಗ್ಗೆ ಪ್ರಾಥಮಿಕ ತನಿಖೆ ನಡೆಸುವ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ಅಥವಾ ಸಿಬಿಐಗೆ ಸೂಚಿಸಬೇಕು. ಬಳಿಕ ಪೂರ್ಣ ಪ್ರಮಾಣದಲ್ಲಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದರು. ಆನ್‌ಲೈನ್ ಮತ್ತು ಭೌತಿಕವಾಗಿ ದೂರು ಸಲ್ಲಿಸಲಾಗಿದೆ ಎಂದು ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದ್ದರು.

ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಳ್ ಬುಚ್ ಪಾಲುದಾರಿಕೆ ಹೊಂದಿದ್ದಾರೆ ಎಂದು ಹಿಂಡನ್‌ಬರ್ಗ್ ರಿಸರ್ಚ್ ಆರೋಪಿಸಿತ್ತು. ಬುಚ್ ದಂಪತಿ ಈ ಆರೋಪವನ್ನು ಅಲ್ಲಗಳೆದಿದ್ದಾರೆ.

ಕೋಚಿಂಗ್ ಸೆಂಟರ್‌ಗಳ ಅನ್ಯಾಯ ವಿದ್ಯಾರ್ಥಿಗಳ ಅಹವಾಲಿಗೆ ಸ್ಪಂದನೆ

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಆಕಾಂಕ್ಷಿಗಳ ಅಹವಾಲುಗಳಿಗೆ ಸ್ಪಂದಿಸಿರುವ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಯು (ಎನ್‌ಸಿಎಚ್) ಕೋಚಿಂಗ್ ಸೆಂಟರ್‌ಗಳಿಂದ ₹1 ಕೋಟಿ ಮೊತ್ತವನ್ನು ವಾಪಸ್ ಕೊಡಿಸಲು ಕ್ರಮವಹಿಸಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ಯುಪಿಎಸ್‌ಸಿ, ಐಐಟಿ ಪ್ರವೇಶ ಸೇರಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಮತ್ತು ಆಕಾಂಕ್ಷಿಗಳು ಶುಲ್ಕ ಪಾವತಿಸುತ್ತಾರೆ. ಆದರೆ, ಸರಿಯಾಗಿ ತರಗತಿಗಳನ್ನು ನಡೆಸದೆ ಕೆಲವು ಕೋಚಿಂಗ್ ಸೆಂಟರ್‌ಗಳು ಅನ್ಯಾಯ ಎಸಗುತ್ತವೆ. ಶುಲ್ಕವನ್ನೂ ಮರಳಿಸುವುದಿಲ್ಲ. ಈ ಬಗ್ಗೆ ಸಹಾಯವಾಣಿಯಲ್ಲಿ ಸಲ್ಲಿಕೆಯಾದ ಅಹವಾಲುಗಳಿಗೆ ಸ್ಪಂದಿಸಲಾಗಿದೆ ಎಂದು ಹೇಳಿದೆ.

ಕೇಂದ್ರ ಗ್ರಾಹಕ ಸಚಿವಾಲಯವು ಮಧ್ಯಪ್ರವೇಶಿಸಿದ್ದು, ವಿದ್ಯಾರ್ಥಿಗಳಿಗೆ ಹಣ ಹಿಂದಿರುಗಿಸುವ ಸಂಬಂಧ ದಾವೆ ಪೂರ್ವ ಹಂತದ ಪ್ರಕ್ರಿಯೆ ಆರಂಭಿಸಿದೆ ಎಂದು ತಿಳಿಸಿದೆ.

‘ತಪ್ಪಿತಸ್ಥ ಸೆಂಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳುವುದು ಸಚಿವಾಲಯದ ಜವಾಬ್ದಾರಿಯಾಗಿದೆ. ಇದರಿಂದ ಗ್ರಾಹಕರ ಹಕ್ಕುಗಳಿಗೆ ರಕ್ಷಣೆ ಸಿಗಲಿದೆ. ಜೊತೆಗೆ, ಕೋಚಿಂಗ್ ಸೆಂಟರ್‌ಗಳು ಸರಿಯಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗಲಿದೆ’ ಎಂದು ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

ಅನ್ಯಾಯಕ್ಕೆ ಒಳಗಾದ ವಿದ್ಯಾರ್ಥಿಗಳು ಟೋಲ್ ಫ್ರೀ ಸಂಖ್ಯೆ 1915 ಅಥವಾ www.consumerhelpline.gov.in. ಮೂಲಕ ಅಹವಾಲು ಸಲ್ಲಿಸಬಹುದಾಗಿದೆ.

ಸುದ್ದಿ ವಾಹಿನಿಯ ವೆಸ್ಟ್ ಬ್ಯಾಂಕ್ ಕಚೇರಿಗೆ ನುಗ್ಗಿದ ಇಸ್ರೇಲ್ ಪಡೆಗಳು

ಅಲ್ ಜಜೀರಾ: 45 ದಿನ ಮುಚ್ಚಲು ಆದೇಶ

ರಮಲ್ಲಾ (ಎಎಫ್‌ಪಿ): ವೆಸ್ಟ್ ಬ್ಯಾಂಕ್‌ನ ರಮಲ್ಲಾದಲ್ಲಿರುವ ತನ್ನ ಕಚೇರಿಯ ಮೇಲೆ ದಾಳಿ ನಡೆಸಿದ ಮಾಸ್ಕ್ ಧರಿಸಿದ್ದ ಇಸ್ರೇಲಿ ಪಡೆಗಳು, 45 ದಿನಗಳವರೆಗೆ ಮುಚ್ಚುವ ಆದೇಶವನ್ನು ಹೊರಡಿಸಿವೆ ಎಂದು ಅಲ್ ಜಜೀರಾ ಸುದ್ದಿವಾಹಿನಿ ಹೇಳಿದೆ.

ಗಾಜಾ ಯುದ್ಧದ ಸಮಯದಿಂದ ಅರಬ್ ವಾಹಿನಿ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನಡುವೆ ವೈಮನಸ್ಸು ಉಂಟಾಗಿತ್ತು. ಅದೀಗ ವಾಹಿನಿ ಕಚೇರಿಯ ಬಾಗಿಲು ಮುಚ್ಚಿಸುವ ಹಂತಕ್ಕೆ ತಲುಪಿದೆ.

ಕಳೆದ ವರ್ಷದ ಅಕ್ಟೋಬರ್ 7ರಂದು ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಿದ್ದರು. ಆ ಬಳಿಕ ಇಸ್ರೇಲ್ ಕಾರ್ಯಾಚರಣೆ ಘೋಷಿಸಿತ್ತು. ಈ ಯುದ್ಧದ ಪರಿಣಾಮಗಳ ಕುರಿತು ಅಲ್ ಜಜೀರಾ ನಿರಂತರ ವರದಿ ಪ್ರಸಾರ ಮಾಡಿತ್ತು.



ವೆಸ್ಟ್ ಬ್ಯಾಂಕ್‌ನಲ್ಲಿನ ಅಲ್ ಜಜೀರಾ ಸುದ್ದಿ ವಾಹಿನಿ ಕಚೇರಿಗೆ ಭಾನುವಾರ ನುಗ್ಗಿದ ಇಸ್ರೇಲ್ ಪಡೆಗಳು — ಎಎಫ್‌ಪಿ ಚಿತ್ರ

ಕತಾರ್ ಮೂಲದ ವಾಹಿನಿಯ ಪತ್ರಕರ್ತರು ಹಮಾಸ್ ಅಥವಾ ಅದರ ಇಸ್ಲಾಮಿಕ್ ಜಿಹಾದಿಗಳ ಜತೆ ಸಂಪರ್ಕ ಹೊಂದಿದ್ದಾರೆ ಎಂಬುದು ಇಸ್ರೇಲ್‌ನ ಸೇನೆಯ ಆರೋಪ.

ಆದರೆ ಈ ಆರೋಪಗಳನ್ನು ನಿರಾಕರಿಸಿರುವ ಅಲ್ ಜಜೀರಾ, ಗಾಜಾ ಪಟ್ಟಿಯಲ್ಲಿರುವ ತನ್ನ ಸಿಬ್ಬಂದಿಯನ್ನು ಇಸ್ರೇಲ್ ಗುರಿಯಾಗಿಸುತ್ತಿದೆ ಎಂದು ಹೇಳಿದೆ.

ಗಾಜಾ ಯುದ್ಧ ಆರಂಭವಾದಾಗಿನಿಂದ ವಾಹಿನಿಯ ನಾಲ್ವರು ಪತ್ರಕರ್ತರು ಹತ್ಯೆಯಾಗಿದ್ದಾರೆ. ಗಾಜಾದಲ್ಲಿನ ವಾಹಿನಿ ಕಚೇರಿಯ ಮೇಲೆ ಬಾಂಬ್ ದಾಳಿಯೂ ನಡೆದಿದೆ ಎಂದು ಅದು ಹೇಳಿದೆ.

‘ವಾಹಿನಿಯ ಕಚೇರಿ ಮುಚ್ಚಿಸಲು ಸೂಚಿಸಿದ ಸೇನಾ ಪಡೆಗಳು ಸ್ಪಷ್ಟ ಕಾರಣ ತಿಳಿಸಲಿಲ್ಲ. ಎಲ್ಲ ಕ್ಯಾಮೆರಾಗಳನ್ನು ತೆಗೆದುಕೊಂಡು ಈ ಕ್ಷಣ ಕಚೇರಿ ತ್ಯಜಿಸಿ ಎಂದು ಹೇಳಿದ್ದಾಗಿ’ ವಾಹಿನಿ ತಿಳಿಸಿದೆ.

ತನಗೆ ನೀಡಲಾಗಿರುವ ಆದೇಶದಲ್ಲಿ, ಭಯೋತ್ಪಾದನೆಗೆ ಬೆಂಬಲಿಸುತ್ತಿರುವ ಮತ್ತು ಪ್ರಚೋದಿಸುತ್ತಿರುವ ಆರೋಪ ಮಾಡಲಾಗಿದೆ ಎಂದು ವಾಹಿನಿಯ ವೆಸ್ಟ್ ಬ್ಯಾಂಕ್ ಬ್ಯೂರೊದ ಮುಖ್ಯಸ್ಥ ವಾಲಿದ್ ಅಲ್ ಒಮರಿ ತಿಳಿಸಿದ್ದಾರೆ.

ಎಸ್‌ಸಿ ವಿರುದ್ಧ ದೌರ್ಜನ್ಯ: 13 ರಾಜ್ಯದಲ್ಲಿ ಶೇ 97ರಷ್ಟು ಪ್ರಕರಣ

ನವದೆಹಲಿ (ಪಿಟಿಐ): ಪರಿಶಿಷ್ಟ ಜಾತಿಗಳ (ಎಸ್‌ಸಿ) ವಿರುದ್ಧದ ದೌರ್ಜನ್ಯಗಳಿಗೆ ಸಂಬಂಧಿಸಿ 2022ರಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ, ಶೇ 97.7ರಷ್ಟು ಪ್ರಕರಣಗಳು 13 ರಾಜ್ಯಗಳಿಂದ ವರದಿಯಾಗಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಅತಿ ಹೆಚ್ಚು ಪ್ರಕರಣಗಳು ಉತ್ತರ ಪ್ರದೇಶದಲ್ಲಿ ವರದಿಯಾಗಿದ್ದು, ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ರಾಜಸ್ಥಾನ ಹಾಗೂ ಮಧ್ಯಪ್ರದೇಶ ಇವೆ ಎಂದು ವರದಿಯಲ್ಲಿ ಹೇಳಲಾಗಿದೆ.

2022ರಲ್ಲಿ, ಪರಿಶಿಷ್ಟ ಪಂಗಡಗಳ (ಎಸ್‌ಟಿ) ವಿರುದ್ಧದ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳು 13 ರಾಜ್ಯಗಳಲ್ಲಿಯೇ ಹೆಚ್ಚು (ಶೇ 98.91) ದಾಖಲಾಗಿವೆ.

45ನೇ ಒಲಿಂಪಿಯಾಡ್: ಪುರುಷರ, ಮಹಿಳೆಯರ ತಂಡಗಳಿಗೆ ಐತಿಹಾಸಿಕ ಚಿನ್ನ • ಓಪನ್ ವಿಭಾಗದಲ್ಲಿ ಅಜೇಯ ಸಾಧನೆ

ವಿಶ್ವ ಚೆಸ್‌ಗೆ ಭಾರತವೇ ಸಾರ್ವಭೌಮ

ಬುಡಾಪೆಸ್ಟ್ (ಪಿಟಿಐ/ಏಜನ್ಸಿಸ್): ಭಾರತ ಚೆಸ್ ಒಲಿಂಪಿಯಾಡ್‌ನಲ್ಲಿ ಭಾನುವಾರ ಇತಿಹಾಸ ನಿರ್ಮಿಸಿತು. 45ನೇ ಚೆಸ್ ಒಲಿಂಪಿಯಾಡ್‌ನ ಓಪನ್ ಮತ್ತು ಮಹಿಳೆಯರ ವಿಭಾಗ- ಎರಡರಲ್ಲೂ ಮೊದಲ ಬಾರಿಗೆ ಚಿನ್ನದ ಪದಕ ಗೆದ್ದುಕೊಂಡಿತು. ಪುರುಷರ ತಂಡ ಟೂರ್ನಿಯುದ್ದಕ್ಕೂ ಅಜೇಯ ಸಾಧನೆ ಪ್ರದರ್ಶಿಸಿತು.

ಓಪನ್ ವಿಭಾಗದಲ್ಲಿ ಶನಿವಾರವೇ ಭಾರತ ಚಿನ್ನ ಗೆಲ್ಲುವುದು ಖಚಿತವಾಗಿತ್ತು. ಅಂತಿಮ ಸುತ್ತಿನಲ್ಲಿ ಭಾರತ 3.5–0.5 ರಿಂದ ಸ್ಲೊವೇನಿಯಾ ತಂಡವನ್ನು ಮಣಿಸಿತು. ಡಿ.ಗುಕೇಶ್, ಅರ್ಜುನ್ ಇರಿಗೇಶಿ, ರಮೇಶಬಾಬು ಪ್ರಜ್ಞಾನಂದ ತಮ್ಮ ಪಂದ್ಯಗಳನ್ನು ಗೆದ್ದುಕೊಂಡರು. ವಿದಿತ್ ಗುಜರಾತಿ, ಎದುರಾಳಿ ವಿರುದ್ಧ ಡ್ರಾ ಮಾಡಿಕೊಂಡರು.

ಮಹಿಳೆಯರ ವಿಭಾಗದಲ್ಲಿ, ಅಗ್ರ ಶ್ರೇಯಾಂಕ ಪಡೆದಿದ್ದ ಭಾರತ 3.5–0.5 ರಿಂದ ಅಜರ್‌ಬೈಜಾನ್ ತಂಡವನ್ನು ಮಣಿಸಿತು.

ಒಲಿಂಪಿಯಾಡ್‌ನಲ್ಲಿ ಭಾರತ ಓಪನ್ ವಿಭಾಗದಲ್ಲಿ 2014ರಲ್ಲಿ (ನಾರ್ವೆಯ ಟ್ರೊಮ್ಸೊ) ಮತ್ತು 2022ರಲ್ಲಿ (ಚೆನ್ನೈ) ಕಂಚಿನ ಪದಕ ಗೆದ್ದುಕೊಂಡಿದ್ದು, ಮಹಿಳಾ ತಂಡ 2022ರ ಒಲಿಂಪಿಯಾಡ್‌ನಲ್ಲಿ ಕಂಚಿನ ಪದಕ ಗೆದ್ದಿದ್ದು ಇದುವರೆಗಿನ ಪ್ರಮುಖ ಸಾಧನೆಯಾಗಿತ್ತು.

ಅಮೋಘ ಸಾಧನೆ: ವಿಶ್ವ ಚಾಂಪಿಯನ್ ಚಾಲೆಂಜರ್ ಡಿ.ಗುಕೇಶ್ ಮತ್ತು ಅರ್ಜುನ್ ಇರಿಗೇಶಿ ಭಾರತದ ವಿಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಅರ್ಜುನ್ 11 ಪಂದ್ಯಗಳಿಂದ 10 ಪಾಯಿಂಟ್ಸ್ (9 ಗೆಲುವು, 2 ಡ್ರಾ) ಕಲೆಹಾಕಿದರು. ಇದೇ ವರ್ಷದ ಕೊನೆಯಲ್ಲಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಆಡಲಿರುವ ಗುಕೇಶ್ ಆಡಿದ 10 ಪಂದ್ಯಗಳಿಂದ 9 ಪಾಯಿಂಟ್ಸ್ (8 ಜಯ, 2 ಡ್ರಾ) ಸಂಗ್ರಹಿಸಿ ಅಮೋಘ ಸಾಧನೆ ಮೆರೆದರು.

ಕಪ್ಪು ಕಾಯಿಗಳಲ್ಲಿ ಆಡಿದ 18 ವರ್ಷ ವಯಸ್ಸಿನ ದೊಮ್ಮರಾಜು ಗುಕೇಶ್ ಮೊದಲ ಬೋರ್ಡ್‌ನಲ್ಲಿ ಪ್ರಯಾಸಪಟ್ಟು ವ್ಲಾದಿಮಿರ್ ಫೆಡೊಸೀವ್ ಅವರನ್ನು ಸೋಲಿಸಿದರು. ಆದರೆ ಈ ಆಟದಲ್ಲಿ ಚೆನ್ನೈ ಆಟಗಾರನ ತಂತ್ರಗಾರಿಕೆ ಮೆಚ್ಚುವಂತಿತ್ತು. ಮೂರನೇ ಬೋರ್ಡ್‌ನಲ್ಲಿ ಅರ್ಜುನ್ ಕೂಡ ಕಪ್ಪುಕಾಯಿಗಳಲ್ಲಿ ಆಡಿ ಯಾನ್ ಸುಬೆಲಿ ಅವರನ್ನು ಸೋಲಿಸಿದರು.



ಡಿ.ಗುಕೇಶ್



ಅರ್ಜುನ್ ಇರಿಗೇಶಿ —ಫಿಡೆ ವೆಬ್‌ಸೈಟ್ ಚಿತ್ರ



ಚಿನ್ನ ಗೆದ್ದ ಭಾರತ ಮಹಿಳಾ ಚೆಸ್ ತಂಡ (ಎಡದಿಂದ) ತಾನಿಯಾ ಸಚ್‌ದೇವ್, ವಂತಿಕಾ ಅಗರವಾಲ್, ಆರ್.ವೈಶಾಲಿ, ದಿವ್ಯಾ ದೇಶ್‌ಮುಖ್ ಮತ್ತು ದ್ರೋಣವಲ್ಲಿ ಹಾರಿಕಾ —ಎಕ್ಸ್ ಚಿತ್ರ

ನಾಲ್ಕು ವೈಯಕ್ತಿಕ ಚಿನ್ನ

ಭಾರತದ ಚೆಸ್‌ಪಟುಗಳು ವೈಯಕ್ತಿಕ ಬೋರ್ಡ್‌ಗಳಲ್ಲಿ ತೋರಿದ ಅತ್ಯುತ್ತಮ ಸಾಧನೆಗೆ ನಾಲ್ಕು ಚಿನ್ನದ ಪದಕಗಳನ್ನು ಗೆದ್ದರು. ಓಪನ್ ವಿಭಾಗದಲ್ಲಿ ಗುಕೇಶ್ ಮತ್ತು ಅರ್ಜುನ್, ಮೊದಲ ಮತ್ತು ಮೂರನೇ ಬೋರ್ಡ್‌ನಲ್ಲಿ ಸ್ವರ್ಣ ಗೆದ್ದರು. ಮಹಿಳಾ ವಿಭಾಗದಲ್ಲಿ ದಿವ್ಯಾ ದೇಶಮುಖ್ ಮತ್ತು ವಂತಿಕಾ, ಮೂರು ಮತ್ತು ನಾಲ್ಕನೇ ಬೋರ್ಡ್‌ನ ಆಟಕ್ಕೆ ಚಿನ್ನ ಗೆದ್ದರು.

ಎರಡನೇ ಬೋರ್ಡ್‌ನಲ್ಲಿ ಪ್ರಜ್ಞಾನಂದ ಕೂಡ ಆಂಟನ್ ಡೆಮ್ಚೆಂಕೊ ಅವರನ್ನು ಮಣಿಸಿದ್ದರಿಂದ ಭಾರತದ ಗೆಲುವಿನ ಅಂತರ 3–0 ಆಯಿತು.

ಎರಡನೇ ಶ್ರೇಯಾಂಕ ಪಡೆದಿದ್ದ ಭಾರತ ಸಂಭವನೀಯ 22 ಪಾಯಿಂಟ್‌ಗಳಲ್ಲಿ 21 ಪಾಯಿಂಟ್ಸ್ ಗಳಿಸಿದ್ದು ಅಮೋಘ ಸಾಧನೆಯೇ ಸರಿ. ಉಜ್ಬೇಕಿಸ್ತಾನ ಎದುರು ಡ್ರಾ ಮಾಡಿಕೊಂಡಿದ್ದು, ಉಳಿದ 10 ಸುತ್ತಿನಲ್ಲಿ ಭಾರತದ ಆಟಗಾರರು ಜಯಗಳಿಸಿದರು. ಭಾರತ ಪುರುಷರ ತಂಡದ ಪ್ರಾಬಲ್ಯ ಎಷ್ಟರಮಟ್ಟಿಗೆ ಇತ್ತೆಂದರೆ 44 ಪಂದ್ಯಗಳ ಪೈಕಿ ಬರೇ ಒಂದು ಪಂದ್ಯವನ್ನು ಮಾತ್ರ ಸೋತಿತ್ತು. 9ನೇ ಸುತ್ತಿನಲ್ಲಿ ಅಮೆರಿಕದ ವೆಸ್ಲಿ ಸೊ ಎದುರು ಪ್ರಜ್ಞಾನಂದ ಆ ಒಂದು ಪಂದ್ಯ ಸೋತಿದ್ದರು.

ಮಹಿಳೆಯರಿಗೂ ಬಂಗಾರ: ಮಹಿಳಾ ತಂಡದಲ್ಲಿ ಹಾರಿಕಾ ಮೊದಲ ಬೋರ್ಡ್‌ನಲ್ಲಿ ಮಮ್ಮದ್‌ಝೂದಾ ಗುನೇ ಅವರನ್ನು ಮಣಿಸಿದರು. ವೈಶಾಲಿ ಮತ್ತು ಉಲ್ವಿಯಾ ನಡುವಣ ಪಂದ್ಯ ಡ್ರಾ ಆಯಿತು. ಉತ್ತಮ ಲಯದಲ್ಲಿರುವ ದಿವ್ಯಾ ದೇಶಮುಖ್, ಬೆಯ್ದಾಲಯೇವಾ ವಿರುದ್ಧ ಜಯಗಳಿಸಿದರೆ, ಈ ಒಲಿಂಪಿಯಾಡ್‌ನಲ್ಲಿ ಮಿಂಚಿದ ವಂತಿಕಾ ಅಗರವಾಲ್, ಬಾಲಾಜಯೇವಾ ಖಾನಿಮ್ ವಿರುದ್ಧ ಗೆಲುವನ್ನು ದಾಖಲಿಸಿದರು.

ಭಾಗವಹಿಸಿದ ಒಟ್ಟು ತಂಡಗಳು

197 ಓಪನ್ ವಿಭಾಗ

183 ಮಹಿಳಾ ವಿಭಾಗ

ಟಾಪ್ 5 ತಂಡಗಳು

(ಓಪನ್ ವಿಭಾಗ)

ದೇಶ	ಅಂಕ
ಭಾರತ	21
ಅಮೆರಿಕ	17
ಉಜ್ಬೇಕಿಸ್ತಾನ	17
ಚೀನಾ	17
ಸರ್ಬಿಯಾ	17

ಮಹಿಳಾ ವಿಭಾಗ

ದೇಶ	ಅಂಕ
ಭಾರತ	19
ಕಜಕಸ್ತಾನ	18
ಅಮೆರಿಕ	17
ಸ್ಪೇನ್	17
ಅರ್ಮೇನಿಯಾ	17

ಆನಂದ್ ಅಭಿನಂದನೆ



ಒಲಿಂಪಿಯಾಡ್‌ನಲ್ಲಿ ಮೊದಲ ಸಲ ಚಿನ್ನ ಗೆದ್ದ ಭಾರತ, ಪುರುಷರ ಮತ್ತು ಮಹಿಳಾ ತಂಡಗಳಿಗೆ ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಅಭಿನಂದನೆ ಸಲ್ಲಿಸಿದ್ದಾರೆ.

ಭಾರತ ತಂಡಕ್ಕೆ ಅಭಿನಂದನೆಗಳು. ಗುಕೇಶ್ ಮತ್ತು ಅರ್ಜುನ್ ಇರಿಗೇಶಿ ಅವರ ಪ್ರದರ್ಶನ ಅತ್ಯದ್ಭುತ. ವಿದಿತ್ ಅವರಿಗೂ ಅಭಿನಂದನೆ. ಶ್ರೀನಾಥ್ ನಾರಾಯಣನ್ ಅವರ ನಾಯಕತ್ವವೂ ಅಮೋಘ ಎಂದು ಆನಂದ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ಮಹಿಳಾ ತಂಡಕ್ಕೆ ಅಭಿನಂದನೆ ಸಲ್ಲಿಸಿರುವ ಅವರು, ದಿವ್ಯಾ ದೇಶಮುಖ್ ಮತ್ತು ವಂತಿಕಾ ಅಗರವಾಲ್ ಅವರ ಸಾಧನೆಯನ್ನು ವಿಶೇಷವಾಗಿ ಉಲ್ಲೇಖಿಸಿದ್ದಾರೆ.

ಚೆನ್ನೈ ಟೆಸ್ಟ್‌ನಲ್ಲಿ ಭಾರಿ ಅಂತರದ ಜಯ ಸಾಧಿಸಿದ ಭಾರತ • ಜಡೇಜಗೆ ಮೂರು ವಿಕೆಟ್

ಅಶ್ವಿನ್ ಮೋಡಿಗೆ ತಲೆಬಾಗಿದ ಬಾಂಗ್ಲಾ

ಪ್ರಜಾವಾಣಿ ವಾರ್ತೆ

ಚೆನ್ನೈ: ಚೆಪಾಕ್‌ನಲ್ಲಿ ಬಾಂಗ್ಲಾದೇಶ ಎದುರು ನಡೆದ ಟೆಸ್ಟ್ ಪಂದ್ಯದಲ್ಲಿ ಸತತ ಮೂರು ದಿವಸ ಪಾರಮ್ಯ ಮೆರೆದಿದ್ದ ಭಾರತ ತಂಡವು ನಿರೀಕ್ಷೆಯಂತೆ ನಾಲ್ಕನೇ ದಿನ ಸುಲಭ ಜಯ ಸಾಧಿಸಿತು.

ತಮ್ಮ ತವರೂರಿನ ಅಂಗಳದಲ್ಲಿ ಬಹುತೇಕ ಕೊನೆಯ ಅಂತರ ರಾಷ್ಟ್ರೀಯ ಪಂದ್ಯವಾಡಿದ ಆಫ್‌ಸ್ಪಿನ್-ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ (88ಕ್ಕೆ6) ಅವರು ಪ್ರಜ್ವಲಿಸಿದರು. ಅವರಿಗೆ ರವೀಂದ್ರ ಜಡೇಜ (58ಕ್ಕೆ3) ಉತ್ತಮ ಜೊತೆ ನೀಡಿದರು. ಅವರಿಬ್ಬರ ಜೊತೆಯಾಟದಿಂದಾಗಿ ತಂಡವು 280 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

515 ರನ್‌ಗಳ ಜಯದ ಗುರಿ ಬೆನ್ನಟ್ಟಿದ್ದ ಪ್ರವಾಸಿ ತಂಡಕ್ಕೆ 62.1 ಓವರ್‌ಗಳಲ್ಲಿ 234 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ನಾಯಕ ನಜ್ಮುಲ್ ಹುಸೇನ್ ಶಾಂತೊ (82; 127ಎ) ಮತ್ತು ಶಕೀಬ್ ಅಲ್ ಹಸನ್ (25; 56ಎ) ಅವರ ಹೋರಾಟವು ತಂಡದ ಗೆಲುವಿಗೆ ಸಾಕಾಗಲಿಲ್ಲ. ಪಂದ್ಯದ ಮೂರನೇ ದಿನವಾದ ಶನಿವಾರ ಬಾಂಗ್ಲಾ ತಂಡವು 4 ವಿಕೆಟ್‌ಗಳಿಗೆ 158 ರನ್ ಗಳಿಸಿತ್ತು.

ಭಾನುವಾರ ಬೆಳಿಗ್ಗೆ ಆತಿಥೇಯ ತಂಡದ ನಾಯಕ ರೋಹಿತ್ ಅವರು ತಮ್ಮ ವೇಗದ ಬೌಲರ್‌ಗಳಾದ ಮೊಹಮ್ಮದ್ ಸಿರಾಜ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರಿಗೆ ಬೌಲಿಂಗ್ ನೀಡಿದರು. ಅವರಿಬ್ಬರೂ ಕ್ರೀಸ್‌ನಲ್ಲಿದ್ದ ಶಾಂತೊ ಮತ್ತು ಶಕೀಬ್ ಅವರನ್ನು ಅಪಾರವಾಗಿ ಕಾಡಿದರು. ಸಿರಾಜ್ ಅವರು ಶಾರ್ಟ್, ಫುಲ್ ಲೆಂಗ್ತ್ ಎಸೆತಗಳ ನಿಖರ ಪ್ರಯೋಗ ನಡೆಸಿದರು. ಬೂಮ್ರಾ ಎಂದಿನಂತೆ ತಮ್ಮ ಗುಡ್‌ಲೆಂಗ್ತ್ ಎಸೆತಗಳ ಮೂಲಕ ಬ್ಯಾಟರ್‌ಗಳ ಸಾಮರ್ಥ್ಯಕ್ಕೆ ಸವಾಲೆಸೆದರು.

ಸೋಲು ತಪ್ಪಿಸಿಕೊಳ್ಳುವುದು ಕಷ್ಟ ಎಂಬ ಅರಿವು ಪ್ರವಾಸಿ ಬಳಗದಲ್ಲಿ ಬಹುತೇಕ ಅರ್ಥವಾಗಿತ್ತು. ಆದರೂ ಶಾಂತೊ ಮತ್ತು ಶಕೀಬ್ ಕೊನೆಯ ಹಂತದ ಪ್ರಯತ್ನ ನಡೆಸಿದರು. ಈ ನಡುವೆ ಸಿರಾಜ್ ಮತ್ತು ಶಾಂತೊ ನಡುವೆ ಬಿರುನುಡಿಗಳ ವಿನಿಮಯವೂ ಆದವು. ಆದರೆ ಇದು ಹೆಚ್ಚು ಹೊತ್ತು ನಡೆಯಲಿಲ್ಲ. ಪಾನೀಯದ ಅಲ್ಪವಿರಾಮದ ನಂತರ ಕಣಕ್ಕಿಳಿದ 38 ವರ್ಷದ ಅಶ್ವಿನ್ ಸ್ಪಿನ್ ಮೋಡಿಯ ಮುಂದೆ ಬ್ಯಾಟರ್‌ಗಳು ತಲೆಬಾಗಿದರು.

ಅಶ್ವಿನ್ ಎಸೆತವನ್ನು ಮುಂದಡಿಯಿಟ್ಟು ಆಡಲು ಯತ್ನಿಸಿದ ಎಡಗೈ ಬ್ಯಾಟರ್ ಶಕೀಬ್ ಬ್ಯಾಕ್‌ವರ್ಡ್ ಶಾರ್ಟ್ ಲೆಗ್‌ನಲ್ಲಿದ್ದ ಯಶಸ್ವಿ ಜೈಸ್ವಾಲ್ ಅವರಿಗೆ ಕ್ಯಾಚ್ ಆದರು. ಇದರೊಂದಿಗೆ (5ಕ್ಕೆ194) ಬಾಂಗ್ಲಾ ತಂಡವು ಸೋಲಿನತ್ತ ವೇಗವಾಗಿ ಸಾಗಿತು.

ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ 37ನೇ ಬಾರಿ ಐದು ವಿಕೆಟ್ ಗೊಂಚಲು ಗಳಿಸಿದರು. ಇದರೊಂದಿಗೆ ಲೆಗ್‌ಸ್ಪಿನ್ ದಂತಕಥೆ ಶೇನ್ ವಾರ್ನ್ ಅವರ ದಾಖಲೆಯನ್ನು ಸರಿಗಟ್ಟಿದರು. ನಾಲ್ಕನೇ ಇನಿಂಗ್ಸ್‌ಗಳಲ್ಲಿ ಇದು ಅಶ್ವಿನ್ ಅವರ ಏಳನೇ ಪಂಚಗುಚ್ಛವಾಗಿದೆ. ಈ ಪಟ್ಟಿಯಲ್ಲಿ ಅವರು ಎರಡನೇ ಸ್ಥಾನವನ್ನು ವಾರ್ನ್ ಮತ್ತು ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಅವರೊಂದಿಗೆ ಹಂಚಿಕೊಂಡರು. ರಂಗನಾ ಹೆರಾತ್ (12) ಮೊದಲ ಸ್ಥಾನದಲ್ಲಿದ್ದಾರೆ.

ಅಶ್ವಿನ್ ಅವರು ಒಂದೇ ಟೆಸ್ಟ್‌ನಲ್ಲಿ ಶತಕ ಮತ್ತು ಐದು ವಿಕೆಟ್ ಸಾಧನೆ ಮಾಡಿದ್ದು ಇದು ನಾಲ್ಕನೇ ಸಲವಾಗಿದೆ. ಇಂಗ್ಲೆಂಡ್‌ನ ಇಯಾನ್ ಬಾಥಮ್ (5) ಮೊದಲ ಸ್ಥಾನ ದಲ್ಲಿದ್ದಾರೆ. ಚೆನ್ನೈನಲ್ಲಿಯೇ ಅಶ್ವಿನ್ ಅವರು ಈ ಸಾಧನೆಯನ್ನು ಎರಡು ಸಲ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರ ಮಡದಿ ಮತ್ತು ಇಬ್ಬರು ಹೆಣ್ಣುಮಕ್ಕಳು ಗಣ್ಯರ ಗ್ಯಾಲರಿಯಲ್ಲಿ ಕುಳಿತು ಪಂದ್ಯ ವೀಕ್ಷಿಸಿದರು.

ಒಟ್ಟು 101 ಟೆಸ್ಟ್ ಪಂದ್ಯಗಳನ್ನು ಆಡಿರುವ ಅಶ್ವಿನ್ 10ನೇ ಸಲ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು.



ರವೀಂದ್ರ ಜಡೇಜ ಅವರನ್ನು ಅಭಿನಂದಿಸಿದ ರಿಷಭ್ ಪಂತ್ —ಪಿಟಿಐ ಚಿತ್ರ

ಸೋಲುಗಳನ್ನು ಹಿಂದಿಕ್ಕಿದ ಭಾರತ!

ಭಾರತ ತಂಡವು ಬಾಂಗ್ಲಾ ಎದುರಿನ ಸರಣಿಯ ಮೊದಲ ಪಂದ್ಯ ಜಯಿಸುವ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ಸೋಲುಗಳನ್ನು ಹಿಂದಿಕ್ಕಿತು!

ಇದುವರೆಗೆ ಒಟ್ಟು 580 ಟೆಸ್ಟ್‌ಗಳನ್ನು ಆಡಿರುವ ಭಾರತ ತಂಡವು 179ರಲ್ಲಿ ಜಯಿಸಿದೆ. 178 ಪಂದ್ಯಗಳಲ್ಲಿ ಸೋತಿತ್ತು. ಸೋಲುಗಳಿಗಿಂತ ಗೆಲುವುಗಳನ್ನು ಹೆಚ್ಚು ದಾಖಲಿಸಿದ ಸಾಧನೆ ಮಾಡಿತು.

ಪಂದ್ಯಗಳು– 580
ಜಯ– 179
ಸೋಲು– 178
ಟೈ– 1
ಡ್ರಾ– 222

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 376 (91.2 ಓವರ್‌ಗಳಲ್ಲಿ) ಬಾಂಗ್ಲಾದೇಶ 149 (47.1 ಓವರ್‌ಗಳಲ್ಲಿ)

ಎರಡನೇ ಇನಿಂಗ್ಸ್: ಭಾರತ 4ಕ್ಕೆ 287 ಡಿಕ್ಲೇರ್ (64 ಓವರ್‌ಗಳಲ್ಲಿ) ಬಾಂಗ್ಲಾದೇಶ: 234 (62.1 ಓವರ್‌ಗಳಲ್ಲಿ) (ಶನಿವಾರ 37.2 ಓವರ್‌ಗಳಲ್ಲಿ 4ಕ್ಕೆ 158

ನಜ್ಮುಲ್ ಸಿ ಬೂಮ್ರಾ ಬಿ ಜಡೇಜ 82 (127ಎ, 4x8, 6x3)
ಶಕೀಬ್ ಸಿ ಜೈಸ್ವಾಲ್ ಬಿ ಅಶ್ವಿನ್ 25 (56ಎ, 4x3)
ಲಿಟ್ಟನ್ ಸಿ ಶರ್ಮಾ ಬಿ ಜಡೇಜ 1 (10ಎ)
ಮೆಹದಿ ಸಿ ಜಡೇಜ ಬಿ ಅಶ್ವಿನ್ 8 (10ಎ, 4x1)
ತಸ್ಕಿನ್ ಸಿ ಸಿರಾಜ್ ಬಿ ಅಶ್ವಿನ್ 5 (4ಎ, 4x1)
ಹಸನ್ ಬಿ ಜಡೇಜ 7 (14ಎ, 4x1)
ನಹೀದ್ ರಾಣಾ ಔಟಾಗದೇ 0 (2ಎ)

ಇತರೆ: 12 (ಬೈ 5, ಲೆಗ್‌ಬೈ 7)

ವಿಕೆಟ್ ಪತನ: 5-194 (ಶಕೀಬ್ ಅಲ್ ಹಸನ್, 51.4), 6-205 (ಲಿಟನ್ ದಾಸ್, 54.4), 7-222 (ಮೆಹದಿ ಹಸನ್ ಮಿರಾಜ್, 57.5), 8-222 (ನಜ್ಮುಲ್ ಹುಸೇನ್ ಶಾಂತೊ, 58.6), 9-228 (ತಸ್ಕಿನ್ ಅಹಮದ್, 59.5), 10-234 (ಹಸನ್ ಮೆಹಮೂದ್, 62.1)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–2–24–1, ಮೊಹಮ್ಮದ್ ಸಿರಾಜ್ 10–5–32–0, ಆಕಾಶ್ ದೀಪ್ 6–0–20–0, ರವಿಚಂದ್ರನ್ ಅಶ್ವಿನ್ 21–0–88–6, ರವೀಂದ್ರ ಜಡೇಜ 15.1–2–58–3

ಪಂದ್ಯದ ಆಟಗಾರ: ರವಿಚಂದ್ರನ್ ಅಶ್ವಿನ್

ಫಲಿತಾಂಶ: ಭಾರತಕ್ಕೆ 280 ರನ್‌ಗಳ ಜಯ, ಸರಣಿ 1–0 ಮುನ್ನಡೆ

ಸಿ.ಪುಟ್ಟಯ್ಯ ಕಪ್ ಫುಟ್‌ಬಾಲ್ ಟೂರ್ನಿ ಇಂದಿನಿಂದ

ಬೆಂಗಳೂರು: ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ (ಬಿಡಿಎಫ್‌ಎ) ಆಶ್ರಯದಲ್ಲಿ ಸಿ.ಪುಟ್ಟಯ್ಯ ಕಪ್ ಫುಟ್‌ಬಾಲ್ ಟೂರ್ನಿ ಸೋಮವಾರ ದಿಂದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕರ್ನಾಟಕದ ಅತ್ಯಂತ ಹಳೆಯ ಟೂರ್ನಿ ಇದಾಗಿದೆ. ಹಾಲಿ ಚಾಂಪಿಯನ್ ಎಫ್‌ಸಿ ಅಗ್ನಿಪುತ್ರ, ಹಾಲಿ ರನ್ನರ್ ಅಪ್ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ಸೇರಿದಂತೆ ಒಟ್ಟು 13 ತಂಡಗಳು ಸೆಣಸಾಟ ನಡೆಸಲಿವೆ.

ಎ ಗುಂಪಿನಲ್ಲಿ ಕೊಡಗು ಎಫ್‌ಸಿ, ಎಫ್‌ಸಿ ರಿಯಲ್ ಬೆಂಗಳೂರು, ರೆಬೆಲ್ಸ್ ಎಫ್‌ಸಿ; ಬಿ ಗುಂಪಿನಲ್ಲಿ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ, ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ, ಕಿಕ್‌ಸ್ಟಾರ್ಟ್ ಎಫ್‌ಸಿ, ರೂಟ್ಸ್ ಎಫ್‌ಸಿ; ಸಿ ಗುಂಪಿನಲ್ಲಿ ಸೌತ್ ಯುನೈಟೆಡ್ ಎಫ್‌ಸಿ, ಎಫ್‌ಸಿ ಅಗ್ನಿಪುತ್ರ, ಪರಿಕ್ರಮ ಎಫ್‌ಸಿ; ಡಿ ಗುಂಪಿನಲ್ಲಿ ಬೆಂಗಳೂರು ಎಫ್‌ಸಿ, ಎಫ್‌ಸಿ ಬೆಂಗಳೂರು ಯುನೈಟೆಡ್, ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡಗಳಿವೆ.

ಉದ್ಘಾಟನಾ ಪಂದ್ಯದಲ್ಲಿ ಕೊಡಗು ಎಫ್‌ಸಿ ಮತ್ತು ಎಫ್‌ಸಿ ರಿಯಲ್ ಬೆಂಗಳೂರು ಮುಖಾಮುಖಿ ಯಾಗಲಿವೆ. ಅ.6ರಂದು ಫೈನಲ್ ಪಂದ್ಯ ನಡೆಯಲಿದೆ. ಈ ಟೂರ್ನಿಯ ಬೆನ್ನಲ್ಲೇ (ಅ.7ರಂದು) ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಆರಂಭವಾಗಲಿದೆ.

ಇಂದಿನ ಪಂದ್ಯಗಳು

ಕೊಡಗು ಎಫ್‌ಸಿ- ಎಫ್‌ಸಿ ರಿಯಲ್ ಬೆಂಗಳೂರು (ಮಧ್ಯಾಹ್ನ 1)

ಪರಿಕ್ರಮ ಎಫ್‌ಸಿ- ಸೌತ್ ಯುನೈಟೆಡ್ ಎಫ್‌ಸಿ (ಸಂಜೆ 4)

ಪೋಲೆಂಡ್ ಪ್ರಶಸ್ತಿ ಗೆದ್ದ ಅನ್ಮೋಲ್



ನವದೆಹಲಿ (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ಅನ್ಮೋಲ್ ಖರ್ಬ್ ಅವರು ಎರಡನೇ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಜಯಿಸಿದರು.

ಭಾನುವಾರ ಲುಬ್ಲಿನ್‌ನಲ್ಲಿ ನಡೆದ ಪೋಲೆಂಡ್ ಅಂತರ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. 17 ವರ್ಷ ವಯಸ್ಸಿನ ಅನ್ಮೋಲ್ ಈಚೆಗಷ್ಟೇ ಬೆಲ್ಜಿಯನ್ ಅಂತರ ರಾಷ್ಟ್ರೀಯ ಪ್ರಶಸ್ತಿ ಗೆದ್ದಿದ್ದರು.

ಫೈನಲ್ ಪಂದ್ಯದಲ್ಲಿ ಅನ್ಮೋಲ್ 21–12, 21–8ರಿಂದ ಸ್ವಿಟ್ಜರ್‌ಲೆಂಡ್‌ನ ಮಿಲೆನಾ ಶಿನಿದರ್ ವಿರುದ್ಧ ಗೆದ್ದರು. ₹4.20 ಲಕ್ಷ ಬಹುಮಾನ ಜಯಿಸಿದರು. ಫರೀದಾಬಾದ್‌ನ ಅನ್ಮೋಲ್ ಅವರು 33 ನಿಮಿಷಗಳ ಫೈನಲ್‌ನಲ್ಲಿ ಜಯಭೇರಿ ಬಾರಿಸಿದರು. ಸತತ ಎರಡು ಪ್ರಶಸ್ತಿ ಜಯಿಸಿದ ಅನ್ಮೋಲ್ ಅವರ ರ‍್ಯಾಂಕಿಂಗ್ ನಲ್ಲಿ ಕೂಡ ಏರಿಕೆಯಾಗಿದೆ. 55 ಸ್ಥಾನಗಳಷ್ಟು ಬಡ್ತಿ ಪಡೆದಿದ್ದಾರೆ. ಸದ್ಯ ಅವರು 165ನೇ ಸ್ಥಾನದಲ್ಲಿದ್ದಾರೆ.

ಅಫ್ಗನ್ ವಿರುದ್ಧ ದಕ್ಷಿಣ ಆಫ್ರಿಕಾಕ್ಕೆ ಜಯ

ಶಾರ್ಜಾ (ಎಎಫ್‌ಪಿ): ಮೊದಲೆರಡು ಪಂದ್ಯಗಳಲ್ಲಿ ಸೋತಿದ್ದ ದಕ್ಷಿಣ ಆಫ್ರಿಕಾ ಭಾನುವಾರ ಸರಣಿಯ ಕೊನೆಯ ಏಕ ದಿನ ಪಂದ್ಯದಲ್ಲಿ ಅಫ್ಗಾನಿಸ್ತಾನ ವಿರುದ್ಧ ಏಳು ವಿಕೆಟ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟಿಂಗ್‌ಗೆ ಇಳಿದ ಅಫ್ಗನ್ ತಂಡವು 34 ಓವರ್‌ಗಳಲ್ಲಿ 169 ರನ್‌ಗೆ ಕುಸಿಯಿತು. ಆರಂಭಿಕ ಆಟಗಾರ ರಹಮಾನುಲ್ಲಾ ಗುರ್ಬಾಜ್ (89;94ಎ) ಹೊರತುಪಡಿಸಿ ಉಳಿದ ಆಟಗಾರರು ನಿರಾಸೆ ಮೂಡಿಸಿದರು. ದಕ್ಷಿಣ ಆಫ್ರಿಕಾ ಏಡೆನ್ ಮಾರ್ಕರಂ ಅವರ (ಔಟಾಗದೇ 69;67ಎ) ಬ್ಯಾಟಿಂಗ್ ಬಲದಿಂದ 33 ಓವರ್‌ಗಳಲ್ಲಿ 3 ವಿಕೆಟ್‌ಗೆ 170 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಅಫ್ಗಾನಿಸ್ತಾನ: 34 ಓವರ್‌ಗಳಲ್ಲಿ 169 (ರಹಮಾನುಲ್ಲಾ ಗುರ್ಬಾಜ್ 89, ಲುಂಗಿ ಗಿಡಿ 22ಕ್ಕೆ 2, ಎನ್. ಪೀಟರ್ 22ಕ್ಕೆ 2, ಆ್ಯಂಡಿಲೆ ಪಿಶುವಾಯೊ 17ಕ್ಕೆ 2). ದಕ್ಷಿಣ ಆಫ್ರಿಕಾ: 33 ಓವರ್‌ಗಳಲ್ಲಿ 3ಕ್ಕೆ 170 (ಏಡನ್ ಮರ್ಕರಂ 69, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 26).

ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ

ಫೈನಲ್‌ಗೆ ಮಹಾರಾಷ್ಟ್ರ, ಬರೋಡಾ

ಬೆಂಗಳೂರು: ಮಹಾರಾಷ್ಟ್ರ ಮತ್ತು ಬರೋಡಾ ತಂಡಗಳು ಇಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಫೈನಲ್ ಪ್ರವೇಶ ಮಾಡಿದವು.

ಸೆಮಿಫೈನಲ್‌ನ ಎರಡೂ ಪಂದ್ಯಗಳು ಡ್ರಾ ಗೊಂಡವು. ಮೊದಲ ಇನಿಂಗ್ಸ್‌ನ ಮುನ್ನಡೆ ಆಧಾರದಲ್ಲಿ ಮಹಾರಾಷ್ಟ್ರ ಮತ್ತು ಬರೋಡಾ ತಂಡಗಳು ಫೈನಲ್‌ಗೆ ಅರ್ಹತೆ ಪಡೆದವು. ಈ ತಂಡಗಳು ಇದೇ 24ರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಹಾರಾಷ್ಟ್ರ ತಂಡವು ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ತಂಡದ ವಿರುದ್ಧ ಡ್ರಾ ಸಾಧಿಸಿತು. ಮೊದಲ ಇನಿಂಗ್ಸ್‌ನಲ್ಲಿ 260 ರನ್‌ಗಳ ಮುನ್ನಡೆ ಪಡೆದಿದ್ದ ಮಹಾರಾಷ್ಟ್ರ ತಂಡವು ಎರಡನೇ ಇನಿಂಗ್ಸ್‌ನಲ್ಲಿ 123 ಓವರ್‌ಗಳಲ್ಲಿ 7 ವಿಕೆಟ್‌ಗೆ 598 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಅರ್ಷಿನ್ ಕುಲಕರ್ಣಿ (150; 144ಎ) ಶತಕ ಗಳಿಸಿ ಸಂಭ್ರಮಿಸಿದರು. ಎರಡನೇ ಇನಿಂಗ್ಸ್‌ನಲ್ಲಿ ಕಾರ್ಯದರ್ಶಿ ಇಲೆವನ್ ತಂಡವು 21 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 101 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಆಲೂರು (1): ಮಹಾರಾಷ್ಟ್ರ: 114.5 ಓವರ್‌ಗಳಲ್ಲಿ 421. ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 54.2 ಓವರ್‌ಗಳಲ್ಲಿ 161. ಎರಡನೇ ಇನಿಂಗ್ಸ್: ಮಹಾರಾಷ್ಟ್ರ: 123 ಓವರ್‌ಗಳಲ್ಲಿ 7ಕ್ಕೆ 598 ಡಿಕ್ಲೇರ್ (ಅರ್ಷಿನ್ ಕುಲಕರ್ಣಿ 150, ಸಚಿನ್ ದಾಸ್ 51, ನಿಖಿಲ್ ನೈಲ್ 57; ಅಧೋಕ್ಷ ಹೆಗ್ಡೆ 188ಕ್ಕೆ 2, ಶ್ರೇಯಸ್ ಗೋಪಾಲ್ 111ಕ್ಕೆ 2, ಕಿಶನ್ ಎಸ್.ಬೆದರೆ 59ಕ್ಕೆ 2). ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 21 ಓವರ್‌ಗಳಲ್ಲಿ 2ಕ್ಕೆ 101 (ವಿಶಾಲ್ ಓನತ್ ಔಟಾಗದೇ 57) **ಫಲಿತಾಂಶ:** ಪಂದ್ಯ ಡ್ರಾ

ಚಿನ್ನಸ್ವಾಮಿ ಕ್ರೀಡಾಂಗಣ: ಮಧ್ಯಪ್ರದೇಶ: 118.1 ಓವರ್‌ಗಳಲ್ಲಿ 325. ಬರೋಡಾ: 127.3 ಓವರ್‌ಗಳಲ್ಲಿ 412. ಎರಡನೇ ಇನಿಂಗ್ಸ್: 46 ಓವರ್‌ಗಳಲ್ಲಿ 7ಕ್ಕೆ 249 ಡಿಕ್ಲೇರ್ (ಶುಭಂ ಶರ್ಮಾ ಔಟಾಗದೇ 91, ಆರ್ಯನ್ ಪಾಂಡೆ 39; ಅತೀತ್ ಸೇಠ್ 35ಕ್ಕೆ 2, ಮಹೇಶ್ ಪಿಥಿಯಾ 77ಕ್ಕೆ 4). ಬರೋಡಾ: 43 ಓವರ್‌ಗಳಲ್ಲಿ 4ಕ್ಕೆ 129 (ಜ್ಯೋತ್ಸ್ನಿಲ್ ಸಿಂಗ್ 34, ಶಿವಾಲಿಕ್ ಶರ್ಮಾ ಔಟಾಗದೇ 71; ಕುಮಾರ್ ಕಾರ್ತಿಕೇಯ 53ಕ್ಕೆ 3). **ಫಲಿತಾಂಶ:** ಪಂದ್ಯ ಡ್ರಾ



ಕರ್ನಾಟಕ ತಂಡವು ಕೆಎಸ್‌ಎಫ್‌ಎ 13 ವರ್ಷದೊಳಗಿನ ಬಾಲಕರ ಸಬ್ ಜೂನಿಯರ್ (ಟೈರ್1) ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ 5–1 ಗೋಲುಗಳಿಂದ ಭಾನುವಾರ ಮಣಿಪುರ ತಂಡವನ್ನು ಮಣಿಸಿ ಪ್ರಶಸ್ತಿ ಗೆದ್ದಿತು. (ಕುಳಿತವರು) ಎಡದಿಂದ ಇ. ಸಂತೋಷ್, ತರುಣ್ ಎಂ., ಶಯಾನ್ ಅರ್ಮಾನ್, ರಿಶಾನ್ ಚೌಧರಿ, ವಿವಾನ್ ಅಗರವಾಲ್, ಜೋರ್ಡಾನ್ ಫೌಲ್ ಮೊಬಿನ್, ಆರಿಜ್ ತಿನ್ವಾಲಾ, ಸೈಯದ್ ಸಫ್ವಾನ್, ಸಿರಿಯನ್ ಶೆಟ್ಟಿ, ಅರ್ವಿಡ್‌ರಿಯನ್ ಸಂವಾಂಕಿ ಲಾಟೊ (ನಿಂತವರು) ಪ್ರಣವ, ಮಿತಾಂಶ್ ಸಾಲಿಯಾನ್, ಶಬರಿವಾಸನ್ ಆರ್, ಎಸ್. ಮೋನಿಶ್, ನಂದಾ (ಸಹಾಯಕ ಕೋಚ್), ಗೋಪಾಲ್ (ಮ್ಯಾನೇಜರ್), ಮಹೇಂದ್ರ ಮೈನ್ ಈಶ್ವರನ್ (ಕೋಚ್), ಟೋನಿ (ಫಿಸಿಯೊ), ಆಯುಷ್ ಕೊಟ್ಟಾರಿ, ಸಹನ್ಯಾ ಸುದ್, ಎನ್. ನೇಹಾಲ್ ಶ್ರೀವಿಠಲ್, ಎನ್. ಅಕ್ಷತ್ ರೆಡ್ಡಿ, ಜಾರ್ಜ್ ಮ್ಯಾಥ್ಯೂ, ಟ್ಸಾಕಿಪ್ ಮತ್ತು ಜೇಷ್ಠ ಗೌಡ ಚಿತ್ರದಲ್ಲಿದ್ದಾರೆ ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ತನುಷ್, ಪ್ರಸಿದ್ಧ ಮಿಂಚು: ಭಾರತ 'ಎ' ತಂಡಕ್ಕೆ ದುಲೀಪ್ ಟ್ರೋಫಿ

ಅನಂತಪುರ (ಪಿಟಿಐ): ತನುಷ್ ಕೋಟ್ಯಾನ್ (47ಕ್ಕೆ3) ಮತ್ತು ಪ್ರಸಿದ್ಧ ಕೃಷ್ಣ (50ಕ್ಕೆ3) ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ ಭಾರತ 'ಎ' ತಂಡ ಭಾನುವಾರ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಭಾರತ 'ಸಿ' ತಂಡವನ್ನು 132 ರನ್‌ಗಳಿಂದ ಸೋಲಿಸಿ ಚಾಂಪಿಯನ್ ಪಟ್ಟಕೇರಿತು.

ಈ ಪಂದ್ಯಕ್ಕೆ ಮೊದಲು 2 ಪಂದ್ಯಗಳಿಂದ 6 ಪಾಯಿಂಟ್ಸ್ ಮಾತ್ರ ಗಳಿಸಿದ್ದ ಮಯಂಕ್ ಅಗರವಾಲ್ ಸಾರಥ್ಯದ 'ಎ' ತಂಡ ಈ ಗೆಲುವಿನಿಂದ ಮೂರು ಪಂದ್ಯಗಳಿಂದ 12 ಪಾಯಿಂಟ್ಸ್ ಕಲೆಹಾಕಿ ಸಂಭ್ರಮಿಸಿತು. ಸಾಯಿ ಸುದರ್ಶನ್ ಅವರ ಹೋರಾಟದ ಶತಕ 'ಸಿ' ತಂಡದ ಪರಾಭವವನ್ನು ತಪ್ಪಿಸಲಾಗಲಿಲ್ಲ.

ಪಂದ್ಯದ ನಾಲ್ಕನೇ ಹಾಗೂ ಅಂತಿಮ ದಿನವಾದ ಭಾನುವಾರ ಗೆಲುವಿಗೆ 350 ರನ್‌ಗಳ ಗುರಿಯೆದುರಿಸಿದ ಭಾರತ 'ಸಿ' ತಂಡ 81.5 ಓವರುಗಳಲ್ಲಿ 217 ರನ್‌ಗಳಿಗೆ ಆಲೌಟ್ ಆಯಿತು. ತನುಷ್, ಪ್ರಸಿದ್ಧ ಅವರಿಗೆ ಬೆಂಬಲ ನೀಡಿದ ಇನ್ನೊಬ್ಬ ವೇಗಿ ಅಕಿಬ್ ಖಾನ್ 26 ರನ್ನಿಗೆ 2 ವಿಕೆಟ್ ಪಡೆದರು.

ಆರಂಭ ಆಟಗಾರನಾಗಿ ಬಡ್ತಿ ಪಡೆದ ವೈಶಾಖ ವಿಜಯಕುಮಾರ್ ರನ್‌ಔಟ್ ಆದರು. ಆಗ ಮೊತ್ತ 36. ನಾಯಕ ಋತುರಾಜ ಗಾಯಕವಾಡ (44, 93ಎ, 4x5) ಮತ್ತು ಸಾಯಿ ಸುದರ್ಶನ್ (111, 206ಎ, 4x12) ಎರಡನೇ ವಿಕೆಟ್‌ಗೆ 77 ರನ್ ಸೇರಿಸಿದರು. ಆದರೆ ನಂತರ ವಿಕೆಟ್‌ಗಳು ನಿಯಮಿತವಾಗಿ ಉರುಳತೊಡಗಿದವು. ಇದಕ್ಕೆ ಮೊದಲು ಭಾರತ 'ಎ' ಎರಡನೇ ಇನಿಂಗ್ಸ್ ಅನ್ನು (ಶನಿವಾರ: 6ಕ್ಕೆ270) 6 ವಿಕೆಟ್‌ಗೆ 282 ರನ್‌ಗಳಾಗಿದ್ದಾಗ ಡಿಕ್ಲೇರ್ ಮಾಡಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಭಾರತ 'ಎ': 297; ಭಾರತ 'ಸಿ': 234; ಎರಡನೇ ಇನಿಂಗ್ಸ್: ಭಾರತ 'ಎ': 66 ಓವರುಗಳಲ್ಲಿ 6 ವಿಕೆಟ್‌ಗೆ 286 ಡಿಕ್ಲೇರ್ಡ್ (ರಿಯಾನ್ ಪರಾಗ್ 73, ಶಾಶ್ವತ್ ರಾವತ್ 53, ಕುಮಾರ ಕುಶಾಗ್ರ 42; ಗೌರವ್ ಯಾದವ್ 68ಕ್ಕೆ4); ಭಾರತ 'ಸಿ': 81.5 ಓವರುಗಳಲ್ಲಿ 217 (ಋತುರಾಜ ಗಾಯಕವಾಡ 44, ಸಾಯಿ ಸುದರ್ಶನ್ 111; ಪ್ರಸಿದ್ಧ ಕೃಷ್ಣ 50ಕ್ಕೆ3, ಅಕಿಬ್ ಖಾನ್ 26ಕ್ಕೆ2, ತನುಷ್ ಕೋಟ್ಯಾನ್ 26ಕ್ಕೆ2). **ಪಂದ್ಯದ ಆಟಗಾರ:** ಶಾಶ್ವತ್ ರಾವತ್



ದುಲೀಪ್ ಟ್ರೋಫಿ ಗೆದ್ದ ಭಾರತ 'ಎ' ತಂಡದ ಆಟಗಾರರ ಸಂಭ್ರಮ –ಎಕ್ಸ್ ಚಿತ್ರ

ಅರ್ಷದೀಪ್ ದಾಳಿಗೆ ಕುಸಿದ 'ಬಿ' ತಂಡ

ಅನಂತಪುರ (ಪಿಟಿಐ): ವೇಗದ ಬೌಲರ್ ಅರ್ಷದೀಪ್ ಸಿಂಗ್ (40ಕ್ಕೆ6) ಮತ್ತು ಆದಿತ್ಯ ಠಾಕ್ರೆ (59ಕ್ಕೆ4) ಅವರ ದಾಳಿಗೆ ಭಾರತ 'ಬಿ' ತಂಡ ತರಗೆಲೆಗಳಂತೆ ಉದುರಿತು.

ಭಾರತ 'ಡಿ' ತಂಡ, ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದ ಅಂತಿಮ ದಿನವಾದ ಭಾನುವಾರ 257 ರನ್‌ಗಳಿಂದ 'ಬಿ' ತಂಡವನ್ನು ಸೋಲಿಸಿ ಸಮಾಧಾನಕರ ಗೆಲುವನ್ನು ಪಡೆಯಿತು. ಇದಕ್ಕೆ ಮೊದಲು 5 ವಿಕೆಟ್‌ಗೆ 244 ರನ್‌ಗಳೊಡನೆ ದಿನದಾಟ ಮುಂದುವರಿಸಿದ ಭಾರತ 'ಡಿ' ತಂಡದ ಎರಡನೇ ಇನಿಂಗ್ಸ್ 305 ರನ್‌ಗಳಿಗೆ ಕೊನೆಗೊಂಡಿತು. ಇದರಿಂದಾಗಿ ಗೆಲುವಿಗೆ ಸುಮಾರು 70 ಓವರುಗಳಲ್ಲಿ 373 ರನ್ ಗಳಿಸುವ ಗುರಿಯನ್ನು 'ಬಿ' ತಂಡ ಎದುರಿಸಿತು. ನಂತರ ಅರ್ಷದೀಪ್ ಮತ್ತು ಆದಿತ್ಯ ಅವರು ಬದಲಾವಣೆಯಿಲ್ಲದೇ ಬೌಲಿಂಗ್ ಮಾಡಿ ಅಭಿಮನ್ಯು ಈಶ್ವರನ್ ಸಾರಥ್ಯದ 'ಬಿ' ತಂಡದ ಆಟಕ್ಕೆ ತೆರೆಯೆಳೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ 'ಡಿ': 349; ಭಾರತ ಬಿ: 282; ಎರಡನೇ ಇನಿಂಗ್ಸ್: ಭಾರತ 'ಡಿ': 58.3 ಓವರುಗಳಲ್ಲಿ 305 (ರಿಕಿ ಭುಯಿ 119; ಮುಕೇಶ್ ಕುಮಾರ್ 98ಕ್ಕೆ4, ನವದೀಪ್ ಸೈನಿ 58ಕ್ಕೆ3); ಭಾರತ ಬಿ: 22.2 ಓವರುಗಳಲ್ಲಿ 115 (ನಿತೀಶ್ ಕುಮಾರ್ ರೆಡ್ಡಿ 40; ಅರ್ಷದೀಪ್ ಸಿಂಗ್ 40ಕ್ಕೆ6, ಆದಿತ್ಯ ಠಾಕ್ರೆ 59ಕ್ಕೆ4). **ಪಂದ್ಯದ ಆಟಗಾರ:** ರಿಕಿ ಭುಯಿ